ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

22ನೇ ವಾರ್ಷಿಕ ವರದಿ

2020–21

ನಂ: 16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ,
ವಸಂತನಗರ, ಬೆಂಗಳೂರು–560 052
ದೂ: 080-22268677/78/79 ಫ್ಯಾಕ್ಸ್: 080-22268667
ಇ–ಮೇಲ್: kerc-ka@nic.in, ವೆಬ್‌ಸೈಟ್: www.karunadu.karnataka.gov.in/kerc

ಪರಿವಿಡಿ

ಕ್ರಮ ಸಂ	ವಿವರಗಳು	ಪುಟ ಸಂ.
1	ಮುನ್ನುಡಿ	
2	ಪರಿಚಯ	3
3	ಆಯೋಗ ಮತ್ತು ಅದರ ಕರ್ತವ್ಯಗಳು	7
4	ಆಯೋಗದ ಕಛೇರಿ ಮತ್ತು ಕಾರ್ಯದರ್ಶಿಯವರ ಕರ್ತವ್ಯಗಳು	11
5	ಆಡಳಿತ	12
6	ಆಯೋಗದ ಆಯವ್ಯಯ ಹಾಗು ವಾಸ್ತವಿಕ ವೆಚ್ಚಗಳು	12
7	ಮಾಹಿತಿ ಹಕ್ಕು ಕಾಯ್ದೆಯ (ಆರ್.ಟಿ.ಐ) ಅನುಷ್ಠಾನ	13
8	ಆಯೋಗದ ಆಡಳಿತದಲ್ಲಿ ಕನ್ನಡದ ಬಳಕೆ	14
9	ವಿದ್ಯುತ್ ಕ್ಷೇತ್ರದ - ಪಕ್ಷಿ ನೋಟ	17
10	ವರ್ಷದ ಪ್ರಮುಖ ಘಟನೆಗಳು	37
11	ಆಯೋಗದ ಸಲಹಾ ಸಮಿತಿ	51
12	ಆಯೋಗದ ನ್ಯಾಯ ನಿರ್ಣಯ ಚಟುವಟಿಕೆಗಳು	57
13	ಗ್ರಾಹಕರ ಕುಂದು ಕೊರತೆಗಳ ಪರಿಹಾರ	65
14	ಆರ್ಥಿಕ ವರ್ಷ 2022 ರ ಕಾರ್ಯಕ್ರಮ ..... ಮುಂಬರುವ ವರ್ಷ	69



ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ: 16 ಸಿ – 1,
ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ,
ವಸಂತನಗರ, ಬೆಂಗಳೂರು –560052.

ಶ್ರೀ ಶಂಭು ದಯಾಳ್ ಮೀನ, ಭಾ.ಆ.ಸೇ. (ನಿವೃತ್ತ)
ಅಧ್ಯಕ್ಷರು

ಮುನ್ನುಡಿ

2020-21ನೇ ಆರ್ಥಿಕ ವರ್ಷದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಇಪ್ಪತ್ತೆರಡನೇ ವಾರ್ಷಿಕ ವರದಿಯನ್ನು ಮಂಡಿಸಲು ನನಗೆ ತುಂಬಾ ಸಂತೋಷವಾಗಿದೆ. ಈ ವರದಿಯಲ್ಲಿ, ವಿದ್ಯುಚ್ಛಕ್ತಿ ಕಾಯ್ದೆ, 2003 ರ ಅಡಿಯಲ್ಲಿನ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿನ ಆಯೋಗದ ಪ್ರಯತ್ನಗಳನ್ನು ಎತ್ತಿ ತೋರಿಸಲು ಶ್ರದ್ಧೆಯಿಂದ ಪ್ರಯತ್ನಿಸಲಾಗಿದೆ.

ವಾರ್ಷಿಕ ವರದಿಯಲ್ಲಿ 2020-21ರ ಆರ್ಥಿಕ ವರ್ಷದಲ್ಲಿ ಆಯೋಗವು ನಡೆಸಿದ ಚಟುವಟಿಕೆಗಳ ಅವಲೋಕನವನ್ನು ಚಿತ್ರಿಸುವುದರ ಜೊತೆಗೆ ಮುಂದಿನ ವರ್ಷದ ಕ್ರಿಯಾ ಯೋಜನೆಯನ್ನು ಸೂಚಿಸಲಾಗಿದೆ. ಇದು ವರ್ಷದಲ್ಲಿನ ಸ್ವೀಕೃತಿ ಮತ್ತು ವಾಸ್ತವಿಕ ವೆಚ್ಚಗಳನ್ನು ಸೂಚಿಸುವ ವಾರ್ಷಿಕ ಆಯವ್ಯಯವನ್ನು ಸಹ ಒಳಗೊಂಡಿರುತ್ತದೆ. 2021-22ರ ಆರ್ಥಿಕ ವರ್ಷದಲ್ಲಿ ಯೋಜಿಸಲಾದ ಕಾರ್ಯಚಟುವಟಿಕೆಗಳನ್ನು ವರದಿಯು ನಿರೂಪಿಸುತ್ತದೆ.

ಆಯೋಗವು ಪ್ರಸರಣ ಪರವಾನಗಿದಾರರಾದ ಕೆಪಿಟಿಸಿಎಲ್ (KPTCL) ಮತ್ತು ಐದು ವಿತರಣಾ ಪರವಾನಗಿದಾರರಾದ ಬೆಸ್ಕಾಮ್ (BESCOM), ಮೆಸ್ಕಾಮ್ (MESCOM), ಸೆಸ್ಕ್ (CESC), ಹೆಸ್ಕಾಮ್ (HESCOM) ಮತ್ತು ಜೆಸ್ಕಾಮ್ (GESCOM), ಒಂದು ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘ-ಎಚ್ ಆರ್ ಇ ಸಿ ಎಸ್ (HRECS), ಎರಡು ವಿಶೇಷ ಆರ್ಥಿಕ ವಲಯಗಳು (ಎಸ್ಇಝಡ್ ಗಳು) ಅಂದರೆ ಎಂಎಸ್ಇಝಡ್ (MSEZ) ಮತ್ತು ಏಕಸ್ (AEQUS) ಎಸ್ಇಝಡ್ ಗೆ ಸಂಬಂಧಿಸಿದಂತೆ 2020-21ರ ಆರ್ಥಿಕ ವರ್ಷಕ್ಕೆ ಅನ್ವಯಿಸುವ ದರ ಆದೇಶಗಳನ್ನು ಹೊರಡಿಸಿದೆ. ಆರ್ಥಿಕ ವರ್ಷದಲ್ಲಿ, ಮೇಲಿನ ಎಲ್ಲಾ ಕಂಪನಿಗಳ ವಾರ್ಷಿಕ ಕಾರ್ಯಕ್ಷಮತೆಯ ಪುನರಾವಲೋಕನವನ್ನು ಸಹ ನಡೆಸಲಾಯಿತು. ಆರ್ಥಿಕ ವರ್ಷ 2019 ರ ವಾರ್ಷಿಕ ಕಾರ್ಯಕ್ಷಮತೆ ಪುನರಾವಲೋಕನ ಮತ್ತು ಕೆಪಿಟಿಸಿಎಲ್, ಎಸ್ಕಾಮ್ ಗಳು ಮತ್ತು ಇತರ ವಿತರಣಾ ಪರವಾನಗಿದಾರರಿಗೆ ಸಂಬಂಧಿಸಿದಂತೆ ಆರ್ಥಿಕ ವರ್ಷ 2021 ರ ವಾರ್ಷಿಕ ಆದಾಯ ಅಗತ್ಯತೆ ಜೊತೆಗೆ ಆರ್ಥಿಕ ವರ್ಷ 2021 ಕ್ಕೆ ಚಿಲ್ಲರೆ ವಿದ್ಯುತ್ ಪೂರೈಕೆ ದರ ಪರಿಷ್ಕರಿಸುವ ಆದೇಶಗಳನ್ನು ಸಹ ಹೊರಡಿಸಲಾಯಿತು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಯೋಗವು, ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ ವಿನಿಯಮಗಳನ್ನು ಹೊರಡಿಸಿದೆ; ವೆಚ್ಚದ ವಸೂಲಾತಿಗಾಗಿ ತಿದ್ದುಪಡಿಗಳು, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುಚ್ಛಕ್ತಿ ಖರೀದಿ ಮತ್ತು ದರ ಆದೇಶದ ಭಾಗವಾಗಿ ಎಲ್ಲಾ ಪರವಾನಿಗೆದಾರರಿಗೆ ಹಲವು ನಿರ್ದೇಶನಗಳನ್ನು ನೀಡಿ ಅವುಗಳ ಅನುಪಾಲನೆಯ ಮೇಲ್ವಿಚಾರಣೆ ಮಾಡಿದೆ.

ಕವಿನಿಆ

ಹಿಂದಿನ ಆಯೋಗಗಳ ಅಧಿಕಾರಾವಧಿಯಲ್ಲಿ, ವಿದ್ಯುತ್ ಕ್ಷೇತ್ರದ ಸುಧಾರಣೆಗೆ ಹಲವಾರು ಹೊಸ ಉಪಕ್ರಮಗಳನ್ನು ಕೈಗೊಳ್ಳಲಾಗಿತ್ತು. ವಿದ್ಯುತ್ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಅತ್ಯತ್ತಮ ಸೇವೆಯನ್ನು ಈ ವರದಿಯಲ್ಲಿ ದಾಖಲಿಸಲು ಹರ್ಷಿಸುತ್ತೇನೆ.

ನನ್ನ ಸಹೋದ್ಯೋಗಿ ಸದಸ್ಯರು, ಆಯೋಗದ ಕಾರ್ಯಗಳನ್ನು ನಿರ್ವಹಿಸುವಲ್ಲಿ ತಮ್ಮ ಸಂಪೂರ್ಣ ಸಹಕಾರವನ್ನು ನೀಡಿರುತ್ತಾರೆ. ಅಧಿಕಾರಿಗಳು, ಸಲಹೆಗಾರರು ಮತ್ತು ಸಿಬ್ಬಂದಿ ಸದಸ್ಯರು ಸಹ ಆಯೋಗದ ಕಾರ್ಯಗಳನ್ನು ನಿರ್ವಹಿಸಲು ನೆರವು ನೀಡಿರುತ್ತಾರೆ. ಸಲಹಾ ಸಮಿತಿಯ ಸದಸ್ಯರು, ಪರವಾನಗಿದಾರರು ಮತ್ತು ಇತರ ಭಾಗಿದಾರರುಗಳಿಂದ ಪಡೆದ ಅಮೂಲ್ಯವಾದ ಸಲಹೆಯನ್ನು ಸಹ ನಾನು ದಾಖಲಿಸಲು ಹರ್ಷಿಸುತ್ತೇನೆ.

ಶ್ರೀ ಶಂಭು ದಯಾಳ್ ಮೀನಾ, ಭಾ.ಆ.ಸೇ (ನಿವೃತ್ತ)
ಅಧ್ಯಕ್ಷರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸಂಕ್ಷಿಪ್ತ ಚರಿತ್ರೆ

2. ಪರಿಚಯ

ಕರ್ನಾಟಕ ವಿದ್ಯುತ್ ಸುಧಾರಣಾ ಅಧಿನಿಯಮ 1999 ರ ನಿಬಂಧನೆಗಳ ಪ್ರಕಾರ 1999 ರಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವನ್ನು (ಕೆಇಆರ್‌ಸಿ) ಸ್ಥಾಪಿಸಲಾಯಿತು ಮತ್ತು 1999 ರ ನವೆಂಬರ್ 15 ರಿಂದ ತನ್ನ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. 2003ರ ವಿದ್ಯುಚ್ಛಕ್ತಿ ಅಧಿನಿಯಮವು ಜಾರಿಗೆ ಬಂದ ಪರಿಣಾಮವಾಗಿ, ಕೆ.ಇ.ಆರ್.ಸಿ ಯು ಕೇಂದ್ರದ ಅಧಿನಿಯಮದ ನಿಬಂಧನೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸುತ್ತಿರುತ್ತದೆ.

2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 105 (1) ರ ಪ್ರಕಾರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ತನ್ನ ಕಾರ್ಯಚಟುವಟಿಕೆಗಳ ಸಾರಾಂಶಗಳನ್ನೊಳಗೊಂಡ ವಾರ್ಷಿಕ ವರದಿಯನ್ನು ಸಿದ್ದಪಡಿಸಿ ಅದರ ಪ್ರತಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡಬೇಕಿರುತ್ತದೆ. ಅಲ್ಲದೆ, 2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 105 (2) ರ ಪ್ರಕಾರ, ಈ ವಾರ್ಷಿಕ ವರದಿಯನ್ನು ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸಬೇಕಿರುತ್ತದೆ.

2020–21ರ ಆರ್ಥಿಕ ವರ್ಷದಲ್ಲಿನ ಆಯೋಗದ ಚಟುವಟಿಕೆಗಳ ಸಾರಾಂಶವನ್ನು ಮತ್ತು ಮುಂಬರುವ ಆರ್ಥಿಕ ವರ್ಷ ಅಂದರೆ 2021–22ರ ಪ್ರಸ್ತಾವಿತ ಕಾರ್ಯಕ್ರಮವನ್ನು ವಾರ್ಷಿಕ ವರದಿಯು ಒಳಗೊಂಡಿದೆ. ಈ ವರದಿಯು 2021–22 ರ ಆರ್ಥಿಕ ವರ್ಷದ ಆಯವ್ಯಯ ಮತ್ತು 2020–21 ರ ಆರ್ಥಿಕ ವರ್ಷದ ವಾಸ್ತವಿಕ ವೆಚ್ಚದ ವಿವರವನ್ನೂ ಸಹ ಒಳಗೊಂಡಿದೆ.

ಆಯೋಗವು ದಿನಾಂಕ 4ನೇ ನವೆಂಬರ್ 2020 ರಂದು, ಆರ್ಥಿಕ ವರ್ಷ 2019 ರ ವಾರ್ಷಿಕ ಕಾರ್ಯಕ್ಷಮತೆ ಪುನರಾವಲೋಕನ, ಆರ್ಥಿಕ ವರ್ಷ 2021 ರ ವಾರ್ಷಿಕ ಆದಾಯ ಅಗತ್ಯತೆ ಜೊತೆಗೆ ಆರ್ಥಿಕ ವರ್ಷ 2021 ಕ್ಕೆ ಚಿಲ್ಲರೆ ವಿದ್ಯುತ್ ಪೂರೈಕೆ ದರ ಪರಿಷ್ಕರಿಸುವ ಆದೇಶಗಳನ್ನು ಹೊರಡಿಸಿದೆ. ಕೋವಿಡ್ - 19 ಸಾಂಕ್ರಾಮಿಕ ರೋಗದ ಕಾರಣ GoI (ಭಾರತ ಸರ್ಕಾರ) / GoK (ಕರ್ನಾಟಕ ಸರ್ಕಾರ) ವಿಧಿಸಿದ ಲಾಕ್ ಡೌನ್ ಸೇರಿದಂತೆ ವಿವಿಧ ನಿರ್ಬಂಧಗಳು / ಕ್ರಮಗಳ ಹಿನ್ನೆಲೆಯಲ್ಲಿ, ರಾಜ್ಯದ ಆರ್ಥಿಕತೆ ಮತ್ತು ಹಣಕಾಸು ಪರಿಸ್ಥಿತಿಯ ಮೇಲಿನ ಪ್ರತಿಕೂಲ ಪರಿಣಾಮ ಉಂಟಾಗಿದ್ದು, ಈ ಪರಿಸ್ಥಿತಿಯನ್ನು ನಿಭಾಯಿಸುವ ಸಲುವಾಗಿ ಆಯೋಗವು ಕಾಲಮಿತಿಯೊಳಗೆ ದರ ಪರಿಷ್ಕರಣೆ ಆದೇಶವನ್ನು ಹೊರಡಿಸಲು ಸಾಧ್ಯವಾಗಲಿಲ್ಲ.

ಆಯೋಗವು ಪ್ರಸಕ್ತ ವರ್ಷದಲ್ಲಿ ಪರವಾನಗಿದಾರರು ಮತ್ತು ಉತ್ಪಾದಕರ ನಡುವಿನ ವಿವಾದಗಳು ಹಾಗೂ ಪರವಾನಗಿದಾರರು ಮತ್ತು ಮುಕ್ತ ಅವಕಾಶದ ಗ್ರಾಹಕರ ನಡುವಿನ ವಿವಾದಗಳಿಗೆ ಸಬಂಧಿಸಿದ 54 ವ್ಯಾಜ್ಯ ಅರ್ಜಿಗಳನ್ನು ನ್ಯಾಯನಿರ್ಣಯ ಮಾಡಿ ವಿಲೇವಾರಿ ಮಾಡಿದೆ. ಆಯೋಗದ ಕಾರ್ಯಚಟುವಟಿಕೆಗಳ ಸಾರಾಂಶವನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

2003ರ ವಿದ್ಯುಚ್ಛಕ್ತಿ ಅಧಿನಿಯಮದ ಪ್ರಕಾರ ಆಯೋಗದ ಕರ್ತವ್ಯಗಳು

ಆಯೋಗದ ಸದಸ್ಯರು ಮತ್ತು ಕಾರ್ಯದರ್ಶಿ



ಹೆಚ್.ಎಂ. ಮಂಜುನಾಥ್

ಗೌರವಾನ್ವಿತ ಸದಸ್ಯರು



ಎಂ.ಡಿ. ರವಿ

ಗೌರವಾನ್ವಿತ ಸದಸ್ಯರು



ರೇಖಾ.ಟಿ

ಕಾರ್ಯದರ್ಶಿ

3. ಆಯೋಗ ಮತ್ತು ಆಯೋಗದ ಕರ್ತವ್ಯಗಳು:

3.1 ಆಯೋಗ

ಆಯೋಗವು ಅಧ್ಯಕ್ಷರಾದ ಶ್ರೀ ಶಂಭು ದಯಾಳ್ ಮೀನಾ, ಐಎಎಸ್ (ನಿವೃತ್ತ) ರವರು ಸೇರಿದಂತೆ ಸದಸ್ಯರಾದ ಶ್ರೀ ಎಚ್.ಎಂ. ಮಂಜುನಾಥ ಮತ್ತು ಶ್ರೀ ಎಂ.ಡಿ.ರವಿ ರವರೊಂದಿಗೆ ಮೂವರು ಸದಸ್ಯರನ್ನು ಒಳಗೊಂಡಿದೆ.

3.2 ಆಯೋಗದ ಕರ್ತವ್ಯಗಳು

1) 2003ರ ವಿದ್ಯುಚ್ಛಕ್ತಿ ಅಧಿನಿಯಮದ 86ನೇ ಪರಿಚ್ಛೇದದ ಪ್ರಕಾರ, ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಗಳು ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬೇಕಿರುತ್ತದೆ:

ಎ) ರಾಜ್ಯದ ಒಳಗಿನ ವಿದ್ಯುತ್ ಉತ್ಪಾದನೆ, ಪ್ರಸರಣ, ವಿತರಣೆ, ಸಗಟು ಮಾರಾಟ ಮತ್ತು ವೀಲಿಂಗ್‌ಗಳಿಗೆ, ಸಗಟು ಪ್ರಮಾಣದ ಅಥವಾ ಚಿಲ್ಲರೆ ಮಾರಾಟಗಳಿಗೆ ಸಂಬಂಧಿಸಿದಂತೆ ಅವಶ್ಯಕತೆಗೆ ಅನುಗುಣವಾಗಿ ದರ ನಿಗದಿಪಡಿಸುವುದು.

ಬಿ) ರಾಜ್ಯದೊಳಗೆ ವಿದ್ಯುತ್ ವಿತರಣೆ ಮತ್ತು ಸರಬರಾಜು ಮಾಡಲು ವಿತರಣಾ ಪರವಾನಿಗೆದಾರರು, ವಿದ್ಯುತ್ ಉತ್ಪಾದನಾ ಕಂಪನಿಗಳಿಂದ ಅಥವಾ ಪರವಾನಿಗೆದಾರರಿಂದ ಅಥವಾ ಇತರೆ ಮೂಲಗಳಿಂದ ವಿದ್ಯುತ್ ಖರೀದಿ ಒಪ್ಪಂದಗಳ ಮೂಲಕ ವಿದ್ಯುಚ್ಛಕ್ತಿ ಖರೀದಿಸುವ ದರವೂ ಸೇರಿದಂತೆ ವಿದ್ಯುಚ್ಛಕ್ತಿ ಖರೀದಿ ಪ್ರಕ್ರಿಯೆಗಳನ್ನು ನಿಯಂತ್ರಿಸುವುದು.

ಸಿ) ರಾಜ್ಯದೊಳಗಿನ ವಿದ್ಯುಚ್ಛಕ್ತಿ ಪ್ರಸರಣ ಮತ್ತು ವೀಃಲಿಂಗ್ ವ್ಯವಸ್ಥೆಯನ್ನು ಸುಗಮಗೊಳಿಸುವುದು;

ಡಿ) ಪ್ರಸರಣ ಪರವಾನಗಿದಾರರು, ವಿತರಣಾ ಪರವಾನಗಿದಾರರು ಮತ್ತು ವಿದ್ಯುತ್ ಮಾರಾಟಗಾರರಾಗಿ ಕಾರ್ಯನಿರ್ವಹಿಸಲು ಬಯಸುವ ವ್ಯಕ್ತಿಗಳಿಗೆ ರಾಜ್ಯದೊಳಗಿನ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ಪರವಾನಗಿಗಳನ್ನು ನೀಡುವುದು;

ಇ) ನವೀಕರಿಸಬಹುದಾದ ಇಂಧನ ಮೂಲಗಳಿಂದ ಮತ್ತು ಸಹ-ಉತ್ಪಾದನೆಗಳಿಂದ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸಲು, ವಿದ್ಯುಚ್ಛಕ್ತಿ ಗ್ರಿಡ್‌ಗೆ ಸಂಪರ್ಕ ಒದಗಿಸುವುದು ಮತ್ತು ಯಾವುದೇ ವ್ಯಕ್ತಿಗೆ ವಿದ್ಯುತ್ ಮಾರಾಟಕ್ಕೆ ಸೂಕ್ತ ಕ್ರಮಗಳನ್ನು ರೂಪಿಸುವುದು ಹಾಗೂ ಒಂದು ವಿದ್ಯುತ್ ಸರಬರಾಜು ಪರವಾನಗಿದಾರನ ವ್ಯಾಪ್ತಿಯ ಒಟ್ಟು ವಿದ್ಯುಚ್ಛಕ್ತಿ ಬಳಕೆಯಲ್ಲಿ ಅಂತಹ ಮೂಲಗಳಿಂದ ವಿದ್ಯುಚ್ಛಕ್ತಿ ಖರೀದಿಸಲು ಶೇಕಡಾವಾರು ಪ್ರಮಾಣವನ್ನು ಸಹ ಅನುಸೂಚಿಸುವುದು.

ಎಫ್) ಪರವಾನಿಗೆದಾರರು ಮತ್ತು ವಿದ್ಯುತ್ ಉತ್ಪಾದನಾ ಕಂಪನಿಗಳ ನಡುವಿನ ವಿವಾದಗಳ ಮೇಲೆ ನ್ಯಾಯ ನಿರ್ಣಯ ಮಾಡುವುದು ಹಾಗೂ ಯಾವುದೇ ವಿವಾದವನ್ನು ಮಧ್ಯಸ್ಥಿಕೆ ಮೂಲಕ ಪರಿಹರಿಸಿಕೊಳ್ಳಲು ಒಪ್ಪಿಸುವುದು;

ಜಿ) ವಿದ್ಯುಚ್ಛಕ್ತಿ ಅಧಿನಿಯಮದ ಉದ್ದೇಶಗಳಿಗಾಗಿ ಶುಲ್ಕ ವಿಧಿಸುವುದು;

ಎಚ್) ಪರಿಚ್ಛೇದ 79ರ ಉಪ-ಪರಿಚ್ಛೇದ (1)ರ ಖಂಡ (ಎಚ್) ರ ಅಡಿಯಲ್ಲಿ ನಿಗದಿಪಡಿಸಿರುವ ವಿದ್ಯುಚ್ಛಕ್ತಿ ಗ್ರಿಡ್ ಸಂಹಿತೆಗೆ ಅನುಗುಣವಾಗಿ ರಾಜ್ಯದ ವಿದ್ಯುಚ್ಛಕ್ತಿ ಗ್ರಿಡ್ ಸಂಹಿತೆಯನ್ನು ಅನುಸೂಚಿಸುವುದು;

ಐ) ಪರವಾನಗಿದಾರರು ಒದಗಿಸಬೇಕಾದ ಸೇವೆಯ ಗುಣಮಟ್ಟ, ನಿರಂತರತೆ ಮತ್ತು ವಿಶ್ವಾಸಾರ್ಹತೆಗೆ ಸಂಬಂಧಿಸಿದಂತೆ ಮಾನದಂಡಗಳನ್ನು ಅನುಸೂಚಿಸುವುದು ಅಥವಾ ಜಾರಿಗೊಳಿಸುವುದು;

ಜೆ) ಅವಶ್ಯಕವೆಂದಾದಲ್ಲಿ, ರಾಜ್ಯದೊಳಗಿನ ವಿದ್ಯುಚ್ಛಕ್ತಿ ಮಾರಾಟಕ್ಕೆ ಮಾರಾಟ ಲಾಭ ಮಿತಿಯನ್ನು ನಿಗದಿಪಡಿಸುವುದು;

ಕೆ) ಈ ಅಧಿನಿಯಮದ ಅಡಿಯಲ್ಲಿ ಗೊತ್ತುಪಡಿಸಲಾದ ಇತರೆ ಕರ್ತವ್ಯಗಳನ್ನು ಆಯೋಗವು ನಿರ್ವಹಿಸುವುದು;

2) ರಾಜ್ಯ ಆಯೋಗವು ಈ ಕೆಳಗಿನ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಬಹುದಾಗಿದೆ, ಅವುಗಳೆಂದರೆ: -

(i) ವಿದ್ಯುಚ್ಛಕ್ತಿ ಉದ್ಯಮದ ಕಾರ್ಯಚಟುವಟಿಕೆಗಳಲ್ಲಿ ಸ್ಪರ್ಧಾತ್ಮಕತೆ, ಕಾರ್ಯದಕ್ಷತೆ ಮತ್ತು ಮಿತವ್ಯಯ ಸಾಧಿಸಲು ಉತ್ತೇಜಿಸುವ ಬಗ್ಗೆ;

(ii) ವಿದ್ಯುಚ್ಛಕ್ತಿ ಉದ್ಯಮದಲ್ಲಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಬಗ್ಗೆ;

(iii) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉದ್ಯಮದ ಮರುಸಂಘಟನೆ ಮತ್ತು ಪುನರ್ರಚನೆ ಬಗ್ಗೆ;

(iv) ವಿದ್ಯುತ್ ಉತ್ಪಾದನೆ, ಪ್ರಸರಣ, ವಿತರಣೆ ಮತ್ತು ವ್ಯಾಪಾರಗಳಿಗೆ ಸಬಂಧಿಸಿದ ವಿಷಯಗಳು ಅಥವಾ ರಾಜ್ಯ ಸರ್ಕಾರವು ರಾಜ್ಯ ಆಯೋಗಕ್ಕೆ ಉಲ್ಲೇಖಿಸಿರುವ ಯಾವುದೇ ಇತರೆ ವಿಷಯದ ಬಗ್ಗೆ.

ರಾಜ್ಯ ಆಯೋಗವು ತನ್ನ ಅಧಿಕಾರವನ್ನು ಚಲಾಯಿಸುವಾಗ ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಹೊಂದಿರಬೇಕು / ಖಚಿತಪಡಿಸಿಕೊಳ್ಳಬೇಕು.

ರಾಜ್ಯ ಆಯೋಗವು 2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 3ರ ಅಡಿಯಲ್ಲಿ ಪ್ರಕಟವಾದ ರಾಷ್ಟ್ರೀಯ ವಿದ್ಯುಚ್ಛಕ್ತಿ ಕಾರ್ಯನೀತಿ, ರಾಷ್ಟ್ರೀಯ ವಿದ್ಯುಚ್ಛಕ್ತಿ ಯೋಜನೆ ಮತ್ತು ವಿದ್ಯುತ್ ದರ ನೀತಿಯ ಮಾರ್ಗಸೂಚಿಗಳಡಿಯಲ್ಲಿ ತನ್ನ ಕಾರ್ಯಗಳನ್ನು ನಿರ್ವಹಿಸಬೇಕಿರುತ್ತದೆ.

ಕಾರ್ಯದರ್ಶಿಯವರ ಕರ್ತವ್ಯಗಳು
ಮತ್ತು
ಆಯೋಗದ ಕಛೇರಿಯ ಕಾರ್ಯಚಟುವಟಿಕೆಗಳು

4. ಆಯೋಗದ ಕಛೇರಿ ಹಾಗೂ ಕಾರ್ಯದರ್ಶಿಯವರ ಕರ್ತವ್ಯಗಳು:

4.1 ಆಯೋಗದ ಕಛೇರಿ:

ವಿದ್ಯುಚ್ಛಕ್ತಿ ಅಧಿನಿಯಮ 2003 ರ ಪರಿಚ್ಛೇದ 84 ರ ಪ್ರಕಾರ ಆಯೋಗದ ಅಧ್ಯಕ್ಷರು ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆ. ಆಯೋಗದ ಕಾರ್ಯದರ್ಶಿಗಳು ಕಾರ್ಯಸಚಿವಾಲಯದ ಮುಖ್ಯಸ್ಥರಾಗಿರುತ್ತಾರೆ.

ಇದಲ್ಲದೆ, ಆಯೋಗದ ಕಚೇರಿಯು ಹಿರಿಯ ಮಟ್ಟದ ಅಧಿಕಾರಿಗಳಾದ ನಿರ್ದೇಶಕರು (ಜಕಾತಿ), ನಿರ್ದೇಶಕರು (ತಾಂತ್ರಿಕ), ಸಲಹೆಗಾರರು (ತಾಂತ್ರಿಕ) ಮತ್ತು ಸಲಹೆಗಾರರು (ಕಾನೂನು) ಇವರುಗಳ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಹೊಂದಿರುತ್ತದೆ. ಇದಲ್ಲದೆ, ಪ್ರಸರಣ, ವಿತರಣೆ, ಜಕಾತಿ ಇತ್ಯಾದಿ ನಿರ್ದಿಷ್ಟ ಕ್ಷೇತ್ರಗಳಲ್ಲಿ ಅಗತ್ಯ ಪರಿಣಿತಿ ಹೊಂದಿರುವ ಖಾಯಂ ಹಾಗೂ ನಿಯೋಜನೆಗೊಂಡ ಉಪ ನಿರ್ದೇಶಕರುಗಳು ಆಯೋಗಕ್ಕೆ ನೆರವು ನೀಡುತ್ತಿದ್ದಾರೆ.

ಆಯೋಗದ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ವಿವರಗಳನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆಯೋಗದ ಸಾಂಸ್ಥಿಕ ನಕ್ಷೆಯನ್ನು ಅನುಬಂಧ – 1 ರಲ್ಲಿ ತೋರಿಸಲಾಗಿದೆ.

4.2 ಕಾರ್ಯದರ್ಶಿಯವರ ಕರ್ತವ್ಯಗಳು

ಕಾರ್ಯದರ್ಶಿಯವರ ಕರ್ತವ್ಯಗಳು ಈ ಕೆಳಗಿನಂತಿವೆ:

(ಎ) ಆಯೋಗದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಕರ್ತವ್ಯ ನಿರ್ವಹಣೆಯ ಮೇಲುಸ್ತುವಾರಿ ಮಾಡುವುದು ಮತ್ತು ಮಾರ್ಗದರ್ಶನ ನೀಡುವುದು;

(ಬಿ) ಆಯೋಗದ ಕಾರ್ಯಗಳನ್ನು ನಿರ್ವಹಿಸುವಲ್ಲಿ ಆಯೋಗದ ಮುಂದೆ ಪ್ರತಿಯೊಂದು ಪ್ರಕರಣದಲ್ಲೂ ವಿವಿಧ ಕಕ್ಷಿದಾರರಿಂದ ಮಂಡಿಸಲಾದ ಎಲ್ಲಾ ಮನವಿಗಳ ಸಂಕ್ಷಿಪ್ತ ಟಿಪ್ಪಣಿಗಳು ಮತ್ತು ಸಾರಾಂಶಗಳನ್ನು ಸಿದ್ಧಪಡಿಸುವುದು ಅಥವಾ ಸಿದ್ಧಪಡಿಸಲಾಗುವಂತೆ ಮಾಡುವುದು / ತಯಾರಿಸುವುದು;

(ಸಿ) ಆಯೋಗವು ಚಲಾಯಿಸಬಹುದಾದ ಅಧಿಕಾರಗಳಿಗೆ ಸಂಬಂಧಿಸಿದ ಕೆಲಸಗಳಲ್ಲಿ ಆಯೋಗಕ್ಕೆ ನೆರವಾಗುವುದು;

(ಡಿ) ಆಯೋಗವು ಹೊರಡಿಸಿದ ಆದೇಶಗಳ ಜಾರಿಯನ್ನು ಖಚಿತಪಡಿಸಿಕೊಳ್ಳುವುದು;

(ಇ) ಅಧಿನಿಯಮದ ಅಡಿಯಲ್ಲಿ ಆಯೋಗದ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ಪರಿಗಣಿಸಬಹುದಾದಂತಹ ಮಾಹಿತಿಯನ್ನು ಆಯೋಗದ ನಿರ್ದೇಶನದಂತೆ ರಾಜ್ಯ ಸರ್ಕಾರ ಅಥವಾ ಇತರ ಕಚೇರಿಗಳು, ಕಂಪನಿಗಳು ಅಥವಾ

ಸಂಸ್ಥೆಗಳು ಅಥವಾ ಇತರೆ ವ್ಯಕ್ತಿಗಳಿಂದ ಪಡೆದು, ಆಯೋಗದ ಮುಂದೆ ಅಂತಹ ಮಾಹಿತಿಯನ್ನು ಮಂಡಿಸುವುದು; ಮತ್ತು

(ಎಫ್) ಆಯೋಗದ ಮೊಹರು ಹಾಗೂ ದಾಖಲೆ ದಸ್ತಾವೇಜುಗಳನ್ನು ತನ್ನ ಸುಪರ್ದಿನಲ್ಲಿ ಇರಿಸಿಕೊಳ್ಳುವುದು;

5. ಆಡಳಿತ

ಆಯೋಗದ ಕಛೇರಿಯು, ಖಾಯಂ ಸಿಬ್ಬಂದಿಗಳ ಜೊತೆಗೆ ನಿಯೋಜನೆ ಮತ್ತು ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರನ್ನು ಹೊಂದಿದೆ. ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ 58 ಇದ್ದು, ಆರ್ಥಿಕ ವರ್ಷ 2020 - 21 ರ ಅಂತ್ಯದಲ್ಲಿದ್ದಂತೆ ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸದಸ್ಯರ ಒಟ್ಟು ಸಂಖ್ಯೆ 50. ಅದರ ವಿವರ ಈ ಕೆಳಗಿನಂತಿದೆ;

ಎ)	ಖಾಯಂ ಸಿಬ್ಬಂದಿಗಳು	18
ಬಿ)	ನಿಯೋಜನೆಯ ಅಡಿಯಲ್ಲಿರುವ ಅಧಿಕಾರಿಗಳು / ಸಿಬ್ಬಂದಿ	08
ಸಿ)	ಗುತ್ತಿಗೆ ಆಧಾರದಲ್ಲಿರುವ ನೌಕರರು	16
ಡಿ)	ಹೊರಗುತ್ತಿಗೆ ಆಧಾರದಲ್ಲಿರುವ ನೌಕರರು	08
ಇ)	ಖಾಲಿ	8

6. ಆಯೋಗದ ಆಯವ್ಯಯ ಹಾಗೂ ವಾಸ್ತವಿಕ ವೆಚ್ಚಗಳು:

ಆರ್ಥಿಕ ವರ್ಷ 2020 - 21ನೇ ಸಾಲಿನ, ಆಯೋಗದ ಪ್ರಸ್ತಾವಿತ ಆಯವ್ಯಯ ಹಾಗೂ ವಾಸ್ತವಿಕ ವೆಚ್ಚಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

ರೂ. ಲಕ್ಷಗಳಲ್ಲಿ

ಪ್ರಮುಖ ವೆಚ್ಚ ಶೀರ್ಷಿಕೆ	2020–21 ರ ಪ್ರಸ್ತಾವಿತ ಆಯವ್ಯಯ	2020–21ರ ವೆಚ್ಚ	ಆಯವ್ಯಯ ಅಂದಾಜಿನಲ್ಲಿನ ವ್ಯತ್ಯಯ
ಸಿಬ್ಬಂದಿ ವೆಚ್ಚಗಳು	682.00	597.15	84.85
ಕಛೇರಿ ವೆಚ್ಚಗಳು	478.41	312.32	166.09
ಮೊತ್ತ	**1160.41**	**909.47**	**250.94**

ರಾಜ್ಯ ಸರ್ಕಾರವು ಆರ್ಥಿಕ ವರ್ಷ 2020 - 21 ರಲ್ಲಿ ಒದಗಿಸಿದ 331 ಲಕ್ಷ ರೂಪಾಯಿಗಳ ಅನುದಾನವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲಾಗಿದೆ. ಸ್ವೀಕರಿಸಿದ ಅನುದಾನಕ್ಕಿಂತ ಹಿಚ್ಚುವರಿ ವೆಚ್ಚಗಳನ್ನು ಸದರಿ ವರ್ಷದಲ್ಲಿ ಆಯೋಗವು ಸಂಗ್ರಹಿಸಿದ ವಾರ್ಷಿಕ ಪರವಾನಿಗೆ / ದರ ಅರ್ಜಿಗಳ ಶುಲ್ಕ ಮತ್ತು ಇತರೆ ಶುಲ್ಕ / ಸ್ವೀಕೃತಿಗಳಿಂದ ಭರಿಸಲಾಗಿದೆ.

ಆರ್ಥಿಕ ವರ್ಷ 2021 - 22 ರ ವಾರ್ಷಿಕ ಆಯವ್ಯಯ ಅಂದಾಜಿನ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

ಆ.ವ 2021 – 22 ರ ಆಯವ್ಯಯ ಅಂದಾಜಿನ ವಿವರಗಳು		
ಕ್ರಮ ಸಂಖ್ಯೆ	ವಿವರಗಳು	ರೂ. ಲಕ್ಷಗಳಲ್ಲಿ
1	2021-22 ರ ಅಂದಾಜು ಕಂದಾಯ ವೆಚ್ಚ	1334.26
2	2021-22 ರ ಅಂದಾಜಿಸಿದ ಕಂದಾಯ ಸ್ವೀಕೃತಿಗಳು	1134.20
3	ಸರ್ಕಾರದಿಂದ ಕೋರಿದ ಆಯವ್ಯಯ	200.06

7. ಮಾಹಿತಿ ಹಕ್ಕು ಕಾಯ್ದೆಯ ಜಾರಿ

2005ರ ಆರ್ ಟಿಐ ಕಾಯ್ದೆ ಅಡಿಯಲ್ಲಿ 2020-21ರಲ್ಲಿ ಸ್ವೀಕರಿಸಿದ ಮತ್ತು ವಿಲೇವಾರಿ ಮಾಡಲಾದ ಅರ್ಜಿಗಳು ಮತ್ತು ಮನವಿಗಳ ಸ್ಥಿತಿಗತಿ ಕೆಳಗಿನಂತಿದೆ:

01.04.2020 ರಂದು ಬಾಕಿ ಇದ್ದ ಅರ್ಜಿಗಳ ಸಂಖ್ಯೆ	ಸ್ವೀಕರಿಸಲ್ಪಟ್ಟ ಅರ್ಜಿಗಳ ಸಂಖ್ಯೆ	ವಿಲೇವಾರಿ ಮಾಡಲ್ಪಟ್ಟ ಅರ್ಜಿಗಳ ಸಂಖ್ಯೆ	31.03.2021 ರಂದು ಬಾಕಿ ಇರುವ ಅರ್ಜಿಗಳ ಸಂಖ್ಯೆ	ವಸೂಲಾದ ಶುಲ್ಕ ರೂ.	ಸ್ವೀಕರಿಸಲ್ಪಟ್ಟ ಮನವಿಗಳ ಸಂಖ್ಯೆ	ವಿಲೇವಾರಿ ಮಾಡಲಾದ ಮನವಿಗಳ ಸಂಖ್ಯೆ
03	42	45	ಇಲ್ಲ	290	01	01

ಸಾರ್ವಜನಿಕ ಮಾಹಿತಿ ಅಧಿಕಾರಿ:

ಗೊತ್ತುಪಡಿಸಲಾದ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಅವರ ವಿಳಾಸ ಕೆಳಕಂಡಂತೆಇದೆ:

ಉಪ ನಿರ್ದೇಶಕರು (ಆಡಳಿತ) / ಸಾರ್ವಜನಿಕ ಮಾಹಿತಿ ಅಧಿಕಾರಿ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ,

ವಸಂತನಗರ, ಬೆಂಗಳೂರು – 560052.

ದೂರವಾಣಿ ಸಂಖ್ಯೆ: 080–22268677/78/79

ಫ್ಯಾಕ್ಸ್ ಸಂಖ್ಯೆ: 080–22268667

ಇ–ಮೇಲ್ : kerc-ka@nic.in ವೆಬ್‌ಸೈಟ್ : www.karunadu. karnataka.gov.in/kerc

ಗೊತ್ತುಪಡಿಸಲಾದ ಮೊದಲ ಮೇಲ್ಮನವಿ ಪ್ರಾಧಿಕಾರ ಮತ್ತು ಅವರ ವಿಳಾಸ ಹೀಗಿದೆ:

ಕಾರ್ಯದರ್ಶಿ,

16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ,

ವಸಂತನಗರ, ಬೆಂಗಳೂರು – 560052.

ದೂರವಾಣಿ ಸಂಖ್ಯೆ: 080–22268677/78/79

ಫ್ಯಾಕ್ಸ್ ಸಂಖ್ಯೆ: 080–22268667

ಇ–ಮೇಲ್ : kerc-ka@nic.in ವೆಬ್‌ಸೈಟ್ : www.karunadu. karnataka.gov.in/kerc

8. ಆಯೋಗದ ಆಡಳಿತದಲ್ಲಿ ಕನ್ನಡದ ಅನುಷ್ಠಾನ:

ಆಯೋಗದ ಕಛೇರಿಯಲ್ಲಿ ಕನ್ನಡವನ್ನು ಸಂಪರ್ಕ ಭಾಷೆಯಾಗಿ ಬಳಸಲಾಗುತ್ತಿದೆ. ವಾರ್ಷಿಕ ವರದಿಯನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟಿಸಲಾಗಿದೆ.

ಸಾರ್ವಜನಿಕ ಹಿತಾಸಕ್ತಿಯ ಎಲ್ಲಾ ವಿನಿಯಮಗಳು ಮತ್ತು ಪ್ರಕಟಣೆಗಳನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸಲಾಗುತ್ತಿದೆ. ಕನ್ನಡವನ್ನು ಅಧಿಕೃತ ಭಾಷೆಯಾಗಿ ಅನುಷ್ಠಾನಗೊಳಿಸಲು ಆಯೋಗವು ಗಂಭೀರವಾಗಿ, ನಿರಂತರ ಪ್ರಯತ್ನಗಳನ್ನು ನಡೆಸುತ್ತಿದೆ.

ಆರ್ಥಿಕ ವರ್ಷ 2020 – 21 ರಲ್ಲಿ ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆ – ಮೇಲ್ನೋಟ

9. ವಿದ್ಯುತ್ ಕ್ಷೇತ್ರ - ಒಂದು ಅವಲೋಕನ

9.1 ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಪರಿಸ್ಥಿತಿ

ಕೇಂದ್ರದ ಯೋಜನೆಗಳಲ್ಲಿನ ರಾಜ್ಯದ ಪಾಲು ಸೇರಿದಂತೆ 31.03.2021 ರಲ್ಲಿ ಇರುವಂತೆ ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯವನ್ನು ಕೆಳಗೆ ಸೂಚಿಸಲಾಗಿದೆ: -


31.03.2021 ರಂದು ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯ

(ಅಂಕಿಗಳು ಮೆ.ವ್ಯಾಟ್‌ನಲ್ಲಿ)

ಮೂಲ	ಜಲ ವಿದ್ಯುತ್	ಶಾಖೋತ್ಪನ್ನ	ನವೀಕರಿಸಬಹುದಾದ ಇಂಧನ ಮೂಲಗಳು	ಒಟ್ಟು
ಕೆಪಿಸಿಎಲ್	3652	5045		8697
ಖಾಸಗಿ ಉತ್ಪಾದನಾ ಕಂಪನಿಗಳು (ಯು.ಪಿ.ಸಿ.ಎಲ್)		1080		1080
ಸಹ–ಉತ್ಪಾದನೆ, ಕ್ಯಾಪ್ಟೀವ್ ಮತ್ತು ನವೀಕರಿಸಬಹುದಾದ ಇಂಧನ			15130	15130
ಸಿ.ಜಿ.ಎಸ್		4966		4966
ಇತರೆ	131.40			131.40
ರಾಜ್ಯದ ಒಟ್ಟು ಸ್ಥಾಪಿತ ಸಾಮರ್ಥ್ಯ	**3783.40**	**11091**	**15130**	**30004.40**

ಮೂಲ: ಎಸ್.ಎಲ್.ಡಿ.ಸಿ / ಕೆ.ಆರ್.ಇ.ಡಿ.ಎಲ್. / ಕೆ.ಪಿ.ಸಿ.ಎಲ್

31.03.2021 ರಂದು ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯ



9.2 ಕರ್ನಾಟಕದಲ್ಲಿ ಹಸಿರು ವಿದ್ಯುತ್

ರಾಜ್ಯದಲ್ಲಿ ಮಾರ್ಚ್ 2021 ರಲ್ಲಿ ಇರುವಂತೆ ಹಸಿರು (ನವೀಕರಿಸಬಹುದಾದ ಇಂಧನ ಮೂಲಗಳ) ವಿದ್ಯುತ್ ಉತ್ಪಾದನೆಯ ಸಂಭಾವ್ಯ ಸಾಮರ್ಥ್ಯ, ಸ್ಥಾಪಿತ ಸಾಮರ್ಥ್ಯ ಮತ್ತು ಉದ್ದೇಶಿಸಿದ ಸಾಮರ್ಥ್ಯ ಹೆಚ್ಚಳದ ವಿವರ ಈ ಕೆಳಗಿನಂತಿವೆ:

ಕರ್ನಾಟಕದಲ್ಲಿ ಹಸಿರು ವಿದ್ಯುತ್‌ನ ಸಾಮರ್ಥ್ಯ

(ಅಂಕಿಗಳು ಮೆ.ವ್ಯಾಟ್‌ನಲ್ಲಿ)

ಕ್ರಮ ಸಂಖ್ಯೆ	ನವೀಕರಿಸಬಹುದಾದ ಇಂಧನ ಮೂಲಗಳು	ಹಂಚಿಕೆಯಾದ ಸಾಮರ್ಥ್ಯ	ಚಾಲನೆಯಾದ ಸಾಮರ್ಥ್ಯ	ರದ್ದಾದ ಸಾಮರ್ಥ್ಯ	ಚಾಲನೆಗೊಳಿಸಬೇಕಾದ ಬಾಕಿ ಹಂಚಿಕೆಯ ಸಾಮರ್ಥ್ಯ
1	ಪವನ	19059.57	4967.34	8804.76	5287.47
2	ಕಿರು ಜಲ	3010	903.46	767.01	1339.53
3	ಸೌರಶಕ್ತಿ	9964.44	7389.01	583	1992.43
4	ಸಹ ಉತ್ಪಾದನೆ	2212.65	1731.16		481.49
5	ಜೈವಿಕ ಇಂಧನ	395.13	139.03		256.1
6	ಮುನಿಸಿಪಲ್ ತ್ಯಾಜ್ಯದಿಂದ ವಿದ್ಯುತ್	51			51
ಒಟ್ಟು		**34692.79**	**15130**	**10154.77**	**9408.02**

ಮೂಲ: ಕೆ.ಆರ್.ಇ.ಡಿ.ಎಲ್. ವೆಬ್ ಸೈಟ್

9.3 ರಾಜ್ಯದಲ್ಲಿ ವಿದ್ಯುತ್ ಪ್ರಸರಣ ವ್ಯವಸ್ಥೆ

ರಾಜ್ಯದಲ್ಲಿ ವಿದ್ಯುತ್ ಪ್ರಸರಣವನ್ನು ರಾಜ್ಯ ಪ್ರಸರಣ ನಿಗಮ (ಎಸ್‌ಟಿಯು) ಅಂದರೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ [ಕೆ.ಪಿ.ಟಿ.ಸಿ.ಎಲ್ / ಕ.ವಿ.ಪ್ರ.ನಿ.ನಿ] ನಿರ್ವಹಿಸುತ್ತಿದೆ.

31.03.2021 ರಲ್ಲಿ ಇದ್ದಂತೆ ರಾಜ್ಯದಲ್ಲಿನ ಪ್ರಸರಣ ವ್ಯವಸ್ಥೆಯಲ್ಲಿನ ಒಂದು ಮೇಲ್ನೋಟವನ್ನು ಕೆಳಗೆ ತೋರಿಸಲಾಗಿದೆ:

ವೋಲ್ಟೇಜ್ ಮಟ್ಟ ಕೆ.ವಿ.ಯಲ್ಲಿ	ವಿದ್ಯುತ್ ಕೇಂದ್ರಗಳ ಸಂಖ್ಯೆ	ಪ್ರಸರಣ ಮಾರ್ಗದ ಉದ್ದಳತೆ ಸರ್ಕ್ಯೂಟ್ ಕಿ.ಮೀ.ಗಳಲ್ಲಿ
400	08	3701.34
220	114	12188.20
110	444	11175.78
66	692	11775.67
ಒಟ್ಟು	**1258**	**38840.99**

ಮೂಲ: ಕವಿಪ್ರನಿನಿ ವೆಬ್ ಸೈಟ್ *33 ಕೆ.ವಿ ವ್ಯವಸ್ಥೆಯನ್ನು ವಿಸಕಂ ಗಳು ನಿರ್ವಹಿಸುತ್ತಿವೆ

ಆರ್ಥಿಕ ವರ್ಷ 2021 ರ ಅವಧಿಯಲ್ಲಿ, ಕವಿಪ್ರನಿನಿಯು 26.03.2021 ರಂದು 14367 ಮೆಗಾವ್ಯಾಟ್‌ನಷ್ಟು ಅತಿ ಹೆಚ್ಚು ಗರಿಷ್ಠ ವಿದ್ಯುತ್ ಹೊರೆಯನ್ನು ನಿರ್ವಹಿಸಿದೆ ಮತ್ತು 27.03.2021 ರಂದು 275 ಎಂಯುನಷ್ಟು ಗರಿಷ್ಠ ದೈನಂದಿನ ವಿದ್ಯುತ್ ಬಳಕೆಯನ್ನು ದಾಖಲಿಸಿದೆ.

9.4 ರಾಜ್ಯದಲ್ಲಿನ ವಿದ್ಯುತ್ ವಿತರಣಾ ವ್ಯವಸ್ಥೆ:

ರಾಜ್ಯದಲ್ಲಿ ಬೆಲ್ಲರೆ ಸರಬರಾಜು ಸೇರಿದಂತೆ ವಿದ್ಯುತ್ ವಿತರಣೆಯನ್ನು ಐದು ವಿದ್ಯುತ್ ವಿತರಣಾ ಕಂಪನಿಗಳು (ಎಸ್ಕಾಮ್) ನಿರ್ವಹಿಸುತ್ತಿವೆ. ಇದಲ್ಲದೆ, ಒಂದು ಗ್ರಾಮೀಣ ವಿದ್ಯುತ್ ಸಹಕಾರ ಸಂಘ ಮತ್ತು ಎರಡು ವಿಶೇಷ ಆರ್ಥಿಕ ವಲಯಗಳು ಸಹ ವಿತರಣಾ ಪರವಾನಗಿದಾರರಾಗಿ ಕಾರ್ಯನಿರ್ವಹಿಸುತ್ತಿವೆ.

1. ಬೆಸ್ಕಾಂನ ವಿತರಣಾ ವ್ಯಾಪ್ತಿಯು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳನ್ನು ಒಳಗೊಂಡಿದೆ.
2. ಮೆಸ್ಕಾಂನ ವಿತರಣಾ ವ್ಯಾಪ್ತಿಯು ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಒಳಗೊಂಡಿದೆ.
3. ಸೆಸ್ಕ್ ನ ವಿತರಣಾ ವ್ಯಾಪ್ತಿಯು ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳನ್ನು ಒಳಗೊಂಡಿದೆ.
4. ಹೆಸ್ಕಾಂನ ವಿತರಣಾ ವ್ಯಾಪ್ತಿಯು ಬಾಗಲಕೋಟೆ, ಬೆಳಗಾವಿ, ವಿಜಯಪುರ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ.
5. ಜೆಸ್ಕಾಂನ ವಿತರಣಾ ವ್ಯಾಪ್ತಿಯು ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಿದೆ.
6. ಎಚ್ಆರ್ ಇಸಿಎಸ್ ನ ವಿತರಣಾ ಪ್ರದೇಶವು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕನ್ನು ಒಳಗೊಂಡಿದೆ.
7. ಎಂಎಸ್ಇಝಡ್, ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರತ್ಯೇಕ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದೆ.
8. ಏಕಸ್ ಎಸ್ಇಝಡ್, ಬೆಳಗಾವಿ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರತ್ಯೇಕ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

31.03.2021 ರಲ್ಲಿ ಇದ್ದಂತೆ ರಾಜ್ಯದಲ್ಲಿನ ವಿದ್ಯುತ್ ವಿತರಣಾ ವ್ಯವಸ್ಥೆಯ ಪಕ್ಷಿನೋಟ ಮುಂದಿನಂತಿದೆ:

ಕ್ರ ಸಂ.	ವಿವರಗಳು (ದಿನಾಂಕ : 31-03-2021 ರಂದು ಇದ್ದಂತೆ)		ಬೆಸ್ಕಾಂ	ಮೆಸ್ಕಾಂ	ಸೆಸ್ಕ್	ಹೆಸ್ಕಾಂ	ಜೆಸ್ಕಾಂ	ಹುಕ್ಕೇರಿ ಆರ್ ಇಸಿಎಸ್	ಒಟ್ಟು
1.	ವಿಸ್ತೀರ್ಣ	ಚ.ಕಿಮೀ	41092	24029	27773	54513	43861	991.49	192259.49
2.	ಜಿಲ್ಲೆಗಳು	ಸಂಖ್ಯೆಗಳು	8	4	5	7	6	0	30
3.	ತಾಲ್ಲೂಕುಗಳು	ಸಂಖ್ಯೆಗಳು	46	29	29	49	49	1	203
4.	ಜನಸಂಖ್ಯೆ	ಲಕ್ಷಗಳಲ್ಲಿ	207	61.55	81.55	148	112	4	614.1
5.	ಗ್ರಾಹಕರು	ಲಕ್ಷಗಳಲ್ಲಿ	123.65	24.43	32.94	52.9	32.65	1.28	267.85
6.	ವಿದ್ಯುತ್ ಬಳಕೆ	ಮಿ.ಯೂ	27835	5244	6407	11023	7184	275.66	57968.66
7.	ವಲಯ	ಸಂಖ್ಯೆಗಳು	4		2	2	2		10
8.	ವಿದ್ಯುತ್ ವಿತರಣಾ ಪರಿವರ್ತಕ ಕೇಂದ್ರಗಳು	ಸಂಖ್ಯೆಗಳು	381103	81891	139942	223601	110114	2764	939415

9.	ಆಸ್ತಿಗಳು	ರೂ. ಕೋಟಿಗಳಲ್ಲಿ	25419	5848	7707.28	14742	9622	253.04	63591.32
10.	ಹೆಚ್.ಟಿ. ಮಾರ್ಗಗಳು	ಸರ್ಕೀಟ್ ಕಿಮೀ	114640	42359	186762	87346	70964	1558	503629.2
11.	ಎಲ್.ಟಿ. ಮಾರ್ಗಗಳು	ಸರ್ಕೀಟ್ ಕಿಮೀ	174581	85165	354360	136563	90427	4553	845649.85
12.	ಒಟ್ಟು ನೌಕರರ ಸಂಖ್ಯೆ								
ಎ	ಮಂಜೂರಾಗಿರುವುದು	ಸಂಖ್ಯೆಗಳು	24756	9274	10460	16928	10156	330	71904
ಬಿ	ಕಾರ್ಯ ನಿರ್ವಹಿಸುತ್ತಿರುವುದು	ಸಂಖ್ಯೆಗಳು	15440	5397	6811	9740	7197	108	44693
13.	ಕಂದಾಯ ವಸೂಲಾತಿ	ರೂ. ಕೋಟಿಗಳಲ್ಲಿ	21171	3717	4297	7855	5113	181.16	42334.16

9.4.1 ಮೂಲವಾರು ವಿದ್ಯುತ್ ಉತ್ಪಾದನೆ:

ಆ.ವ. 2021 ರಲ್ಲಿ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಬೇಡಿಕೆಯನ್ನು ಪೂರೈಸಿದ ಮೂಲವಾರು ವಿದ್ಯುತ್ ಉತ್ಪಾದನೆಯ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಮೂಲ	ವಿದ್ಯುತ್ ಮಿ. ಯೂ.*
ಕೆ.ಪಿ.ಸಿ.ಎಲ್‌ನ ಜಲ ವಿದ್ಯುತ್	11396.97
ಕೆ.ಪಿ.ಸಿ.ಎಲ್‌ನ ಶಾಖೋತ್ಪನ್ನ	33106.68
ಕೇಂದ್ರೀಯ ವಿದ್ಯುತ್ ಉತ್ಪಾದನಾ ಸ್ಥಾವರಗಳು	27248.15
ಪ್ರಮುಖ ಸ್ವತಂತ್ರ ವಿದ್ಯುತ್ ಉತ್ಪಾದನಾ ಸ್ಥಾವರಗಳು	7482.78
ನವೀಕರಿಸಬಹುದಾದ ಇಂಧನ ಮೂಲಗಳು	20911.73
ಇತರೆ (ಟಿಬಿಎಚ್‌ಇಎಸ್, ಜುರಾಲ)	189.17
ಒಟ್ಟು	**100335.48**

* ತಾತ್ಕಾಲಿಕ ದತ್ತಾಂಶ ಎಸ್.ಎಲ್.ಡಿ.ಸಿ / ಪಿ.ಸಿ.ಕೆ.ಎಲ್ ಒದಗಿಸಿದಂತೆ

9.4.2 ಆರ್ಥಿಕ ವರ್ಷ 2016 ರಿಂದ 2020 ರವರೆಗೆ ರಾಜ್ಯದಲ್ಲಿ ವಿದ್ಯುತ್ ಬಳಕೆ:

ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಆರ್.ಇ.ಸಿ.ಎಸ್ ಮಾಡಿದ ಪ್ರವರ್ಗವಾರು ವಿದ್ಯುತ್ ಮಾರಾಟದ ವಿವರಗಳು ಈ ಮುಂದಿನಂತಿವೆ:

ಪ್ರವರ್ಗ	ಗ್ರಾಹಕ ಪ್ರವರ್ಗ	ಅ.ವ.16		ಅ.ವ.17		ಅ.ವ.18		ಅ.ವ.19		ಅ.ವ.20	
		ಸ್ಥಾಪನೆಗಳ ಸಂಖ್ಯೆ	ವಿದ್ಯುತ್ ಮಾರಾಟ ಮಿ.ಯೂ. ನಲ್ಲಿ	ಸ್ಥಾಪನೆಗಳ ಸಂಖ್ಯೆ	ವಿದ್ಯುತ್ ಮಾರಾಟ ಮಿ.ಯೂ. ನಲ್ಲಿ	ಸ್ಥಾಪನೆಗಳ ಸಂಖ್ಯೆ	ವಿದ್ಯುತ್ ಮಾರಾಟ ಮಿ.ಯೂ. ನಲ್ಲಿ	ಸ್ಥಾಪನೆಗಳ ಸಂಖ್ಯೆ	ವಿದ್ಯುತ್ ಮಾರಾಟ ಮಿ.ಯೂ. ನಲ್ಲಿ	ಸ್ಥಾಪನೆಗಳ ಸಂಖ್ಯೆ	ವಿದ್ಯುತ್ ಮಾರಾಟ ಮಿ.ಯೂ. ನಲ್ಲಿ
ಎಲ್.ಟಿ-1	ಭಾಗ್ಯಜ್ಯೋತಿ	2834626	574.8	2544654	300.23	2900526	845.44	2883665	885.66	2748490	760.11
ಎಲ್.ಟಿ-2	ಗೃಹಬಳಕೆ ಎ.ಇ.ಎಚ್. ಮತ್ತು ಖಾಸಗಿ ವಿದ್ಯಾ ಸಂಸ್ಥೆಗಳು	13809568	10605.93	14771352	11409.37	15062506	11559.21	15723452	11937.54	16772910	12785.51

ಎಲ್.ಟಿ-3	ವಾಣಿಜ್ಯ	1903128	3031.77	2002068	3207.07	2103886	3430.38	2197484	3542.77	2303728	3808.91
ಎಲ್.ಟಿ-4(ಎ)	ನೀ. ಪಂ. ಸೆಟ್ಟು-10 ಎಚ್.ಪಿ. ವರೆಗಿನ ಸಾಮರ್ಥ್ಯದ್ದು	2400076	18924.92	2499505	21344.45	2612924	19696.019	2920572	21962.85	3061999	20795.87
ಎಲ್.ಟಿ-4(ಬಿ) ಮತ್ತು (ಸಿ)	ನೀ.ಪಂ.ಸೆಟ್ಟು-೧೦ ಎಚ್.ಪಿ.ಗಿಂತ ಅಧಿಕ ಸಾಮರ್ಥ್ಯದ್ದು ಮತ್ತು ತೋಟಗಾರಿಕೆ	13377	44.34	16780	55.21	17841	55.57	19147	62.86	20604	56.57
ಎಲ್.ಟಿ-5	ಎಲ್.ಟಿ. ಕೈಗಾರಿಕೆ	414198	1904.81	431881	1925.97	450217	1954.15	465619	2023.24	483942	2007.96
ಎಲ್.ಟಿ-6	ನೀರು ಸರಬರಾಜು	146294	1068.17	161101	1401.85	179627	1712.24	192023	2235.54	205390	2459.19
ಎಲ್.ಟಿ-6	ಬೀದಿ ದೀಪ	130372	882.56	1366	923.22	141212	1023.38	147018	1089.70	155889	1107.82
ಎಲ್.ಟಿ-7	ತಾತ್ಕಾಲಿಕ ವಿದ್ಯುತ್ ಸರಬರಾಜು ಮತ್ತು ಜಾಹೀರಾತು ಫಲಕ	593780	241.74	667869	241.29	770045	240.02	871532	225.91	1002829	299.08
ಎಲ್.ಟಿ.–ಒಟ್ಟು		35233.32	22245419	23231856	40808.66	24238784	40516.40	25420512	43966.06	26755781	44081.02
ಎಚ್.ಟಿ-1	ಎಚ್.ಟಿ-ನೀರು ಸರಬರಾಜು	770	1476.66	828	1499.36	949	1539.51	1023	1651.43	1102	1719.49
ಎಚ್.ಟಿ-2 (ಎ)	ಎಚ್.ಟಿ.-ಕೈಗಾರಿಕೆ	10453	7901.75	10791	7430.82	11503	7709.02	12258	8207.27	13050	7700.39
ಎಚ್.ಟಿ-2 (ಬಿ)	ಎಚ್.ಟಿ.-ವಾಣಿಜ್ಯ	7765	3089.21	7763	3114.91	8398	3068.12	9185	2984.08	10135	2890.95
ಎಚ್.ಟಿ-2 (ಸಿ)	ಎಚ್.ಟಿ.-ವಿದ್ಯಾ ಸಂಸ್ಥೆಗಳು / ಆಸ್ಪತ್ರೆಗಳು	1351	502.97	1514	557.79	1675	596.788	1841	621.46	2016	633.87
ಎಚ್.ಟಿ-3 (ಎ) ಮತ್ತು (ಬಿ)	ಎಚ್.ಟಿ.-ನೀರಾವರಿ ಮತ್ತು ಏತನೀರಾವರಿ ಸೊಸೈಟಿ	623	391.33	692	403.29	793	464.715	839	629.49	937	612.54
ಎಚ್.ಟಿ-4	ನಿವಾಸಿ ವಸತಿ ಅಪಾರ್ಟ್ಮೆಂಟುಗಳು	395	145.61	347	156.53	348	118.65	384	123.44	565	134.93
ಎಚ್.ಟಿ-5	ತಾತ್ಕಾಲಿಕ ವಿದ್ಯುತ್	593	107.8	871	130.91	1069	128.8	1304	130.15	1557	133.42
ಎಚ್.ಟಿ.-ಒಟ್ಟು		**21950**	**13615.35**	**22806**	**13293.61**	**24734**	**13625.61**	**26834**	**14347.32**	**29362**	**13825.59**
ಒಟ್ಟು		**22267369**	**50894.38**	**23254662**	**54102.26**	**24263519**	**54142.01**	**25447346**	**58313.38**	**26785143**	**57906.61**

9.5 ಪ್ರಸರಣ ಮತ್ತು ವಿತರಣ ನಷ್ಟ:

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ರಾಜ್ಯದ ವಿದ್ಯುತ್ ಪ್ರಸರಣ ಸಂಸ್ಥೆಯಾಗಿದ್ದು, ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಗಡಿಯವರೆಗೆ ವಿದ್ಯುತ್‌ನ್ನು ಪ್ರಸರಣ ಮಾಡುವ ಕರ್ತವ್ಯವನ್ನು ನಿರ್ವಹಿಸುತ್ತಿದೆ.

ಪ್ರಸರಣ ವ್ಯವಸ್ಥೆಯಲ್ಲಿ ತಾಂತ್ರಿಕ ಕಾರಣಗಳಿಗಾಗಿ ವಿದ್ಯುಚ್ಛಕ್ತಿಯ ನಷ್ಟ ಸಂಭವಿಸುತ್ತದೆ. ಪ್ರಸರಣ ವ್ಯವಸ್ಥೆಯಲ್ಲಿನ ವಿದ್ಯುತ್ ನಷ್ಟಗಳನ್ನು ಕಡಿಮೆ ಮಾಡಲು, ಕವಿಪ್ರನಿನಿಯು ಹೊಸ ಉಪಕೇಂದ್ರಗಳ, ಪ್ರಸರಣ ಮಾರ್ಗಗಳ ಸ್ಥಾಪನೆ ಅಲ್ಲದೆ ವಿದ್ಯುತ್ ಉಪಕೇಂದ್ರಗಳ / ಮಾರ್ಗಗಳ ಉನ್ನತೀಕರಣ ಕಾರ್ಯಗಳನ್ನು ನಿರ್ವಹಿಸುತ್ತದೆ.

ಆರ್ಥಿಕ ವರ್ಷ 2020 ರಲ್ಲಿ ಕವಿಪ್ರನಿನಿಯು ಅನುಮೋದಿತ ಪರಿಷ್ಕೃತ ಪ್ರಸರಣ ನಷ್ಟ ಶೇ. 3.10ಕ್ಕೆ ಬದಲಾಗಿ ಪ್ರಸರಣ ನಷ್ಟವನ್ನು ಶೇ. 3.129 ಎಂದು ವರದಿ ಮಾಡಿದೆ, ಇದು ಕಳೆದ ವರ್ಷಕ್ಕಿಂತ ಶೇಕಡಾ 0.032 ರಷ್ಟು ಕಡಿಮೆಯಾಗಿರುವುದಾಗಿದೆ.

ಕಳೆದ ಐದು ವರ್ಷಗಳಲ್ಲಿ ಕವಿಪ್ರನಿನಿಯ ಪ್ರಸರಣ ನಷ್ಟ ಈ ಕೆಳಗಿನಂತಿದೆ:

ಶೇಕಡಾವಾರು ಅಂಕಿಗಳು

ವಿವರಗಳು	ಆ.ವ.15	ಆ.ವ.16	ಆ.ವ.17	ಆ.ವ.18	ಆ.ವ.19	ಆ.ವ.20	ಆ.ವ.21	ಆ.ವ.22
ಕ.ವಿ.ನಿ.ಆ.ದಿಂದ ಅನುಮೋದನೆ ಗೊಂಡಂತೆ	3.92	3.90	3.47	3.37	3.27	3.10	3.039	2.978
ಕವಿಪ್ರನಿನಿಯು ವರದಿ ಮಾಡಿದಂತೆ	3.67*	3.535*	3.283*	3.222*	3.161*	3.129	2.978	3.039

ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಉತ್ಪಾದಕರೊಡನೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳುತ್ತವೆ ಮತ್ತು ಹೀಗೆ ಖರೀದಿಸಲ್ಪಟ್ಟ ವಿದ್ಯುತ್ತಿನ ಪ್ರಮಾಣವನ್ನು ಮಿಲಿಯನ್ ಯೂನಿಟ್‌ಗಳಲ್ಲಿ (ಮಿ.ಯೂ.) ವಿದ್ಯುತ್ ಉತ್ಪಾದನಾ ಕೇಂದ್ರಗಳ 'ಗಡಿಬಿಂದು' ವಿನಲ್ಲಿ ಲೆಕ್ಕ ಮಾಡಲಾಗುತ್ತದೆ. ಈ ವಿದ್ಯುತ್ತನ್ನು ಕ.ವಿ.ಪ್ರ.ನಿ.ನಿ.ಯ ಪ್ರಸರಣ ಜಾಲದ ಮುಖಾಂತರ ವಿದ್ಯುತ್ ಸರಬರಾಜು ಕಂಪನಿಗಳ 'ಗಡಿಬಿಂದು' ಗಳವರೆಗೆ ಸಾಗಣೆ ಮಾಡಲಾಗುತ್ತದೆ. ಉತ್ಪಾದನಾ ಬಿಂದುವಿನಲ್ಲಿನ ವಿದ್ಯುತ್ ಮತ್ತು ಎಸ್ಕಾಂಗಳ ಗಡಿಬಿಂದುಗಳಲ್ಲಿನ ವಿದ್ಯುತ್‌ನ ವ್ಯತ್ಯಾಸವನ್ನು ಪ್ರಸರಣ ನಷ್ಟ ಎಂದು ಲೆಕ್ಕ ಮಾಡಲಾಗುತ್ತದೆ.

ವಿದ್ಯುತ್ ಸರಬರಾಜು ಕಂಪನಿಗಳು ಅವರ ವ್ಯಾಪ್ತಿಯ ಪ್ರದೇಶದಲ್ಲಿ ಅವರ ವಿತರಣಾ ಜಾಲದ ಮುಖಾಂತರ ವಿವಿಧ ಪ್ರವರ್ಗಗಳ ಗ್ರಾಹಕರಿಗೆ ವಿದ್ಯುತ್ ವಿತರಣೆ ಮಾಡುತ್ತವೆ. ಗಡಿಬಿಂದುಗಳಲ್ಲಿ ದಾಖಲಾದ ವಿದ್ಯುತ್ ಮತ್ತು ಗ್ರಾಹಕರ ಹಂತದಲ್ಲಿ ದಾಖಲಾದ ಒಟ್ಟು ವಿದ್ಯುತ್‌ನ ವ್ಯತ್ಯಾಸವನ್ನು ವಿತರಣಾ ನಷ್ಟ ಎಂದು ಲೆಕ್ಕ ಮಾಡಲಾಗುತ್ತದೆ. ವಿತರಣಾ ಜಾಲದ ಅಂತರ್ಗತ ಗುಣಗಳಿಂದಾಗಿ

ವಿದ್ಯುತ್ ವಿತರಣಾ ಜಾಲದಲ್ಲಿ ತಾಂತ್ರಿಕ ನಷ್ಟವಾಗುವುದಲ್ಲದೆ, ಮಾಪನಗಳಲ್ಲಿನ ದೋಷ, ಬಿಲ್ ನೀಡಿಕೆಯಲ್ಲಿನ ದೋಷಗಳು, ವಿದ್ಯುತ್ ಕಳ್ಳತನ / ಸೋರಿಕೆ ಮುಂತಾದವುಗಳಿಂದ ವಾಣಿಜ್ಯ ನಷ್ಟಗಳು ಸಂಭವಿಸುತ್ತವೆ.

9.5.1 ಆರ್ಥಿಕ ವರ್ಷ 2020 ಮತ್ತು 2021 ಕ್ಕೆ ವಿದ್ಯುತ್ ಸರಬರಾಜು ಕಂಪನಿಗಳ ಅನುಮೋದಿತ ವಿತರಣ ನಷ್ಟಗಳ ಪ್ರಮಾಣ ಈ ಕೆಳಗಿನಂತಿದೆ:

ಎಸ್ಕಾಂ ಹೆಸರು	ಆರ್ಥಿಕ ವರ್ಷ 2021 ಕ್ಕೆ ಅನುಮೋದಿತ ವಿತರಣಾ ನಷ್ಟ	ಆರ್ಥಿಕ ವರ್ಷ 2020 ರ ವಾಸ್ತವಿಕ ವಿತರಣಾ ನಷ್ಟ
ಬೆಸ್ಕಾಂ	11.65	11.99
ಮೆಸ್ಕಾಂ	10.00	10.07
ಸೆಸ್ಕ್	11.50	11.12
ಹೆಸ್ಕಾಂ	14.00	14.10
ಜೆಸ್ಕಾಂ	14.00	11.22
ಹುಕ್ಕೇರಿ ಆರ್.ಇ.ಸಿ.ಎಸ್.	13.75	14.83

9.5.2 ಕಳೆದ ಐದು ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಆರ್.ಇ.ಸಿ.ಎಸ್ ನ ವಾಸ್ತವಿಕ ವಿತರಣ ನಷ್ಟಗಳು ಈ ಕೆಳಗಿನಂತಿದೆ:

ಶೇಕಡವಾರು ಅಂಕಿಗಳು

ಎಸ್ಕಾಂಸ ಹೆಸರು	ಆ.ವ.15	ಆ.ವ.16	ಆ.ವ.17	ಆ.ವ.18	ಆ.ವ.19	ಆ.ವ.20
ಬೆಸ್ಕಾಂ	13.53	13.51	13.19	13.17	12.54	11.99
ಮೆಸ್ಕಾಂ	11.57	11.50	11.40	11.32	10.52	10.07
ಸೆಸ್ಕ್	13.89	17.26	13.10	13.20	12.04	11.12
ಹೆಸ್ಕಾಂ	16.74	20.92	16.02	14.76	14.62	14.10
ಜೆಸ್ಕಾಂ	18.93	18.71	17.33	16.39	14.41	11.22
ಹುಕ್ಕೇರಿ ಆರ್ಇಸಿಎಸ್	15.04	15.12	14.93	14.48	19.10	14.83

9.5.3 ರಾಜ್ಯದ ಒಟ್ಟಾರೆ ಪ್ರಸರಣ ಮತ್ತು ವಿತರಣ ನಷ್ಟಗಳ ಪ್ರಮಾಣ ಈ ಕೆಳಗಿನಂತಿವೆ:

ಶೇಕಡವಾರು ಅಂಕಿಗಳು

ಆ.ವ.14	ಆ.ವ.15	ಆ.ವ.16	ಆ.ವ.17	ಆ.ವ.18	ಆ.ವ.19	ಆ.ವ.20*	ಆ.ವ.21*
18.92	18.63	18.97	17.68	16.61	16.40	15.05	14.95

* ಆ.ವ.20 ಕ್ಕೆ ಲೆಕ್ಕ ಪರಿಶೋಧನಾ ಅಂಕಿ ಅಂಶಗಳ ಪ್ರಕಾರ ಮತ್ತು ಆ.ವ. 21 ಕ್ಕೆ ಎಆರ್ಆರ್.ನಲ್ಲಿ ಅನುಮೋದಿಸಿದ ಅಂಕಿಗಳ ಪ್ರಕಾರ

ಆರ್ಥಿಕ ವರ್ಷ 2020 ರಿಂದ ಆರ್ಥಿಕ ವರ್ಷ 2022ರ ನಿಯಂತ್ರಣ ಅವಧಿಗೆ ವಿದ್ಯುತ್ ಪ್ರಸರಣ ದರ:

ಆರ್ಥಿಕ ವರ್ಷ 2020 ರಿಂದ ಆರ್ಥಿಕ ವರ್ಷ 2022ರ ನಿಯಂತ್ರಣ ಅವಧಿಗೆ ದಿನಾಂಕ 30ನೇ ಮೇ 2019 ರ ದರ ಆದೇಶದ ಮೂಲಕ ಆಯೋಗವು ಪ್ರಸರಣ ದರಗಳನ್ನು ನಿಗದಿಪಡಿಸಿರುತ್ತದೆ. ಆಯೋಗವು ಆರ್ಥಿಕ ವರ್ಷ 2019 ರ ವಾರ್ಷಿಕ ಕಾರ್ಯಕ್ಷಮತೆಯನ್ನು ಪುನರಾವಲೋಕಿಸಿ ಅನುಮೋದಿಸಿದೆ ಮತ್ತು

ತತ್ಪರಿಣಾಮವಾಗಿ 4ನೇ ನವೆಂಬರ್ 2020 ರ ದರ ಆದೇಶದ ಮೂಲಕ, 1ನೇ ನವೆಂಬರ್ 2020 ರಿಂದ ಜಾರಿಗೆ ಬರುವಂತೆ ಆರ್ಥಿಕ ವರ್ಷ 2021 ಕ್ಕೆ ಅನ್ವಯಿಸುವ ಪ್ರಸರಣ ಶುಲ್ಕಗಳನ್ನು ಪರಿಷ್ಕರಿಸಿದೆ.

ಆರ್ಥಿಕ ವರ್ಷ 21ಕ್ಕೆ ವಿದ್ಯುತ್ ಸರಬರಾಜು ಕಂಪನಿಗಳು ಸಂದಾಯ ಮಾಡಬೇಕಾದ ಅನುಮೋದಿತ ಪರಿಷ್ಕೃತ ಪ್ರಸರಣ ದರದ ಮೊತ್ತಗಳು			
ವಿವರಗಳು	ಪ್ರಸರಣ ಸಾಮರ್ಥ್ಯ ಹಂಚಿಕೆ ಮೆ.ವ್ಯಾ.ನಲ್ಲಿ	ಆ.ವ.21 ಕ್ಕೆ ವಾರ್ಷಿಕ ಪ್ರಸರಣ ದರ ರೂ. ಕೋಟಿಗಳಲ್ಲಿ	ಆ.ವ.21 ಕ್ಕೆ ಮಾಸಿಕ ಪ್ರಸರಣ ದರ ರೂ. ಕೋಟಿಗಳಲ್ಲಿ
ಬೆಸ್ಕಾಂ	11708	2179.29	181.61
ಮೆಸ್ಕಾಂ	1715	319.22	26.60
ಸೆಸ್ಕ್	2505	466.27	38.86
ಹೆಸ್ಕಾಂ	4335	806.90	67.24
ಜೆಸ್ಕಾಂ	2800	521.18	43.43
ಒಟ್ಟು (ಮೆ.ವ್ಯಾ.)	23063	4292.87	357.74
ಪ್ರಸರಣ ದರ (ರೂ.ಗಳಲ್ಲಿ) – ಪ್ರತಿ ಮೆ.ವ್ಯಾ.ಗೆ ಪ್ರತಿ ಮಾಸಿಕ	**155114**		

ಅಲ್ಪಾವಧಿ ಬಳಕೆದಾರರಿಗೆ ಪ್ರಸರಣ ಶುಲ್ಕ (ರೂ./ಮೆ.ವ್ಯಾ.)	
ಪ್ರಸರಣ ಶುಲ್ಕಗಳು (ರೂ.ಗಳು – ಪ್ರತಿ ಮೆ.ವ್ಯಾ.ಗೆ)	ಮೊತ್ತ ರೂ./ಮೆ.ವ್ಯಾ
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 12 ಗಂಟೆ ಗಿಂತ ಮೇಲ್ಪಟ್ಟು ಮತ್ತು 24 ಗಂಟೆಗಳ ವರೆಗೆ	1274.49
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 6 ಗಂಟೆ ಗಿಂತ ಮೇಲ್ಪಟ್ಟು ಮತ್ತು 12 ಗಂಟೆಗಳ ವರೆಗೆ	637.45
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 6 ಗಂಟೆಗಳವರೆಗೆ	318.73

30ನೇ ಮೇ 2019 ರ ದರ ಆದೇಶದ ಪ್ರಕಾರ ಆರ್ಥಿಕ ವರ್ಷ 2022ಕ್ಕೆ ವಿದ್ಯುತ್ ಸರಬರಾಜು ಕಂಪನಿಗಳು ಸಂದಾಯ ಮಾಡಬೇಕಾದ ಅನುಮೋದಿತ ಪರಿಷ್ಕೃತ ಪ್ರಸರಣ ದರದ ಮೊತ್ತಗಳು			
ವಿವರಗಳು	ಪ್ರಸರಣ ಸಾಮರ್ಥ್ಯ ಹಂಚಿಕೆ ಮೆ.ವ್ಯಾ.ನಲ್ಲಿ	ಆ.ವ.22ಕ್ಕೆ ವಾರ್ಷಿಕ ಪ್ರಸರಣ ದರ ರೂ. ಕೋಟಿಗಳಲ್ಲಿ	ಆ.ವ.22ಕ್ಕೆ ಮಾಸಿಕ ಪ್ರಸರಣ ದರ ರೂ. ಕೋಟಿಗಳಲ್ಲಿ
ಬೆಸ್ಕಾಂ	12113	1944.25	162.02
ಮೆಸ್ಕಾಂ	1815	291.32	24.28
ಸೆಸ್ಕ್	2800	449.43	37.45
ಹೆಸ್ಕಾಂ	4675	750.38	62.53
ಜೆಸ್ಕಾಂ	2690	475.11	39.59
ಒಟ್ಟು (ಮೆ.ವ್ಯಾ.)	**24363**	**3910.48**	**325.87**
ಪ್ರಸರಣ ದರ (ರೂ.ಗಳಲ್ಲಿ) – ಪ್ರತಿ ಮೆ.ವ್ಯಾ.ಗೆ ಪ್ರತಿ ಮಾಸಿಕ	**133758**		

ಅಲ್ಪಾವಧಿ ಬಳಕೆದಾರರಿಗೆ ಪ್ರಸರಣ ಶುಲ್ಕ (ರೂ./ಮೆ.ವ್ಯಾ.)	
ಪ್ರಸರಣ ಶುಲ್ಕಗಳು (ರೂ.ಗಳು – ಪ್ರತಿ ಮೆ.ವ್ಯಾ.ಗೆ)	ಪೊತ್ತ ರೂ./ಮೆ.ವ್ಯಾ
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 12 ಗಂಟೆ ಗಿಂತ ಮೇಲ್ಪಟ್ಟು ಮತ್ತು 24 ಗಂಟೆಗಳ ವರೆಗೆ	1099.38
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 6 ಗಂಟೆ ಗಿಂತ ಮೇಲ್ಪಟ್ಟು ಮತ್ತು 12 ಗಂಟೆಗಳ ವರೆಗೆ	549.69
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 6 ಗಂಟೆಗಳವರೆಗೆ	274.84

ಅಲ್ಲದೆ, ಆರ್ಥಿಕ ವರ್ಷ 21 ರಲ್ಲಿ ಎಸ್‌ಎಲ್‌ಡಿಸಿಯ ಸೇವೆಗಳನ್ನು ಉಪಯೋಗಿಸಿದ್ದಕ್ಕಾಗಿ ಮುಕ್ತ ಮಾರ್ಗ ಗ್ರಾಹಕರು ಎಸ್‌ಎಲ್‌ಡಿಸಿಗೆ ಪಾವತಿಸಬೇಕಾದ ಶುಲ್ಕವನ್ನು ಪರಿಷ್ಕರಿಸಿ ಪ್ರತಿ ದಿನಕ್ಕೆ ಪ್ರತಿ ಮೆ.ವ್ಯಾ.ಗೆ ರೂ.30.21 ಎಂದು ಆಯೋಗವು ನಿರ್ಧರಣೆ ಮಾಡಿದೆ.

9.6 ಆ.ವ 2020 ಕ್ಕೆ ಎಸ್ಕಾಂಗಳ ನವೀಕರಿಸಬಹುದಾದ ಮೂಲದ ವಿದ್ಯುತ್ ಖರೀದಿ ಬಾಧ್ಯತೆ (ಆರ್‌ಪಿಓ):

2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 86(1) (ಈ) ರ ಪ್ರಕಾರವಾಗಿ, ಆಯೋಗವು ವಿನಿಯಮಗಳ ಮೂಲಕ ಬಾಧ್ಯತಾ ಘಟಕಗಳು ಅಂದರೆ, ವಿತರಣಾ ಪರವಾನಿಗೆದಾರರು, ಕ್ಯಾಪ್ಟೀವ್ ಗ್ರಾಹಕರು ಹಾಗೂ ಮುಕ್ತ ಮಾರ್ಗ ಗ್ರಾಹಕರು ನವೀಕರಿಸಬಹುದಾದ ಮೂಲಗಳಿಂದ ಖರೀದಿಸಬೇಕಾದ ಶೇಕಡವಾರು ವಿದ್ಯುತ್ ಪ್ರಮಾಣವನ್ನು ನಿಗದಿಪಡಿಸಿದೆ. ಆರ್ಥಿಕ ವರ್ಷ 2020 ಕ್ಕೆ ಆಯೋಗವು ಅನುಸೂಚಿಸಿದ ಆರ್.ಪಿ.ಓ. ಈ ಮುಂದಿನಂತಿದೆ:

ಬಾಧ್ಯತಾ ಘಟಕ	ನಿಗದಿತ ಸೌರಶಕ್ತಿ ಹೊರತಾದ ಆರ್‌ಪಿಓ–ಶೇ.	ನಿಗದಿತ ಸೌರಶಕ್ತಿ ಆರ್‌ಪಿಓ–ಶೇ.
ಬೆಸ್ಕಾಂ	12.00	7.25
ಮೆಸ್ಕಾಂ	13.00	7.25
ಸೆಸ್ಕ್	12.00	7.25
ಹೆಸ್ಕಾಂ	11.00	7.25
ಜೆಸ್ಕಾಂ	8.00	7.25
ಹೆಚ್‌ಆರ್‌ಇಸಿಎಸ್	11.00	7.25
ನವೀಕರಿಸಬಹುದಾದ ಇಂಧನ ಮೂಲಗಳಿಂದ ಹೊರತಾಗಿ ಖರೀದಿಸುವ 5 ಮೆ.ವ್ಯಾ.ಗಿಂತ ಹೆಚ್ಚಿನ ಒಪ್ಪಂದದ ಬೇಡಿಕೆ ಇರುವ ಮುಕ್ತ ಮಾರ್ಗ ಗ್ರಾಹಕರು	10.25	7.25
ಒಟ್ಟು 5 ಮೆ.ವ್ಯಾ.ಗಿಂತ ಹೆಚ್ಚಿನ ಸ್ಥಾಪಿತ ಸಾಮರ್ಥ್ಯ ಹೊಂದಿರುವ ಗ್ರಿಡ್ ಸಂಪರ್ಕಿತ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ಹೊರತಾದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಕ್ಯಾಪ್ಟೀವ್ ಗ್ರಾಹಕರು	10.25	7.25

ಈ ಕೆಳಗಿನ ಕೋಷ್ಟಕದಲ್ಲಿ ಆರ್ಥಿಕ ವರ್ಷ 2020 ರಲ್ಲಿ ಎಸ್ಕಾಂಗಳು ಸಾಧಿಸಿದ ಆರ್‌ಪಿಓ ಅನುಪಾಲನೆ ಸ್ಥಿತಿಗತಿಯನ್ನು ತೋರಿಸಲಾಗಿದೆ:

ಆರ್ಥಿಕ ವರ್ಷ 2020 ಕ್ಕೆ ಆರ್‌ಪಿಓ (ತಾತ್ಕಾಲಿಕ)									
	ಸೌರಶಕ್ತಿ ಹೊರತಾದ ಆರ್‌ಪಿಓ					ಸೌರಶಕ್ತಿ ಆರ್‌ಪಿಓ			
ಎಸ್ಕಾಂನ ಹೆಸರು	ಜಲ ವಿದ್ಯುತ್ ಹೊರತುಪಡಿಸಿ ಖರೀದಿಸಿದ ಒಟ್ಟು ವಿದ್ಯುತ್ ಮಿ.ಯೂ	ಆರ್‌ಪಿಓ ಗುರಿ–ಶೇ.	ಸೌರಶಕ್ತಿ ಹೊರತಾದ ಆರ್‌ಪಿಓ ಗುರಿ – ಮಿ.ಯೂ.	ಒಟ್ಟು ಸೌರಶಕ್ತಿ ಹೊರತಾದ ಎಲ್ಲಾ ಇಂಧನ ಮೂಲಗಳಿಂದ ಖರೀದಿಸಿದ ವಿದ್ಯುತ್ – ಮಿ.ಯೂ ಅಂದರೆ, ಸಾಧಿಸಿದ ಆರ್.ಪಿ.ಓ.	ಸೌರಶಕ್ತಿ ಹೊರತಾದ ಸಾಧಿಸಿದ ಆರ್‌ಪಿಓ ಶೇ.	ಆರ್‌ಪಿಓ ಗುರಿ – ಶೇ.	ಆರ್‌ಪಿಓ ಗುರಿ – ಮಿ.ಯೂ.	ಖರೀದಿಸಿದ ಸೌರಶಕ್ತಿ ಮಿ.ಯೂ.	ಸೌರಶಕ್ತಿ ಆರ್‌ಪಿಓ ಸಾಧನೆ–ಶೇ.
ಬೆಸ್ಕಾಂ	31043.43	12.00	3725.21	4092.19	13.18	7.25	2250.65	4732.47	15.24
ಮೆಸ್ಕಾಂ	4172.73	13.00	542.46	746.99	17.90	7.25	302.52	724.71	17.37
ಸೆಸ್ಕ್	4204.02	12.00	504.48	693.25	16.49	7.25	304.79	1032.73	24.57
ಹೆಚ್‌ಆರ್‌ಇಸಿಎಸ್ ಒಳಗೊಂಡು ಹೆಸ್ಕಾಂ	9290.57	11.00	1021.96	3108.07	33.45	7.25	673.57	1743.95	18.77
ಜೆಸ್ಕಾಂ	6331.49	8.00	506.52	2098.86	33.15	7.25	459.03	1265.66	19.99
ಒಟ್ಟು	**55042.24**	**11.45**	**6300.63**	**10739.36**	**19.51**	7.25	**3990.56**	**9499.52**	**17.26**

9.7 ಕ್ರಾಸ್ ಸಬ್ಸಿಡಿ ಸರ್ಚಾರ್ಜ್ (ಸಿ.ಎಸ್.ಎಸ್.):

2020 ರ ದರ ಆದೇಶದಲ್ಲಿ ಆಯೋಗವು, 2016 ರ ರಾಷ್ಟ್ರೀಯ ದರ ನೀತಿಯಲ್ಲಿ ಅನುಸೂಚಿಸಿದ ವಿಧಾನವನ್ನು ಅಳವಡಿಸಿಕೊಂಡು, ಆ.ವ 2020-21 ಕ್ಕೆ ಈ ಕೆಳಗಿನಂತೆ ಸಿ.ಎಸ್.ಎಸ್. ಅನ್ನು ನಿರ್ಧರಣೆ ಮಾಡಿದೆ:

ಎ) ಬೆಸ್ಕಾಂಗೆ ಅನ್ವಯವಾಗುವುದು:

ಪೈಸೆ / ಯೂನಿಟ್		
ವಿವರಗಳು	66 ಕೆವಿ & ಮೇಲ್ಪಟ್ಟು	ಹೆಚ್.ಟಿ ಹಂತ – 11 ಕೆವಿ / 33 ಕೆವಿ
ಹೆಚ್‌ಟಿ –1 ನೀರು ಸರಬರಾಜು	86	38
ಹೆಚ್‌ಟಿ –2ಎ (i) ಕೈಗಾರಿಕೆಗಳು	207	207
ಹೆಚ್‌ಟಿ –2ಎ (ii) ಕೈಗಾರಿಕೆಗಳು	179	179
ಹೆಚ್‌ಟಿ –2ಬಿ (i) ವಾಣಿಜ್ಯ	260	260
ಹೆಚ್‌ಟಿ –2ಬಿ (ii) ವಾಣಿಜ್ಯ	215	215
ಹೆಚ್‌ಟಿ –2(ಸಿ) (i)	176	176
ಹೆಚ್‌ಟಿ –2(ಸಿ) (ii)	198	198
ಹೆಚ್‌ಟಿ –3(ಎ) (i) ಏತ ನೀರಾವರಿ	0	0

ಹೆಚ್‌ಟಿ –3(ಎ) (ii) ಏತ ನೀರಾವರಿ	0	0
ಹೆಚ್‌ಟಿ –3(ಎ) ((iii) ಏತ ನೀರಾವರಿ	0	0
ಹೆಚ್‌ಟಿ –3(ಬಿ) ನೀರಾವರಿ & ಕೃಷಿ ತೋಟಗಾರಿಕೆ	0	0
ಹೆಚ್‌ಟಿ –4 ವಸತಿ ಅಪಾರ್ಟ್‌ಮೆಂಟ್‌ಗಳು	161	161
ಹೆಚ್‌ಟಿ –5 ತಾತ್ಕಾಲಿಕ	301	301

ಬಿ) ಬೆಸ್ಕಾಂ ಅನ್ನು ಹೊರತುಪಡಿಸಿದಂತೆ ಅನ್ವಯವಾಗುವುದು:

ಪೈಸೆ / ಯೂನಿಟ್		
ವಿವರಗಳು	66 ಕೆವಿ & ಮೇಲ್ಪಟ್ಟು	ಹೆಚ್.ಟಿ ಹಂತ – 11 ಕೆವಿ / 33 ಕೆವಿ
ಹೆಚ್‌ಟಿ –1 ನೀರು ಸರಬರಾಜು	86	38
ಹೆಚ್‌ಟಿ –2ಎ ಕೈಗಾರಿಕೆಗಳು	179	179
ಹೆಚ್‌ಟಿ –2ಬಿ ವಾಣಿಜ್ಯ	215	215
ಹೆಚ್‌ಟಿ –2(ಸಿ) (i)	176	176
ಹೆಚ್‌ಟಿ –2(ಸಿ) (ii)	198	198
ಹೆಚ್‌ಟಿ –3(ಎ) (i) ಏತ ನೀರಾವರಿ	0	0
ಹೆಚ್‌ಟಿ –3(ಎ) (ii) ಏತ ನೀರಾವರಿ	0	0
ಹೆಚ್‌ಟಿ –3(ಎ) ((iii) ಏತ ನೀರಾವರಿ	0	0
ಹೆಚ್‌ಟಿ –3(ಬಿ) ನೀರಾವರಿ & ಕೃಷಿ ತೋಟಗಾರಿಕೆ	0	0
ಹೆಚ್‌ಟಿ –4 ವಸತಿ ಅಪಾರ್ಟ್‌ಮೆಂಟ್‌ಗಳು	161	161
ಹೆಚ್‌ಟಿ –5 ತಾತ್ಕಾಲಿಕ	301	301

9.8 ಹೆಚ್ಚುವರಿ ಸರ್ಚಾರ್ಜ್:

ಆಯೋಗವು ತನ್ನ 2020 ರ ದರ ಆದೇಶದಲ್ಲಿ ಆ.ವ 2021 ಕ್ಕೆ ಅನ್ವಯಿಸುವಂತೆ ಪ್ರತಿ ಯೂನಿಟ್ ಗೆ 80 ಪೈಸೆಯಂತೆ ಸಾಮಾನ್ಯ ಹೆಚ್ಚುವರಿ ಸರ್ಚಾರ್ಜ್ ಅನ್ನು ಎಲ್ಲಾ ಎಸ್ಕಾಂಗಳಿಗೆ ಅನ್ವಯವಾಗುವಂತೆ ನಿಗದಿ ಪಡಿಸಿರುತ್ತದೆ. ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಉತ್ತೇಜಿಸಲು, ಆಯೋಗವು ಈ ಯೋಜನೆಗಳಿಗೆ ಹೆಚ್ಚುವರಿ ಸರ್ಚಾರ್ಜ್ ಅನ್ನು 20 ಪೈಸೆಗಳಿಗೆ ಕಡಿಮೆ ಮಾಡಿ ನಿಗದಿಪಡಿಸಿರುತ್ತದೆ.

9.9 ಆ.ವ. 2021 ಕ್ಕೆ ಚಿಲ್ಲರೆ ಸರಬರಾಜು ವಿದ್ಯುತ್ ದರ

4 ನೇ ನವೆಂಬರ್ 2020 ರ ದರ ಆದೇಶದಲ್ಲಿ, ಆಯೋಗವು, ಆರ್ಥಿಕ ವರ್ಷ 2019 ರ ವಾರ್ಷಿಕ ಕಾರ್ಯಕ್ಷಮತೆ ಪರಾಮರ್ಶೆ ಆಧಾರದ ಮೇಲೆ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಣೆ ಮಾಡಿರುತ್ತದೆ ಹಾಗೂ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆಯನ್ನು ಮತ್ತು ಕರ್ನಾಟಕದ ಗ್ರಾಹಕರಿಗೆ ಚಿಲ್ಲರೆ ವಿದ್ಯುತ್ ಪೂರೈಕೆ ದರವನ್ನು ಅನುಮೋದಿಸಿರುತ್ತದೆ. ಈ ಕೆಳಗಿನ ಕಾರಣಗಳಿಂದಾಗಿ ಆಯೋಗವು ನಿಗದಿತ ಸಮಯಕ್ಕೆ ದರ ಆದೇಶಗಳನ್ನು ಹೊರಡಿಸಲು ಸಾಧ್ಯವಾಗಿರುವುದಿಲ್ಲ:

i) ಜಗತ್ತಿನಾದ್ಯಂತ, ಭಾರತದಲ್ಲಿ ಮತ್ತು ವಿಶೇಷವಾಗಿ ಕರ್ನಾಟಕದಲ್ಲಿ ಕೋವಿಡ್-19 ಸಾಂಕ್ರಾಮಿಕ ಪರಿಸ್ಥಿತಿಯ ಕಾರಣದಿಂದಾಗಿ ಹೇರಲಾಗಿದ್ದ ಸಂಪೂರ್ಣ ಲಾಕ್ ಡೌನ್ ನಿಂದ ಎಲ್ಲಾ ವಲಯಗಳ ಆರ್ಥಿಕತೆಯ ಮೇಲೆ ತೀವ್ರತಮ ಪರಿಣಾಮ ಉಂಟಾಗಿದ್ದರಿಂದ.

ii) 2020 ರ ಜನವರಿಯಲ್ಲಿ ಹೊರಡಿಸಲಾದ ಕೆಇಆರ್‌ಸಿ ಆದೇಶದ ವಿರುದ್ಧ ಕೆಪಿಟಿಸಿಎಲ್ ಮಾನ್ಯ ವಿದ್ಯುತ್ ಮೇಲ್ಮನವಿ ಪ್ರಾಧಿಕಾರದ (ಎಟಿಇ) ಮುಂದೆ ಸಲ್ಲಿಸಿದ ಮೇಲ್ಮನವಿ ಮತ್ತು ಈ ಮೇಲ್ಮನವಿಯನ್ನು ಮಾನ್ಯ ಎಟಿಇ ಯು 05.10.2020 ರಂದು ವಿಲೇವಾರಿ ಮಾಡಿದ್ದರಿಂದ.

iii) ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ 03.11.2020 ರಂದು ಉಪಚುನಾವಣೆ ಘೋಷಣೆಯಿಂದಾಗಿ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ.

1ನೇ ಏಪ್ರಿಲ್ 2020 ರಿಂದ, 31ನೇ ಅಕ್ಟೋಬರ್ 2020 ರವರೆಗೆ (7 ತಿಂಗಳಲ್ಲಿ) ದರ ಪರಿಷ್ಕರಣೆಯಿಂದ ವಸೂಲು ಮಾಡಬಹುದಾಗಿದ್ದ ಒಟ್ಟು ಆದಾಯದ ಕೊರತೆಯಾದ 2,473 ಕೋಟಿ ರೂಪಾಯಿಗಳಲ್ಲಿ, ದರ ಪರಿಷ್ಕರಣೆಯಿಂದಾಗಿ ವಸೂಲು ಮಾಡಬಹುದಾಗಿದ್ದ 1,443 ಕೋಟಿ ರೂಪಾಯಿಗಳನ್ನು ನಿಯಂತ್ರಕ ಸ್ವತ್ತಾಗಿ (Regulatory Asset) ಇಟ್ಟು, ಆರ್ಥಿಕ ವರ್ಷ 2022 & 2023ರ ಬೆಲ್ಲರೆ ವಿದ್ಯುತ್ ಪೂರೈಕೆ ದರ ನಿರ್ಧರಣೆಯಲ್ಲಿ ವಸೂಲಿ ಮಾಡಲು ತೀರ್ಮಾನಿಸಿರುತ್ತದೆ. ಉಳಿದ ಆದಾಯದ ಕೊರತೆಯಾದ 1,030 ಕೋಟಿ ರೂಪಾಯಿಗಳನ್ನು ಆರ್ಥಿಕ ವರ್ಷ 2021ರ ಉಳಿದ 5 ತಿಂಗಳ ಅವಧಿಯಲ್ಲಿ ವಿದ್ಯುತ್ ದರ ಪರಿಷ್ಕರಣೆ ಮೂಲಕ ವಸೂಲಾತಿಗೆ ಅನುಮೋದಿಸಿದೆ.

ಈ ಪರಿಷ್ಕೃತ ದರಗಳು 1ನೇ ನವೆಂಬರ್ 2020 ಅಥವಾ ಅದರ ನಂತರದ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಮಾಡಿದ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ವಿದ್ಯುತ್‌ದರ ಪ್ರವರ್ಗ	ಪ್ರವರ್ಗದ ವಿವರಣೆ	ವಿವರಗಳು/ ಸ್ಲ್ಯಾಬ್ ಗಳಲ್ಲಿ ಬಳಕೆ (ಯೂನಿಟ್‌ಗಳು ಅಥವಾ ಕಿ.ವ್ಯಾ ಹೆಚ್)	ಶುಲ್ಕಗಳ ವಿಧ	ಬೆಸ್ಕಾಂ	ಇತರೆ ಎಸ್ಕಾಂಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್
ಎಲ್‌ಟಿ-1	ಭಾಗ್ಯಜ್ಯೋತಿ / ಕುಟೀರಜ್ಯೋತಿ		FC	50.00	50.00
		ಪ್ರತಿ ತಿಂಗಳಿಗೆ 40 ಕಿ.ವ್ಯಾ. ಹೆಚ್ ವರೆಗೆ	EC	ACS*	ACS*
ಎಲ್‌ಟಿ-2(ಎ)(i)	ಬಿಬಿಎಂಪಿ, ಮುನಿಸಿಪಲ್ ಕಾರ್ಪೋರೇಷನ್‌ಗಳು ಮತ್ತು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಗೃಹಬಳಕೆ ಎಇಎಚ್	ಮೊದಲ ಕಿ.ವ್ಯಾ.ಗೆ	FC	70.00	70.00
		ಪ್ರತಿ ಹೆಚ್ಚಿನ ಕಿ.ವ್ಯಾ.ಗೆ	FC	80.00	80.00
		0-30	EC	4.00	3.95
		31-100	EC	5.45	5.45
		101-200	EC	7.00	7.00
		200ಕ್ಕೂ ಮೇಲ್ಪಟ್ಟು	EC	8.05	8.05
ಎಲ್‌ಟಿ-2(ಎ)(ii)	ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬರುವ ಗೃಹಬಳಕೆ ಎಇಎಚ್	ಮೊದಲ ಕಿ.ವ್ಯಾ.ಗೆ	FC	55.00	55.00
		ಪ್ರತಿ ಹೆಚ್ಚಿನ ಕಿ.ವ್ಯಾ.ಗೆ	FC	70.00	70.00
		0-30	EC	3.90	3.85
		31-100	EC	5.15	5.15
		101-200	EC	6.70	6.70

ವಿದ್ಯುತ್‌ದರ ಪ್ರವರ್ಗ	ಪ್ರವರ್ಗದ ವಿವರಣೆ	ವಿವರಗಳು/ ಸ್ಲ್ಯಾಬ್ ಗಳಲ್ಲಿ ಬಳಕೆ (ಯೂನಿಟ್‌ಗಳು ಅಥವಾ ಕಿ.ವ್ಯಾ ಹೆಚ್)	ಶುಲ್ಕಗಳ ವಿಧ	ಬೆಸ್ಕಾಂ	ಇತರೆ ಎಸ್ಕಾಂಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್
		200ಕ್ಕೂ ಮೇಲ್ಪಟ್ಟು	EC	7.55	7.55
ಎಲ್‌ಟಿ-2(ಬಿ)(i)	ಬಿಬಿಎಂಪಿ, ಮುನಿಸಿಪಲ್ ಕಾರ್ಪೋರೇಷನ್‌ಗಳು ಮತ್ತು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ನರ್ಸಿಂಗ್ ಹೋಮ್‌ಗಳು ಮತ್ತು ಖಾಸಗಿ ಆಸ್ಪತ್ರೆಗಳು	ಪ್ರತಿ ಕಿ.ವ್ಯಾ.ಗೆ	FC	85.00	85.00
		ಕನಿಷ್ಠಕ್ಕೊಳಪಟ್ಟು	FC	110.00	110.00
		0-200	EC	7.20	7.15
		200ಕ್ಕೆ ಮೇಲ್ಪಟ್ಟು	EC	8.45	8.40
ಎಲ್‌ಟಿ-2(ಬಿ)(ii)	ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ನರ್ಸಿಂಗ್ ಹೋಮ್‌ಗಳು ಮತ್ತು ಖಾಸಗಿ ಆಸ್ಪತ್ರೆಗಳು	ಪ್ರತಿ ಕಿ.ವ್ಯಾ.ಗೆ	FC	75.00	75.00
		ಕನಿಷ್ಠಕ್ಕೊಳಪಟ್ಟು	FC	95.00	95.00
		0-200	EC	6.65	6.60
		200ಕ್ಕೆ ಮೇಲ್ಪಟ್ಟು	EC	7.90	7.85
ಎಲ್‌ಟಿ-3(i)	ಬಿಬಿಎಂಪಿ, ನಗರ ಕಾರ್ಪೋರೇಷನ್‌ಗಳು ಮತ್ತು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಲೈಟಿಂಗ್ ಮತ್ತು ಹೀಟಿಂಗ್	ಪ್ರತಿ ಕಿ.ವ್ಯಾ.ಗೆ	FC	90.00	90.00
		0-50	EC	8.25	8.25
		50ಕ್ಕೆ ಮೇಲ್ಪಟ್ಟು	EC	9.25	9.25
	ಬೇಡಿಕೆ ಆಧಾರಿತ ದರ (ಐಚ್ಛಿಕ) 5 ಕಿ.ವ್ಯಾ ಗಿಂತ ಹೆಚ್ಚಿನ ಆದರೆ 50 ಕಿ.ವ್ಯಾ ಗಿಂತ ಕಡಿಮೆ ಮಂಜೂರಾದ ಲೋಡ್	ಪ್ರತಿ ಕಿ.ವ್ಯಾ.ಗೆ	FC	105.00	105.00
		0-50	EC	8.25	8.25
		50ಕ್ಕೆ ಮೇಲ್ಪಟ್ಟು	EC	9.25	9.25
ಎಲ್‌ಟಿ-3(ii)	ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಲೈಟಿಂಗ್ ಮತ್ತು ಹೀಟಿಂಗ್	ಪ್ರತಿ ಕಿ.ವ್ಯಾ.ಗೆ	FC	80.00	80.00
		0-50	EC	7.75	7.75
		50ಕ್ಕೆ ಮೇಲ್ಪಟ್ಟು	EC	8.75	8.75
	ಬೇಡಿಕೆ ಆಧಾರಿತ ದರ (ಐಚ್ಛಿಕ) 5 ಕಿ.ವ್ಯಾ ಗಿಂತ ಹೆಚ್ಚಿನ ಆದರೆ 50 ಕಿ.ವ್ಯಾ ಗಿಂತ ಕಡಿಮೆ ಮಂಜೂರಾದ ಲೋಡ್	ಪ್ರತಿ ಕಿ.ವ್ಯಾ.ಗೆ	FC	95.00	95.00
		0-50	EC	7.75	7.75
		50ಕ್ಕೆ ಮೇಲ್ಪಟ್ಟು	EC	8.75	8.75
ಎಲ್‌ಟಿ-4(ಎ)	10 ಎಚ್‌ಪಿ ಮತ್ತು 10 ಹೆಚ್‌ಪಿ ಗಿಂತ ಕಡಿಮೆ ಹೊರೆಯ ನೀರಾವರಿ ಪಂಪ್‌ಸೆಟ್‌ಗಳು			CDT*	CDT*
ಎಲ್‌ಟಿ-4(ಬಿ)	10 ಎಚ್‌ಪಿ ಗಿಂತ ಅಧಿಕ ಹೊರೆಯ ನೀರಾವರಿ ಪಂಪ್‌ಸೆಟ್‌ಗಳು	ಪ್ರತಿ ಎಚ್‌ಪಿಗೆ	FC	80.00	80.00
			EC	3.75	3.75
ಎಲ್‌ಟಿ–4(ಸಿ)(i)	ಖಾಸಗಿ ತೋಟಗಾರಿಕೆ, ನರ್ಸರಿಗಳು ಮತ್ತು ಕಾಫಿ ಮತ್ತು ಟೀ ಪ್ಲಾಂಟೇಶನ್‌ಗಳು–10 ಎಚ್ ಪಿವರೆಗೆ.	ಪ್ರತಿ ಎಚ್‌ಪಿಗೆ	FC	70.00	70.00
			EC	3.75	3.75
ಎಲ್‌ಟಿ–4(ಸಿ)(ii)	ಖಾಸಗಿ ತೋಟಗಾರಿಕೆ, ನರ್ಸರಿಗಳು ಮತ್ತು ಕಾಫಿ ಮತ್ತು ಟೀ ಪ್ಲಾಂಟೇಶನ್‌ಗಳು–10 ಎಚ್ ಪಿಗಿಂತ ಮೇಲ್ಪಟ್ಟು	ಪ್ರತಿ ಎಚ್‌ಪಿಗೆ	FC	80.00	80.00
			EC	3.75	3.75
	ಬಿಬಿಎಂಪಿ ಮತ್ತು ನಗರ ಕಾರ್ಪೊರೇಷನ್‌ಗಳ ಅಡಿಯಲ್ಲಿ ಬರುವ ಕೈಗಾರಿಕಾ ಹೀಟಿಂಗ್ ಮತ್ತು ಮೋಟಿವ್ ವಿದ್ಯುತ್	5 ಎಚ್‌ಪಿ ಮತ್ತು ಅದಕ್ಕಿಂತ ಕಡಿಮೆಯಿರುವ ಪ್ರತಿ ಎಚ್‌ಪಿಗೆ	FC	65.00	65.00
		40 ಎಚ್‌ಪಿ ಗಿಂತ ಕಡಿಮೆ ಇದ್ದು 5 ಎಚ್‌ಪಿ ಇದ್ದರೆ ಪ್ರತಿ ಎಚ್‌ಪಿಗೆ	FC	70.00	70.00

ವಿದ್ಯುತ್‌ದರ ಪ್ರವರ್ಗ	ಪ್ರವರ್ಗದ ವಿವರಣೆ	ವಿವರಗಳು/ ಸ್ಲ್ಯಾಬ್ ಗಳಲ್ಲಿ ಬಳಕೆ (ಯೂನಿಟ್‌ಗಳು ಅಥವಾ ಕಿ.ವ್ಯಾ ಹೆಚ್)	ಶುಲ್ಕಗಳ ವಿಧ	ಬೆಸ್ಕಾಂ	ಇತರೆ ಎಸ್ಕಾಂಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್
ಎಲ್‌ಟಿ–5(ಎ)		40 ಎಚ್‌ಪಿ ಗಿಂತ ಮೇಲ್ಪಟ್ಟು ಹಾಗೂ 67 ಎಚ್‌ಪಿ ಗಿಂತ ಕಡಿಮೆ ಇರುವುದಕ್ಕೆ ಪ್ರತಿ ಹೆಚ್‌ಪಿಗೆ	FC	90.00	90.00
		67 ಎಚ್‌ಪಿ ಮೇಲ್ಪಟ್ಟು ಇದ್ದರೆ ಪ್ರತಿ ಎಚ್‌ಪಿ	FC	150.00	150.00
		0–500	EC	5.90	5.70
		501–1000	EC	7.20	6.70
		1000 ಮೇಲ್ಪಟ್ಟು	EC	7.20	7.00
	ಬಿಬಿಎಂಪಿ ಮತ್ತು ನಗರ ಕಾರ್ಪೊರೇಷನ್‌ಗಳ ಅಡಿಯಲ್ಲಿ ಬರುವ ಕೈಗಾರಿಕಾ ಹೀಟಿಂಗ್ ಮತ್ತು ಮೋಟಿವ್ ವಿದ್ಯುತ್ ಬೇಡಿಕೆ ಆಧಾರಿತ ದರ (ಐಚ್ಛಿಕ)	40 ಎಚ್‌ಪಿ ಗಿಂತ ಕಡಿಮೆ ಇದ್ದು 5 ಎಚ್‌ಪಿ ಇದ್ದರೆ ಪ್ರತಿ ಕಿ.ವ್ಯಾಗೆ	FC	90.00	85.00
		40 ಎಚ್‌ಪಿ ಗಿಂತ ಮೇಲ್ಪಟ್ಟು ಹಾಗೂ 67 ಎಚ್‌ಪಿ ಗಿಂತ ಕಡಿಮೆ ಇರುವುದಕ್ಕೆ ಪ್ರತಿ ಕಿ.ವ್ಯಾಗೆ	FC	120.00	115.00
		67 ಎಚ್‌ಪಿ ಮೇಲ್ಪಟ್ಟು ಇದ್ದರೆ ಪ್ರತಿ ಕಿ.ವ್ಯಾಗೆ	FC	200.00	200.00
		0–500	EC	5.90	5.70
		501–1000	EC	7.20	6.70
		1000 ಮೇಲ್ಪಟ್ಟು	EC	7.20	7.00
ಎಲ್‌ಟಿ–5(ಬಿ)	ಎಲ್‌ಟಿ–5(ಎ) ಅಡಿಯಲ್ಲಿ ಸೇರಿರದ ಎಲ್ಲಾ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ಹೀಟಿಂಗ್ ಮತ್ತು ಮೋಟಿವ್ ವಿದ್ಯುತ್	5 ಎಚ್‌ಪಿ ಮತ್ತು ಅದಕ್ಕಿಂತ ಕಡಿಮೆ ಪ್ರತಿ ಎಚ್‌ಪಿಗೆ	FC	55.00	55.00
		40 ಎಚ್‌ಪಿ ಗಿಂತ ಕಡಿಮೆ ಇದ್ದು 5 ಎಚ್‌ಪಿ ಇದ್ದರೆ ಪ್ರತಿ ಎಚ್‌ಪಿಗೆ	FC	65.00	65.00
		40 ಎಚ್‌ಪಿ ಗಿಂತ ಮೇಲ್ಪಟ್ಟು ಹಾಗೂ 67 ಎಚ್‌ಪಿ ಗಿಂತ ಕಡಿಮೆ ಇರುವುದಕ್ಕೆ ಪ್ರತಿ ಹೆಚ್‌ಪಿ	FC	85.00	85.00
		67 ಎಚ್‌ಪಿ ಮೇಲ್ಪಟ್ಟು ಇದ್ದರೆ ಪ್ರತಿ ಎಚ್‌ಪಿ	FC	135.00	135.00
		0–500	EC	5.60	5.60
		501–1000	EC	6.55	6.55
		1000 ಮೇಲ್ಪಟ್ಟು	EC	6.85	6.85
	ಎಲ್‌ಟಿ–5(ಎ) ಅಡಿಯಲ್ಲಿ ಸೇರಿರದ ಎಲ್ಲಾ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ಹೀಟಿಂಗ್ ಮತ್ತು ಮೋಟಿವ್ ವಿದ್ಯುತ್ ಬೇಡಿಕೆ ಆಧಾರಿತ ದರ (ಐಚ್ಛಿಕ)	40 ಎಚ್‌ಪಿ ಗಿಂತ ಕಡಿಮೆ ಇದ್ದು 5 ಎಚ್‌ಪಿ ಇದ್ದರೆ ಪ್ರತಿ ಕಿ.ವ್ಯಾಗೆ	FC	80.00	80.00
		40 ಎಚ್‌ಪಿ ಗಿಂತ ಮೇಲ್ಪಟ್ಟು ಹಾಗೂ 67 ಎಚ್‌ಪಿ ಗಿಂತ ಕಡಿಮೆ ಇರುವುದಕ್ಕೆ ಪ್ರತಿ ಕಿ.ವ್ಯಾಗೆ	FC	110.00	110.00
		67 ಎಚ್‌ಪಿ ಮೇಲ್ಪಟ್ಟು ಇದ್ದರೆ ಪ್ರತಿ ಕಿ.ವ್ಯಾಗೆ	FC	190.00	190.00

ವಿದ್ಯುತ್‌ದರ ಪ್ರವರ್ಗ	ಪ್ರವರ್ಗದ ವಿವರಣೆ	ವಿವರಗಳು/ ಸ್ಲ್ಯಾಬ್ ಗಳಲ್ಲಿ ಬಳಕೆ (ಯೂನಿಟ್‌ಗಳು ಅಥವಾ ಕಿ.ವ್ಯಾ ಹೆಚ್)	ಶುಲ್ಕಗಳ ವಿಧ	ಬೆಸ್ಕಾಂ	ಇತರೆ ಎಸ್ಕಾಂಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್
		0-500	EC	5.60	5.60
		501-1000	EC	6.55	6.55
		1000 ಮೇಲ್ಪಟ್ಟು	EC	6.85	6.85
ಎಲ್‌ಟಿ-6(ಎ)	ನೀರು ಸರಬರಾಜು	ಪ್ರತಿ ಎಚ್‌ಪಿ	FC	85.00	85.00
		ಪ್ರತಿ ಯೂನಿಟ್	EC	4.85	4.85
ಎಲ್‌ಟಿ–6(ಬಿ)	ಸಾರ್ವಜನಿಕ ಬೀದಿ ದೀಪಗಳು	ಪ್ರತಿ ಎಚ್‌ಪಿ	FC	100.00	100.00
	ಎಲ್.ಇ.ಡಿ. ದೀಪಗಳು	ಪ್ರತಿ ಯೂನಿಟ್	FC	6.55	6.50
		ಪ್ರತಿ ಯೂನಿಟ್	EC	5.50	5.45
ಎಲ್‌ಟಿ-6(ಸಿ)	**ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರ (ಹೊಸ ದರ ಪ್ರವರ್ಗ)**	**ಎಲ್.ಟಿ. ಪ್ರತಿ ಕಿ.ವ್ಯಾ.ಗೆ**	**FC**	**70.00**	**70.00**
		ಎಚ್.ಟಿ. ಪ್ರತಿ ಕಿ.ವ್ಯಾ.ಗೆ	**DC**	**200.00**	**200.00**
			FC	**5.00**	**5.00**
ಎಲ್‌ಟಿ-7(ಎ)	ತಾತ್ಕಾಲಿಕ/ ಪ್ರಕಟಣೆ ಮತ್ತು ಜಾಹೀರಾತು ಫಲಕಗಳು	67 ಎಚ್‌ಪಿ ಗಿಂತ ಕಡಿಮೆ (ಇಸಿ ಮಂಜೂರಾದ ಲೋಡ್‌ನ ಪ್ರತಿ ಕಿ.ವ್ಯಾ.ಗೆ ವಾರಕ್ಕೆ ಕನಿಷ್ಠ ರೂ.225 ಗೊಳಪಟ್ಟು	EC	11.00	11.00
ಎಲ್‌ಟಿ-7(ಬಿ)	ಶಾಶ್ವತ ಸರಬರಾಜು ಪ್ರಕಟಣಾ ಮತ್ತು ಜಾಹೀರಾತು ಫಲಕಗಳು	ಪ್ರತಿ ಕಿ.ವ್ಯಾ.ಗೆ	FC	100.00	100.00
		ಪ್ರತಿ ಯೂನಿಟ್	EC	11.00	11.00
ಹೆಚ್‌ಟಿ-೧	ಹೆಚ್‌ಟಿ ನೀರು ಸರಬರಾಜು	ಪ್ರತಿ ಕೆವಿಎ	DC	220.00	220.00
		ಪ್ರತಿ ಯೂನಿಟ್	EC	5.45	5.45
ಹೆಚ್‌ಟಿ–2(ಎ)(i)	ಬಿಬಿಎಂಪಿ ಮತ್ತು ನಗರ ಕಾರ್ಪೋರೇಷನ್‌ಗಳ ವ್ಯಾಪ್ತಿಯಲ್ಲಿ ಬರುವ ಎಚ್‌ಟಿ ಕೈಗಾರಿಕೆಗಳು	ಪ್ರತಿ ಕೆವಿಎ	DC	230.00	220.00
		ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ	EC	7.35	7.20
		ಬಾಕಿ ಯೂನಿಟ್‌ಗಳಿಗೆ	EC	7.65	7.45
	ಬೆಂಗಳೂರು ನಗರ ಮೆಟ್ರೋ ರೈಲು ಕಾರ್ಪೋರೇಷನ್	ಪ್ರತಿ ಕೆವಿಎ	DC	220.00	-
		ಪ್ರತಿ ಯೂನಿಟ್	EC	5.20	-
	ರೈಲ್ವೆ ಟ್ರಾಕ್ಷನ್	ಪ್ರತಿ ಕೆವಿಎ	DC	230.00	230.00
		ಪ್ರತಿ ಯೂನಿಟ್	EC	6.45	6.45
	ಮಲಿನ ನೀರು ಶುದ್ಧೀಕರಣ ಸ್ಥಾವರಗಳು	ಪ್ರತಿ ಕೆವಿಎ	DC	230.00	230.00
		ಪ್ರತಿ ಯೂನಿಟ್	EC	6.85	6.85
ಹೆಚ್‌ಟಿ-2(ಎ)(ii)	ಎಚ್‌ಟಿ-2(ಎ)(i) ರ ಅಡಿಯಲ್ಲಿ ಬರುವವುಗಳನ್ನು ಹೊರತುಪಡಿಸಿದಂತೆ ಇತರೆ ಹೆಚ್‌ಟಿ ಕೈಗಾರಿಕೆಗಳು	ಪ್ರತಿ ಕೆವಿಎ	DC	220.00	220.00
		ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ	EC	7.25	7.20
		ಬಾಕಿ ಯೂನಿಟ್‌ಗಳಿಗೆ	EC	7.45	7.45
ಹೆಚ್‌ಟಿ-2(ಬಿ)(i)	ಬಿಬಿಎಂಪಿ ಮತ್ತು ನಗರ ಕಾರ್ಪೋರೇಷನ್‌ಗಳ ವ್ಯಾಪ್ತಿ ಪ್ರದೇಶಗಳಿಗೆ ಒಳಪಡುವ ಹೆಚ್‌ಟಿ-ವಾಣಿಜ್ಯ	ಪ್ರತಿ ಕೆವಿಎ	DC	250.00	240.00
		ಮೊದಲ ಎರಡು ಲಕ್ಷ ಯೂನಿಟ್ ಗಳಿಗೆ	EC	9.15	8.90
		ಬಾಕಿ ಯೂನಿಟ್‌ಗಳಿಗೆ	EC	9.25	9.00

ವಿದ್ಯುತ್‌ದರ ಪ್ರವರ್ಗ	ಪ್ರವರ್ಗದ ವಿವರಣೆ	ವಿವರಗಳು/ ಸ್ಲ್ಯಾಬ್ ಗಳಲ್ಲಿ ಬಳಕೆ (ಯೂನಿಟ್‌ಗಳು ಅಥವಾ ಕಿ.ವ್ಯಾ ಹೆಚ್)	ಶುಲ್ಕಗಳ ವಿಧ	ಬೆಸ್ಕಾಂ	ಇತರೆ ಎಸ್ಕಾಂಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್
ಹೆಚ್‌ಟಿ-2(ಬಿ)(ii)	ಹೆಚ್‌ಟಿ-2(ಬಿ)(i)ರ ಅಡಿಯಲ್ಲಿ ಸೇರಿರದ ಪ್ರದೇಶಗಳಿಗೆ ಒಳಪಡುವ ಎಚ್‌ಟಿ-ವಾಣಿಜ್ಯ	ಪ್ರತಿ ಕೆವಿಎ	DC	240.00	240.00
		ಮೊದಲ ಎರಡು ಲಕ್ಷ ಯೂನಿಟ್ ಗಳಿಗೆ	EC	8.95	8.90
		ಬಾಕಿ ಯೂನಿಟ್‌ಗಳಿಗೆ	EC	9.05	9.00
ಹೆಚ್‌ಟಿ-2(ಸಿ)(i)	ಹೆಚ್‌ಟಿ -ಸರ್ಕಾರಿ ಆಸ್ಪತ್ರೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ನಡೆಸುವ ಆಸ್ಪತ್ರೆ ಮತ್ತು ಇಎಸ್‌ಐ ಆಸ್ಪತ್ರೆಗಳು ಮತ್ತು ವಿಶ್ವ ವಿದ್ಯಾಲಯಗಳು, ಸರ್ಕಾರಕ್ಕೆ / ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಶೈಕ್ಷಣಿಕ ಸಂಸ್ಥೆಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು ಮತ್ತು ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿನಿಲಯಗಳು	ಪ್ರತಿ ಕೆವಿಎ	DC	220	220
		ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ	EC	7.10	7.05
		ಬಾಕಿ ಯೂನಿಟ್‌ಗಳಿಗೆ	EC	7.50	7.45
ಹೆಚ್‌ಟಿ-2(ಸಿ)(ii)	ಹೆಚ್‌ಟಿ - ಆಸ್ಪತ್ರೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ಎಚ್‌ಟಿ(ಸಿ)(i)ರ ಅಡಿಯಲ್ಲಿ ಬರುವವುಗಳನ್ನು ಹೊರತುಪಡಿಸಿದಂತೆ ಇತರೆ ಸ್ಥಾವರಗಳು	ಪ್ರತಿ ಕೆವಿಎ	DC	220	220
		ಮೊದಲ ಒಂದು ಲಕ್ಷ ಯೂನಿಟ್ ಗಳಿಗೆ	EC	8.10	8.05
		ಬಾಕಿ ಯೂನಿಟ್‌ಗಳಿಗೆ	EC	8.50	8.45
ಹೆಚ್‌ಟಿ-3(ಎ)(i)	ಸರ್ಕಾರದ ಅಡಿಯಲ್ಲಿನ ಏತ ನೀರಾವರಿ ಯೋಜನೆಗಳು	ಪ್ರತಿ ಎಚ್‌ಪಿ/ಪ್ರತಿ ವರ್ಷಕ್ಕೆ ವಾರ್ಷಿಕ ಕನಿಷ್ಠ ರೂ.1600 ಕ್ಕೊಳಪಟ್ಟ ಇಸಿ	EC	3.00	3.00
ಹೆಚ್‌ಟಿ-3(ಎ)(ii)	ನಗರ/ಎಕ್ಸ್‌ಪ್ರೆಸ್ ಫೀಡರ್ ಮೇಲೆ ಸಂಪರ್ಕ ಹೊಂದಿದ ಖಾಸಗಿ ಏತ ನೀರಾವರಿ ಯೋಜನೆಗಳು	ಪ್ರತಿ ಎಚ್‌ಪಿ	FC	80.00	80.00
		ಪ್ರತಿ ಯೂನಿಟ್	EC	3.00	3.00
ಹೆಚ್‌ಟಿ-3(ಎ) iii)	ಹೆಚ್.ಟಿ-3(ಎ)(ii)ರ ಅಡಿಯಲ್ಲಿ ಬರುವವುಗಳನ್ನು ಹೊರತುಪಡಿಸಿದ ಏತ ನೀರಾವರಿ ಯೋಜನೆಗಳು	ಪ್ರತಿ ಹೆಚ್‌ಪಿ	FC	60.00	60.00
		ಪ್ರತಿ ಯೂನಿಟ್	EC	3.00	3.00
ಹೆಚ್‌ಟಿ-3(ಬಿ)	ಹೆಚ್.ಟಿ ಕೃಷಿ/ತೋಟಗಾರಿಕೆ	ಮಂಜೂರಾದ ಲೋಡ್/ಪ್ರತಿ ವರ್ಷಕ್ಕೆ ಪ್ರತಿ ಎಚ್‌ಪಿಗೆ ವಾರ್ಷಿಕ ಕನಿಷ್ಠ ರೂ.1600 ಗೊಳಪಟ್ಟು	EC	5.00	5.00
ಹೆಚ್‌ಟಿ-4(ಎ)	ಹೆಚ್‌ಟಿ – ವಸತಿ – ಎಲ್ಲಾ ಪ್ರದೇಶಗಳಿಗೆ ಅನ್ವಯವಾಗುವುದು.	ಪ್ರತಿ ಕೆವಿಎ	DC	140.00	140.00
		ಪ್ರತಿ ಯೂನಿಟ್	EC	6.95	6.90
ಹೆಚ್‌ಟಿ-5	ತಾತ್ಕಾಲಿಕ – ಎಲ್ಲಾ ಪ್ರವರ್ಗಗಳಲ್ಲಿ ಬರುವ ಮತ್ತು 67 ಹೆಚ್‌ಪಿ ಮತ್ತು ಅದಕ್ಕಿಂತ ಮೇಲ್ಪಟ್ಟ ಹೊರೆಗೆ ಪ್ರಕಟಣಾ ಫಲಕ ಮತ್ತು ಜಾಹೀರಾತು ಫಲಕಗಳೂ ಸೇರಿದಂತೆ	ಪ್ರತಿ ಕೆವಿಎ	DC	275.00	275.00
		ಪ್ರತಿ ಯೂನಿಟ್‌ಗೆ (ಕನಿಷ್ಠ ವಾರಕ್ಕೆ ಅನ್ವಯವಾಗುವುದಿಲ್ಲ)	EC	11.00	11.00
ಹೆಚ್‌ಟಿ-5 (ಎ)	ತಾತ್ಕಾಲಿಕ – ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನ ಕೇಂದ್ರಕ್ಕೆ ಅನ್ವಯವಾಗುವುದು.	**ಪ್ರತಿ ಯೂನಿಟ್ (ವಾರದ ಕನಿಷ್ಠ ಶುಲ್ಕ ಇರುವುದಿಲ್ಲ)**	EC	12.00	-
ಎಸ್ಕಾಂ	*ಸರಬರಾಜಿನ ಸರಾಸರಿ ಬೆಲೆ (ಎಸಿಎಸ್) (**ACS**) ರೂ/ಯೂನಿಟ್	***ಆಯೋಗವು ನಿರ್ಧರಿಸಿದ ವಿದ್ಯುತ್ ದರ (CDT) ರೂ/ಯೂನಿಟ್**			

ವಿದ್ಯುತ್‌ದರ ಪ್ರವರ್ಗ	ಪ್ರವರ್ಗದ ವಿವರಣೆ	ವಿವರಗಳು/ ಸ್ಲಾಬ್ ಗಳಲ್ಲಿ ಬಳಕೆ (ಯೂನಿಟ್‌ಗಳು ಅಥವಾ ಕಿ.ವ್ಯಾ ಹೆಚ್)	ಶುಲ್ಕಗಳ ವಿಧ	ಬೆಸ್ಕಾಂ	ಇತರೆ ಎಸ್ಕಾಂಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್
ಬೆಸ್ಕಾಂ	8.14	4.20			
ಮೆಸ್ಕಾಂ	7.61	5.81	FC- ನಿಗದಿತ ಶುಲ್ಕ		
ಸೆಸ್ಕ್	7.29	6.07	EC-ವಿದ್ಯುಚ್ಛಕ್ತಿ ಶುಲ್ಕ		
ಹೆಸ್ಕಾಂ	7.60	6.84			
ಜೆಸ್ಕಾಂ	7.47	6.28			
ಹುಕ್ಕೇರಿ ಆರ್ ಇಸಿಎಸ್	6.17	5.90			

ಮಂಗಳೂರು ಎಸ್ ಇ ಝಡ್

ಹೆಚ್‌ಟಿ	ಹೆಚ್‌ಟಿ ಕೈಗಾರಿಕೆ	ಪ್ರತಿ ಕೆವಿಎಗೆ/ತಿಂಗಳಿಗೆ	DC	220.00
		ಪ್ರತಿ ಯೂನಿಟ್‌ಗೆ	EC	7.20
ಹೆಚ್‌ಟಿ	ಹೆಚ್‌ಟಿ ನಿರ್ಮಾಣ	ಪ್ರತಿ ಕೆವಿಎಗೆ/ತಿಂಗಳಿಗೆ	DC	260.00
		ಪ್ರತಿ ಯೂನಿಟ್‌ಗೆ	EC	11.00
ಎಲ್‌ಟಿ	ಎಲ್‌ಟಿ ಕೈಗಾರಿಕೆ	ಪ್ರತಿ ಕೆವಿಎಗೆ/ತಿಂಗಳಿಗೆ	FC	210.00
		ಪ್ರತಿ ಯೂನಿಟ್‌ಗೆ	EC	6.75
ಎಲ್‌ಟಿ	ಎಲ್‌ಟಿ ನಿರ್ಮಾಣ	ಪ್ರತಿ ಕೆವಿಎಗೆ/ತಿಂಗಳಿಗೆ	FC	250.00
		ಪ್ರತಿ ಯೂನಿಟ್‌ಗೆ	EC	11.00

ಏಕಸ್ ಎಸ್ ಇ ಝಡ್

ಎಲ್‌ಟಿ / ಹೆಚ್‌ಟಿ	ಹೆಚ್‌ಟಿ ಕೈಗಾರಿಕೆ / ಸಾಮಾನ್ಯ ಸೌಲಭ್ಯಗಳು	ಪ್ರತಿ ಕೆವಿಎಗೆ/ತಿಂಗಳಿಗೆ	FC	220.00
		ಪ್ರತಿ ಯೂನಿಟ್‌ಗೆ	EC	7.25
ಎಲ್‌ಟಿ / ಹೆಚ್‌ಟಿ	ಹೆಚ್‌ಟಿ ನಿರ್ಮಾಣ	ಪ್ರತಿ ಕೆವಿಎಗೆ/ತಿಂಗಳಿಗೆ	FC	250.00
		ಪ್ರತಿ ಯೂನಿಟ್‌ಗೆ	EC	10.50

ಟೈಂ ಆಫ್ ಡೇ (ಟಿಒಡಿ) ವಿದ್ಯುತ್ ದರವು 500 ಕೆ.ವಿ.ಎ. ಮತ್ತು ಅದಕ್ಕಿಂತ ಹೆಚ್ಚು ಬೇಡಿಕೆ ಇರುವ ಹೆಚ್‌ಟಿ-2(ಎ), ಹೆಚ್‌ಟಿ-2(ಬಿ) ಮತ್ತು ಹೆಚ್‌ಟಿ-2(ಸಿ) ಪ್ರವರ್ಗಗಳಿಗೆ ದಿನಾಂಕ 1.09.2012 ರಿಂದ ಕಡ್ಡಾಯವಾಗಿರುತ್ತದೆ. ಹೆಚ್‌ಟಿ-1 ಪ್ರವರ್ಗಕ್ಕೆ ಮತ್ತು 500 ಕೆವಿಎ ಗಿಂತ ಕಡಿಮೆ ಬೇಡಿಕೆಯ ಎಲ್‌ಟಿ-(5), ಹೆಚ್‌ಟಿ-2(ಎ), ಎಚ್‌ಟಿ-2(ಬಿ) ಮತ್ತು ಹೆಚ್ ಟಿ-2(ಸಿ) ಪ್ರವರ್ಗಗಳಿಗೆ ಐಚ್ಛಿಕ ಅಧಾರದ ಮೇಲೆ ಟಿಒಡಿ ವಿದ್ಯುತ್‌ದರವನ್ನು ಈ ಹಿಂದೆ ಇದ್ದಂತೆ ಈ ಕೆಳಗಿನಂತೆ ಮುಂದುವರಿಸಲಾಗಿದೆ:

ಟೈಂ ಆಫ್ ಡೇ	ಅನ್ವಯವಾಗಬಹುದಾದ ಸಾಮಾನ್ಯ ವಿದ್ಯುತ್‌ದರಕ್ಕಿಂತ ಹೆಚ್ಚಿಗೆ (+) / ಕಡಿಮೆ (–) ವಿದ್ಯುತ್ ಶುಲ್ಕಗಳು
0.6.00 ಗಂಟೆಗಳಿಂದ 10.00 ಗಂಟೆಗಳ ವರೆಗೆ	0
10.00 ಗಂಟೆಗಳಿಂದ 18.00 ಗಂಟೆಗಳ ವರೆಗೆ	0
18.00 ಗಂಟೆಗಳಿಂದ 22.00 ಗಂಟೆಗಳ ವರೆಗೆ	ಪ್ರತಿ ಯೂನಿಟ್‌ಗೆ (+) 100 ಪೈಸೆ
22.00 ಗಂಟೆಗಳಿಂದ 6.00 ಗಂಟೆಗಳ ವರೆಗೆ	ಪ್ರತಿ ಯೂನಿಟ್‌ಗೆ (–) 100 ಪೈಸೆ

9.10 ಆ.ವ. 21 ಕ್ಕೆ ಪರಿಷ್ಕರಿಸಿದ ಪ್ರಸರಣ ದರ:

ದಿನಾಂಕ 04.11.2020 ರ ಆಯೋಗದ ಆದೇಶದ ಪ್ರಕಾರ ಪ್ರಸರಣ ವ್ಯವಸ್ಥೆಯನ್ನು ಉಪಯೋಗಿಸಲು ಎಲ್ಲಾ ಎಸ್ಕಾಂಗಳಿಗೆ ಮತ್ತು ನವೀಕರಿಸಬಹುದಾದ ಇಂಧನಗಳಿಂದ ಉತ್ಪಾದನೆ ಮಾಡಿ ರಾಜ್ಯದೊಳಗೆ ವಿದ್ಯುತ್ ಸರಬರಾಜು ಮಾಡುವ ಮತ್ತು ಆರ್ಥಿಕ ವರ್ಷ 2021 ಕ್ಕೆ ಆರ್ಇಸಿ ಪ್ರಯೋಜನಗಳನ್ನು ಪಡೆಯದ ಉತ್ಪಾದಕರನ್ನು ಹೊರತುಪಡಿಸಿ ಇತರೆ ಎಲ್ಲಾ ಧೀರ್ಘಾವಧಿ ಮುಕ್ತ ಗ್ರಾಹಕರಿಗೆ ನಿರ್ಧರಣೆ ಮಾಡಿದ, ಪರಿಷ್ಕರಿಸಿ ನಿಗದಿಪಡಿಸಲಾದ ಪ್ರಸರಣ ದರ, ಪ್ರತಿ ಮೆ.ವ್ಯಾ.ಗೆ ಪ್ರತಿ ತಿಂಗಳಿಗೆ ರೂ.15511 (01.11.2020 ರಿಂದ ಜಾರಿಗೆ ಬರುವಂತೆ).

9.11 ಆ.ವ. 21 ಕ್ಕೆ ಅಲ್ಪಾವಧಿ ಮುಕ್ತ ಮಾರ್ಗ (ಎಸ್ಟಿಓಎ) ಗ್ರಾಹಕರಿಗೆ ಪ್ರಸರಣ ದರಗಳು

ಆರ್ಥಿಕ ವರ್ಷ 21 ಕ್ಕೆ ಅಲ್ಪಾವಧಿ ಮುಕ್ತಮಾರ್ಗ (ಎಸ್ಟಿಓಎ) ಗ್ರಾಹಕರಿಗೆ ಆಯೋಗದ ಅನುಮೋದಿತ ಪರಿಷ್ಕರಿಸಿದ ಪ್ರಸರಣ ಶುಲ್ಕಗಳು ಮತ್ತು ಎಸ್ಎಲ್ ಡಿಸಿ ಶುಲ್ಕಗಳು ಈ ಕೆಳಕಂಡಂತಿವೆ:

ಮುಕ್ತ ಮಾರ್ಗದ ಅವಧಿ (ರೂ. / ಮೆ.ವ್ಯಾ)	ಪ್ರಸರಣ ಶುಲ್ಕಗಳು ರೂ. ಮೆ.ವ್ಯಾ.ಗೆ	ಎಸ್ಎಲ್ಡಿಸಿ ಶುಲ್ಕಗಳು ರೂ./ಮೆ.ವ್ಯಾ./ದಿನ
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 12 ಗಂಟೆ ಗಿಂತ ಮೇಲ್ಪಟ್ಟು ಮತ್ತು 24 ಗಂಟೆಗಳ ವರೆಗೆ	1274.49	30.21
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 6 ಗಂಟೆ ಗಿಂತ ಮೇಲ್ಪಟ್ಟು ಮತ್ತು 12 ಗಂಟೆಗಳ ವರೆಗೆ	637.45	
ಒಂದು ಬ್ಲಾಕ್‌ನಲ್ಲಿ ಒಂದು ದಿನದಲ್ಲಿ 6 ಗಂಟೆಗಳವರೆಗೆ	318.73	

9.12 ವಿಶೇಷ ಪ್ರೋತ್ಸಾಹಕ ಕಾರ್ಯ ಯೋಜನೆ

ವಿದ್ಯುತ್ ಮಾರಾಟವನ್ನು ಹೆಚ್ಚಿಸಲು ಮತ್ತು ಎಸ್ಕಾಂಗಳಿಂದ ವಿದ್ಯುತ್ ಬಳಸುವಂತೆ ಗ್ರಾಹಕರನ್ನು ಆಕರ್ಷಿಸಲು, ಆಯೋಗವು ಹೆಚ್ಟಿ ಪ್ರವರ್ಗಕ್ಕೆ 14.05.2018ರ ದರ ಆದೇಶದಲ್ಲಿ ಜಾರಿಗೆ ತಂದ ವಿಶೇಷ ಪ್ರೋತ್ಸಾಹಕ ಕಾರ್ಯಯೋಜನೆಯನ್ನು ಮುಂದುವರಿಸಲು ತೀರ್ಮಾನಿಸಿದೆ:

- ವಿಶೇಷ ಪ್ರೋತ್ಸಾಹಕ ಯೋಜನೆಯನ್ನು ಆಯ್ಕೆ ಮಾಡುವ ಹೆಚ್ಟಿ ಗ್ರಾಹಕರಿಗೆ ರಾತ್ರಿ 22.00 ಗಂಟೆಗಳಿಂದ 6.00 ಗಂಟೆಗಳವರೆಗಿನ (ಮುಂದಿನ ದಿನ) ಅಗ್ರ ಅಲ್ಲದ ಅವಧಿಯಲ್ಲಿ ಬಳಕೆ ಮಾಡಿದ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ರೂ.2 ರ ವಿಶೇಷ ಪ್ರೋತ್ಸಾಹಕ.
- ವಿಶೇಷ ಪ್ರೋತ್ಸಾಹಕ ಯೋಜನೆಯನ್ನು ಆಯ್ಕೆ ಮಾಡುವ ಹೆಚ್.ಟಿ. ಗ್ರಾಹಕರಿಗೆ, 10.00 ಗಂಟೆಗಳಿಂದ 18.00 ಗಂಟೆಗಳ ನಡುವಿನ, ಆರ್ಥಿಕ ವರ್ಷ 18ರ ಮೂಲ ಬಳಕೆಗಿಂತ ಹೆಚ್ಚುವರಿ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.1 ಕಡಿತದ ವಿಶೇಷ ಪ್ರೋತ್ಸಾಹಕ.

9.13 ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಕ್ಕೆ ದರ

ರಾಜ್ಯದಲ್ಲಿ ಹೆಚ್ಚು ಸ್ವಚ್ಛ / ಪರಸರ ಸ್ನೇಹಿ ವಿದ್ಯುತ್ ವಾಹನಗಳ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಎಲ್ಟಿ ಮತ್ತು ಹೆಚ್ಟಿ ಪ್ರವರ್ಗಗಳಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳಿಗೆ ವಿದ್ಯುತ್ ಪೂರೈಕೆ ಮಾಡಲು 14.05.2018ರ ಆಯೋಗದ ದರ ಆದೇಶದಲ್ಲಿ ಜಾರಿಗೆ ತರಲಾದ ಎಲ್ಟಿ-6 (ಸಿ)ನ ಹೆಚ್ಚುವರಿ ಉಪಪ್ರವರ್ಗವನ್ನು ಕಡಿಮೆ ದರದಲ್ಲಿಯೇ ಮುಂದುವರಿಸಲು ಆಯೋಗವು ನಿರ್ಧರಿಸಿದೆ.

ಆರ್ಥಿಕ ವರ್ಷ 21 ರಲ್ಲಿ ಆಯೋಗದ ಕಾರ್ಯಚಟುವಟಿಕೆಗಳು

10. ಪ್ರಸಕ್ತ ವರ್ಷದಲ್ಲಿ ಪ್ರಮುಖ ಘಟನೆಗಳು

10.1 ಆರ್ಥಿಕ ವರ್ಷ 2021 ರಲ್ಲಿ ಆಯೋಗದ ಕರ್ತವ್ಯಗಳಲ್ಲಿನ ಪ್ರಮುಖ ಘಟನೆಗಳು ಈ ಮುಂದಿನಂತಿದೆ:

- ಕೆಪಿಟಿಸಿಎಲ್, ಎಸ್ಕಾಂಗಳು, ಹುಕ್ಕೇರಿ ಆರ್ಇಸಿಎಸ್, ಮಂಗಳೂರು ಎಸ್ಇಝಡ್, ಏಕಸ್ ಎಸ್ ಇಝಡ್ ಇವುಗಳ ದರ ಅರ್ಜಿಗಳಿಗೆ ಸಂಬಂಧಿಸಿದಂತೆ ಆರ್ಥಿಕ ವರ್ಷ 2021 ರ, ನಡವಳಿಗಳನ್ನು ಪೂರ್ಣಗೊಳಿಸಲಾಗಿದೆ.
- ಪ್ರಸಕ್ತ ವರ್ಷದಲ್ಲಿ ರಾಜ್ಯ ಸಲಹಾ ಸಮಿತಿಯ 3 (ಮೂರು) ಸಭೆಗಳನ್ನು ನಡೆಸಲಾಗಿದೆ.
- ವಿದ್ಯುತ್ ಕ್ಷೇತ್ರದ ವಿವಿಧ ಸಮಸ್ಯೆಗಳನ್ನು ಚರ್ಚಿಸಿ ಅವುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಆಯೋಗದ 12 ಆಂತರಿಕ ಸಭೆಗಳನ್ನು ನಡೆಸಲಾಗಿದೆ.
- ವಿವಾದಗಳ ನ್ಯಾಯ ನಿರ್ಣಯಕ್ಕೆ ಸಂಬಂಧಿಸಿದಂತೆ ಪ್ರಸಕ್ತ ವರ್ಷದಲ್ಲಿ 141 ಪ್ರಕರಣಗಳು ದಾಖಲಾಗಿದ್ದು, ಆ ಪೈಕಿ 54 ಪ್ರಕರಣಗಳನ್ನು ಆಲಿಸಿ ಅಂತಿಮವಾಗಿ ಇತ್ಯರ್ಥಪಡಿಸಲಾಗಿದೆ.
- 55 ವಿದ್ಯುತ್ ಖರೀದಿ ಒಪ್ಪಂದಗಳು ಮತ್ತು ಪೂರಕ ವಿದ್ಯುತ್ ಖರೀದಿ ಒಪ್ಪಂದಗಳನ್ನು ಅನುಮೋದಿಸಲಾಗಿದೆ.
- ನವೀಕರಿಸಬಹುದಾದ ವಿದ್ಯುತ್ ಪ್ರಮಾಣಪತ್ರ (ಆರ್.ಇ.ಸಿ.) ಉದ್ದೇಶಕ್ಕಾಗಿ ಸರಾಸರಿ ರಾಶಿ ವಿದ್ಯುತ್ ಖರೀದಿ ದರ (ಎ.ಪಿ.ಪಿ.ಸಿ.) ವನ್ನು ಯಥಾರ್ಥ (Truing up) ಗೊಳಿಸುವ ಮತ್ತು ತಾತ್ಕಾಲಿಕ ಎ.ಪಿ.ಪಿ.ಸಿ. ದರ ಅಧಿಸೂಚಿಸುವ ಕ್ರಮವಹಿಸಲಾಗಿದೆ.
- ಎಲ್ಲಾ ಎಸ್ಕಾಂಗಳ 4 (ನಾಲ್ಕು) ತ್ರೈಮಾಸಿಕ ಅವಧಿಯ ಇಂಧನ ಹೊಂದಾಣಿಕೆ ದರ ಅರ್ಜಿಗಳ ಆದೇಶವನ್ನು ನೀಡಲಾಗಿದೆ.
- 22.05.2020 ರಂದು, ಸೌರ ವಿದ್ಯುತ್ ಯೋಜನೆಗಳಿಗೆ ವರ್ಗಾನ್ವಯ ದರ ಆದೇಶವನ್ನು ಪ್ರಕಟಿಸಿರುತ್ತದೆ.
- 06.05.2020 ರಂದು, ಪವನ ವಿದ್ಯುತ್ ಯೋಜನೆಗಳಿಗೆ ವರ್ಗಾನ್ವಯ ದರವನ್ನು ವಿಸ್ತರಿಸುವ ಆದೇಶವನ್ನು ಪ್ರಕಟಿಸಿರುತ್ತದೆ.
- 21.08.2020 ರಂದು, WTE ವಿದ್ಯುತ್ ಯೋಜನೆಗಳಿಗೆ ವರ್ಗಾನ್ವಯ ದರವನ್ನು ವಿಸ್ತರಿಸುವ ಆದೇಶವನ್ನು ಪ್ರಕಟಿಸಿರುತ್ತದೆ.

10.2 2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 86ರಡಿಯಲ್ಲಿ ನಿರ್ದಿಷ್ಟಪಡಿಸಲಾದ ಆಯೋಗದ ಕರ್ತವ್ಯಗಳ ಪ್ರಕಾರ, ಪ್ರಸಕ್ತ ವರ್ಷದಲ್ಲಿ ಆಯೋಗದ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ:

2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ	ನಿರ್ದಿಷ್ಟಪಡಿಸಿದ ಕರ್ತವ್ಯಗಳು	ಪ್ರಸಕ್ತ ವರ್ಷದ ಕಾರ್ಯಚಟುವಟಿಕೆಗಳು
86(1)(ಎ)	ವಿದ್ಯುತ್ ಉತ್ಪಾದನೆ, ಪ್ರಸರಣ, ಸರಬರಾಜು ಮತ್ತು ವೀಲಿಂಗ್‌ಗೆ ದರ ನಿರ್ಧರಣೆ	ಆರ್ಥಿಕ ವರ್ಷಕ್ಕೆ 20ಕ್ಕೆ ಕೆಪಿಟಿಸಿಎಲ್‌ಗೆ ಸಂಬಂಧಿಸಿದಂತೆ ಪ್ರಸರಣ ಶುಲ್ಕಕ್ಕಾಗಿ, ವಿತರಣಾ ಪರವಾನಿಗೆದಾರರಿಗೆ ಸಂಬಂಧಿಸಿದಂತೆ ಚಿಲ್ಲರೆ ಸರಬರಾಜಿಗಾಗಿ ಮತ್ತು ವೀಲಿಂಗ್ ಶುಲ್ಕಗಳಿಗಾಗಿ ಸಲ್ಲಿಸಿದ ದರ ಅರ್ಜಿಗಳ ಮೇಲೆ ನಡವಳಿಗಳನ್ನು ಪೂರ್ಣಗೊಳಿಸಲಾಗಿದೆ.
86(1)(ಬಿ)	ಸರಬರಾಜು ಪರವಾನಿಗೆದಾರರ ವಿದ್ಯುತ್ ಖರೀದಿ ಮತ್ತು ಪಡೆಯುವಿಕೆ ಪ್ರಕ್ರಿಯೆಯ ನಿಯಂತ್ರಣ	ಪೂರಕ ಒಪ್ಪಂದಗಳು ಸೇರಿದಂತೆ 10 ವಿದ್ಯುತ್ ಖರೀದಿ ಒಪ್ಪಂದಗಳನ್ನು ಆಯೋಗ ಅನುಮೋದಿಸಿದೆ.
86(1)(ಸಿ)	ರಾಜ್ಯದೊಳಗಿನ ಪ್ರಸರಣ ಮತ್ತು ವಿದ್ಯುಚ್ಛಕ್ತಿ ವೀಲಿಂಗ್‌ಗಳನ್ನು ಸುಗಮಗೊಳಿಸುವುದು.	ಪ್ರಸರಣ ಮತ್ತು ವೀಲಿಂಗ್ ಶುಲ್ಕಗಳನ್ನು ಸಂಬಂಧಿತ ವಿದ್ಯುತ್ ದರ ಆದೇಶಗಳಲ್ಲಿ ನಿರ್ಧರಿಸಲಾಗಿದೆ.
86(1)(ಡಿ)	ಪರವಾನಿಗೆ ನೀಡುವುದು	ಕೆಪಿಟಿಸಿಎಲ್, ಎಸ್ಕಾಂಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್ ಹಾಲಿ ಪರವಾನಿಗೆದಾರರು. ಎಂಎಸ್‌ಇಝಡ್ ಮತ್ತು ಏಕ್ವಸ್ ಎಸ್‌ಇಝಡ್ ಪರಿಗಣಿತ ಪರವಾನಿಗೆದಾರರು.
86(1)(ಇ)	ಸಹ-ಉತ್ಪಾದನೆ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳಿಗೆ ಉತ್ತೇಜನ	ಎಲ್ಲಾ ಎಸ್ಕಾಂಗಳಿಗೆ / ಸ್ವ-ಬಳಕೆ ಮತ್ತು ಮುಕ್ತ ಮಾರ್ಗದ ಗ್ರಾಹಕರಿಗೆ ನವೀಕರಿಸಬಹುದಾದ ಇಂಧನ ಖರೀದಿ ಭಾದ್ಯತೆಯನ್ನು ನಿಗದಿಪಡಿಸಿದೆ.
86(1)(ಎಫ್)	ವಿವಾದಗಳ ಬಗ್ಗೆ ನ್ಯಾಯ ನಿರ್ಣಯ ಮಾಡುವುದು.	ಆಯೋಗವು ಪ್ರಸಕ್ತ ವರ್ಷದಲ್ಲಿ ನ್ಯಾಯ ನಿರ್ಣಯಕ್ಕೆ ಸಂಬಂಧಿಸಿದ 109 ಅರ್ಜಿಗಳನ್ನು ವಿಲೆ ಮಾಡಿದೆ.
86(1)(ಜಿ)	ಶುಲ್ಕವನ್ನು ವಿಧಿಸುವುದು	ಪ್ರಕಟಿಸಿರುವ ವಿನಿಯಮಗಳ ಉಪಬಂಧಗಳ ಪ್ರಕಾರ ವಿಧಿಸಲಾದ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ.
86(1)(ಐ)	ಗುಣಮಟ್ಟಗಳ ಜಾರಿ	ಪರವಾನಿಗೆದಾರರು ಒದಗಿಸುವ ಸೇವೆಗಳ ಗುಣಮಟ್ಟ, ನಿರಂತರತೆ ಮತ್ತು ವಿಶ್ವಸನೀಯತೆ ಬಗ್ಗೆ ನಿಯತವಾಗಿ ಪರಿಶೀಲನೆ ನಡೆಸಲಾಗುತ್ತಿದೆ.
86(1)(ಜೆ)	ವ್ಯಾಪಾರದ ಲಾಭ ನಿಗದಿ ಪಡಿಸುವುದು	ರಾಜ್ಯದೊಳಗೆ ವ್ಯವಹರಿಸುವ ವಿದ್ಯುತ್ ಮಾರಾಟಗಾರರು ಯಾರೂ ಇರುವುದಿಲ್ಲ.
86(1)(ಕೆ)	ಇತರೆ ಕರ್ತವ್ಯಗಳ ನಿರ್ವಹಣೆ	ಅಗತ್ಯವಾದಲ್ಲಿ ಅಂತಹ ಕರ್ತವ್ಯಗಳನ್ನು ನಿರ್ವಹಿಸಲಾಗಿದೆ.
86(2)	ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.	ರಾಜ್ಯ ಸರಕಾರಕ್ಕೆ ನಿರ್ದಿಷ್ಟ ವಿಷಯಗಳ ಮೇಲೆ ಸಲಹೆಯನ್ನು ನೀಡಲಾಗುತ್ತಿದೆ.
86(3)	ಪಾರದರ್ಶಕತೆಯನ್ನು ಖಚಿತ ಪಡಿಸುವುದು.	ವಿದ್ಯುತ್‌ದರ ನಿರ್ಧರಣೆ ಮತ್ತು ಇತರೆ ನಡವಳಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರಣೆ ನಡೆಸಲಾಗಿದೆ ಮತ್ತು ಭಾಗಿದಾರರಿಂದ ಲಿಖಿತ ಅಭಿಪ್ರಾಯ / ಸಲಹೆಗಳನ್ನು ಆಹ್ವಾನಿಸಲಾಗಿದೆ.
86(4)	ರಾಷ್ಟ್ರೀಯ ವಿದ್ಯುತ್ ಕಾರ್ಯ ನೀತಿ ಮತ್ತು ಯೋಜನೆ ಹಾಗೂ ದರ ನೀತಿಗಳನ್ನು ಮಾರ್ಗದರ್ಶಿಯಾಗಿ ಇಟ್ಟುಕೊಳ್ಳುವುದು.	ಆಯೋಗವು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ರಾಷ್ಟ್ರೀಯ ವಿದ್ಯುತ್ ಕಾರ್ಯನೀತಿ ಮತ್ತು ದರ ನೀತಿಗಳನ್ನು (ಉಪಬಂಧಗಳನ್ನು). ಗಮನದಲ್ಲಿ ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ.

10.3 ಕ.ವಿ.ಪ್ರ.ನಿ.ನಿ ಯ ವಿದ್ಯುತ್ ದರ ಆದೇಶ:

ಆಯೋಗವು, ಕ.ವಿ.ಪ್ರ.ನಿ.ನಿ.ಗೆ ಸಂಬಂಧಿಸಿದಂತೆ, ದಿನಾಂಕ 4ನೇ ನವೆಂಬರ್ 2020 ರ ವಿದ್ಯುತ್ ದರ ಆದೇಶವನ್ನು 1ನೇ ನವೆಂಬರ್ 2020 ರಿಂದ ಜಾರಿಗೆ ಬರುವಂತೆ ಹೊರಡಿಸಿದೆ. ಆ.ವ. 19ರ ವಾರ್ಷಿಕ ಕಾರ್ಯಸಾಧನೆ ಪುನರ್ಮನನದ ಪ್ರಕಾರ ಪರಿಷ್ಕೃತ ವಾರ್ಷಿಕ ಕಂದಾಯ ಅಗತ್ಯತೆ (ಎಆರ್ಆರ್) ಯನ್ನು ಅನುಮೋದಿಸಲಾಗಿದೆ ಹಾಗೂ ಆ.ವ. 21ರ ಅನುಮೋದಿತ ಎಆರ್ಆರ್‌ಗೆ ಹಿಂದಿನ ಸಾಲಿನಿಂದ ಮುಂದೊಯ್ದ ಕೊರತೆ ರೂ.436.71 ಕೋಟಿ ಈ ಕೆಳಗಿನಂತಿದೆ:

ಅಂಕಿಗಳು ರೂ. ಕೋಟಿಗಳಲ್ಲಿ

ವಿವರಗಳು	ಆ.ವ. 20
ಆ.ವ. 21ಕ್ಕೆ ಅನುಮೋದಿತ ವಾರ್ಷಿಕ ಕಂದಾಯ ಅಗತ್ಯತೆ	3645.17
ಆ.ವ. 19 ರ ವಾರ್ಷಿಕ ಕಾರ್ಯಸಾಧನೆ ಪುನರ್ಮನನದ ಪ್ರಕಾರ ಹಿಂದಿನ ಸಾಲಿನಿಂದ ಮುಂದೊಯ್ದ ಕೊರತೆ.	436.71
ವಸೂಲಾದ ನಿಯಂತ್ರಕ ಸ್ವತ್ತು (5 ತಿಂಗಳು)	138.09
ವಾರ್ಷಿಕ ಕಾರ್ಯಸಾಧನೆ ಪುನರ್ಮನನದ ಪ್ರಕಾರ 206-07 ನೇ ಆರ್ಥಿಕ ವರ್ಷದ ಆದಾಯ ಕೊರತೆ	72.90
ಆ.ವ. 20 ರ ಪರಿಷ್ಕೃತ ಅನುಮೋದಿತ ಎಆರ್ಆರ್	**4292.87**

10.4 ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ದರ ಆದೇಶ

ಆಯೋಗವು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು), ಏಕಸ್ ಎಸ್ಇಝಡ್ ಮತ್ತು ಮಂಗಳೂರು ಎಸ್ಇಝಡ್ ಹಾಗೂ ಹುಕ್ಕೇರಿ ಆರ್.ಇ.ಸಿ.ಎಸ್.ಗಳಿಗೆ ಸಂಬಂಧಿಸಿದಂತೆ ದಿನಾಂಕ 04 ನೇ ನವೆಂಬರ್ 2020 ರಂದು ವಿದ್ಯುತ್ ದರ ಆದೇಶಗಳನ್ನು ಹೊರಡಿಸಿದೆ. ಆಯೋಗವು, ವಾರ್ಷಿಕ ಕಾರ್ಯಸಾಧನೆ ಪುನರ್ಮನನದ ಆಧಾರದ ಮೇಲೆ ಆ.ವ.19 ರ ಪರಿಷ್ಕರಿಸಿದ ವಾರ್ಷಿಕ ಕಂದಾಯ ಅಗತ್ಯತೆಯನ್ನು ಸಹಾ ಅನುಮೋದಿಸಿದೆ ಮತ್ತು ಆ.ವ. 21 ರ ವಾರ್ಷಿಕ ಕಂದಾಯ ಅಗತ್ಯತೆಗೆ (ಎಆರ್ ಆರ್) ಹಿಂದಿನ ಕಂದಾಯದಲ್ಲಿನ ಕೊರತೆ / ಹೆಚ್ಚುವರಿಯನ್ನು ಮುಂದೊಯ್ಯಲಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಆ.ವ.21ಕ್ಕೆ ಕೋರಿದ ಮತ್ತು ಆಯೋಗವು ಅನುಮೋದಿಸಿದ ಎಆರ್ಆರ್ ಈ ಕೆಳಗಿನಂತಿದೆ:

ಅಂಕಿಗಳು ರೂ. ಕೋಟಿಗಳಲ್ಲಿ

ಎಸ್ಕಾಂ	ಆ.ವ.21	
	ಕೋರಿದಂತೆ	ಅನುಮೋದಿಸಿದಂತೆ
ಬೆಸ್ಕಾಂ	29141.07	24371.86
ಮೆಸ್ಕಾಂ	4251.43	4011.33
ಸೆಸ್ಕ್	5183.92	4821.23
ಹೆಸ್ಕಾಂ	9954.62	9382.86
ಜೆಸ್ಕಾಂ	5984.70	5713.28

ಎಸ್ಕಾಂ	ಆ.ವ.21	
	ಕೋರಿದಂತೆ	ಅನುಮೋದಿಸಿದಂತೆ
ಹುಕ್ಕೇರಿ ಆರ್.ಇ.ಸಿ.ಎಸ್.	263.72	168.23
ಮಂಗಳೂರು ಎಸ್.ಇ.ಝಡ್.	49.46	52.10
ಏಕಸ್(ಎ.ಇ.ಕ್ಯೂ.ಯು.ಎಸ್.) ಎಸ್.ಇ.ಝಡ್.	22.045	23.66

(ಮೇಲಿನ ಅಂಕಿಗಳನ್ನು ಹತ್ತಿರದ ಪೂರ್ಣಾಂಕಕ್ಕೆ ತರಲಾಗಿದೆ)

ವಿದ್ಯುತ್ ಸರಬರಾಜು ಕಂಪನಿಗಳ ಈ ಮೇಲಿನ ಎಆರ್ಆರ್ ಆಧಾರದ ಮೇಲೆ, ಆಯೋಗವು ಆ.ವ.21 ಕ್ಕೆ ರೂ.2473 ಕೋಟಿಗಳ (ಆ.ವ.19 ರ ಏಪಿಆರ್ ಪ್ರಕಾರ ರೂ.1837.16 ಕೋಟಿಗಳ ಹಿಂದಿನಿಂದ ಮುಂದಕ್ಕೆ ಕೊಂಡೊಯ್ದ ಕೊರತೆಯೂ ಸೇರಿ) ಕಂದಾಯದಲ್ಲಿನ ಕೊರತೆಯನ್ನು ನೀಗಿಸಲು ಚಿಲ್ಲರೆ ಸರಬರಾಜು ವಿದ್ಯುತ್ ದರದಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನ್ವಯಿಸುವಂತೆ ಪ್ರತಿ ಯೂನಿಟ್ಟಿಗೆ 40 ಪೈಸೆಯಷ್ಟು ಸರಾಸರಿ ಹೆಚ್ಚಳವನ್ನು ಅನುಮೋದಿಸಿದೆ.

10.5 ಆಯೋಗವು ಹೊರಡಿಸಿದ ವಿನಿಯಮಗಳು / ಆದೇಶಗಳು

a) ಕೆ ಇ ಆರ್ ಸಿ (ಪ್ರಸರಣ ಮತ್ತು / ಅಥವಾ ವಿತರಣಾ ಪರವಾನಗಿದಾರರ ಇತರ ವ್ಯವಹಾರದಿಂದ ಬಂದ ಆದಾಯದ ಹಂಚಿಕೆ) ವಿನಿಯಮಗಳು, 2020.

b) ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS) (ಒಂಭತ್ತನೇ ತಿದ್ದುಪಡಿ) 2020, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹನ್ನೊಂದನೇ ತಿದ್ದುಪಡಿ) ವಿನಿಯಮಗಳು, 2020 ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿಗಳು) (ಎರಡನೇ ತಿದ್ದುಪಡಿ) ವಿನಿಯಮಗಳು, 2020.

ವಿನಿಯಮಗಳು / ತಿದ್ದುಪಡಿ ವಿನಿಯಮಗಳ ವಿವರಗಳು ಈ ಕೆಳಗಿನಂತಿವೆ:

1. **ಕೆ ಇ ಆರ್ ಸಿ (ಪ್ರಸರಣ ಮತ್ತು / ಅಥವಾ ವಿತರಣಾ ಪರವಾನಗಿದಾರರ ಇತರ ವ್ಯವಹಾರದಿಂದ ಬಂದ ಆದಾಯದ ಹಂಚಿಕೆ) ವಿನಿಯಮಗಳು, 2020**:

   ವಿದ್ಯುತ್ ಅಧಿನಿಯಮ 2003 ರ ಪರಿಚ್ಛೇದ 41 ಮತ್ತು ಪರಿಚ್ಛೇದ 51 ರ ಅಡಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಕರ್ನಾಟಕ ರಾಜ್ಯದೊಳಗೆ ಪ್ರಸರಣ ಮತ್ತು / ಅಥವಾ ವಿತರಣಾ ಪರವಾನಗಿದಾರರ (ಗಳ) ಇತರ ವ್ಯವಹಾರಗಳಿಂದ ಆದಾಯವನ್ನು ಹಂಚಿಕೊಳ್ಳಲು ಮತ್ತು ಪ್ರಾಸಂಗಿಕ ಮತ್ತು ಪೂರಕ ವಿಷಯಗಳಿಗಾಗಿ ನಿಯಮಗಳನ್ನು ಮತ್ತು ಷರತ್ತುಗಳನ್ನು ಹೊರಡಿಸುವುದು ಕಡ್ಡಾಯವಾಗಿದೆ. ಅದರಂತೆ, ಆಯೋಗವು ಪ್ರಸರಣ ಮತ್ತು / ಅಥವಾ ವಿತರಣಾ ಪರವಾನಗಿದಾರರ (ಗಳ) ಇತರ ವ್ಯವಹಾರದಿಂದ ಬರುವ ಆದಾಯದ ಶೇಕಡಾವಾರು ಪ್ರಮಾಣವನ್ನು ನಿರ್ದಿಷ್ಟಪಡಿಸಿ, ಅದು ವಿದ್ಯುತ್ ಪ್ರಸರಣ / ವಿತರಣೆಯ ಶುಲ್ಕವನ್ನು ಕಡಿಮೆ ಮಾಡಲು ಬಳಸಿಕೊಳ್ಳುವಂತೆ ಸೂಚಿಸಿ, ಕೆ ಇ ಆರ್ ಸಿ (ಪ್ರಸರಣ ಮತ್ತು / ಅಥವಾ ವಿತರಣಾ

ಪರವಾನಗಿದಾರರ ಇತರ ವ್ಯವಹಾರದಿಂದ ಬಂದ ಆದಾಯದ ಹಂಚಿಕೆ) ವಿನಿಯಮಗಳು, 2020 ಅನ್ನು ಹೊರಡಿಸಿರುತ್ತದೆ.

2. **ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS) (ಒಂಭತ್ತನೇ ತಿದ್ದುಪಡಿ) 2020, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹನ್ನೊಂದನೇ ತಿದ್ದುಪಡಿ) ವಿನಿಯಮಗಳು, 2020 ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿಗಳು) (ಎರಡನೇ ತಿದ್ದುಪಡಿ) ವಿನಿಯಮಗಳು, 2020**:

ಅಧಿಸೂಚನೆ ಸಂಖ್ಯೆ ಕೆಇಆರ್ ಸಿ/ಸಿಒಎಸ್/ಟೆಕ್/ಡಿಡಿಡಿ/05/20-21/976, ಬೆಂಗಳೂರು ದಿನಾಂಕ 11.12.2020 ರ ಮೂಲಕ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS) (ಒಂಭತ್ತನೇ ತಿದ್ದುಪಡಿ) 2020, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹನ್ನೊಂದನೇ ತಿದ್ದುಪಡಿ) ವಿನಿಯಮಗಳು, 2020 ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿಗಳು) (ಎರಡನೇ ತಿದ್ದುಪಡಿ) ವಿನಿಯಮಗಳು, 2020 ಅನ್ನು ಕರ್ನಾಟಕ ರಾಜ್ಯಪತ್ರಲ್ಲಿ ಪ್ರಕಟಿಸಲಾಗಿದೆ.

'ವಿದ್ಯುತ್ ಪಡೆಯುವುದು' ವಿಶ್ವ ಬ್ಯಾಂಕಿನಿಂದ ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ (ಇಒಡಿಬಿ) ಸೂಚ್ಯಂಕಕ್ಕಾಗಿ ನಿರ್ಣಯಿಸಲ್ಪಟ್ಟ 10 ನಿಯತಾಂಕಗಳಲ್ಲಿ ಒಂದಾಗಿದೆ ಮತ್ತು ಭಾರತದ ಇಒಡಿಬಿ ಸ್ಕೋರ್ ಅನ್ನು ನಿರ್ಧರಿಸಲು ಬೆಂಗಳೂರು ನಗರವನ್ನು ದೇಶದ ಶ್ರೇಯಾಂಕದ ಕಾರ್ಯವಿಧಾನದಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿದೆ. ಸುಧಾರಣೆಗಳನ್ನು ಕಾರ್ಯಗತಗೊಳಿಸಲು ಮತ್ತು ಎಲ್ ಟಿ ಆಧಾರದ ಮೇಲೆ 07 ದಿನಗಳಲ್ಲಿ 150 ಕೆವಿಎ ವರೆಗೆ ರೈಟ್ ಆಫ್ ವೇ (ROW) ಅನುಮತಿಗಳು ಅಗತ್ಯವಿಲ್ಲದಿರುವಲ್ಲಿ ಮತ್ತು ರೈಟ್ ಆಫ್ ವೇ (ROW) ಅನುಮತಿಯ ಅಗತ್ಯವಿದ್ದಲ್ಲಿ 15 ದಿನಗಳ ಒಳಗೆ ವಿದ್ಯುತ್ ಸರಬರಾಜನ್ನು ಒದಗಿಸುವಲ್ಲಿ ಕಾರ್ಯವಿಧಾನವನ್ನು ಸರಳೀಕರಿಸಲು, ವಿದ್ಯುತ್ ಸಚಿವಾಲಯ, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ನಿರ್ದೇಶನಗಳ ಮೇರೆಗೆ, ವಿದ್ಯುತ್ ವಿತರಣಾ ಪರವಾನಗಿದಾರ ಸಂಸ್ಥೆಯಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್, (ಬೆಸ್ಕಾಮ್), ಆಯೋಗದ ಮುಂದೆ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS), ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳು, ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿಗಳು) ವಿನಿಯಮಗಳು, ಇದರ ಹಲವು ಕಂಡಿಕೆಗಳಿಗೆ ತದ್ದುಪಡಿಗಳನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದರಿಂದ, ಆಯೋಗವು ಮೇಲಿನ ತಿದ್ದುಪಡಿಗಳ ವಿನಿಯಮಗಳನ್ನು ಹೊರಡಿಸಿದೆ.

3. ಆರ್ಥಿಕ ವರ್ಷ 2021 ರಲ್ಲಿ ಹೊರಡಿಸಿದ ಪ್ರಮುಖ ಆದೇಶಗಳು:

1. ನವೀಕರಿಸಬಹುದಾದ ವಿದ್ಯುತ್ ಪ್ರಮಾಣಪತ್ರ (ಆರ್.ಇ.ಸಿ) ಉದ್ದೇಶಕ್ಕಾಗಿ 2020-21ರ ಸರಾಸರಿ ರಾಶಿ ವಿದ್ಯುತ್ ಖರೀದಿ ದರ (ಎ.ಪಿ.ಪಿ.ಸಿ) ವನ್ನು ಯಥಾರ್ಥ (Truing Up) ಗೊಳಿಸುವ ಮತ್ತು 2021-22 ರ ತಾತ್ಕಾಲಿಕ ಎ.ಪಿ.ಪಿ.ಸಿ ದರ ಅಧಿಸೂಚಿಸುವ ಆದೇಶ.
2. ಆರ್ಥಿಕ ವರ್ಷ 2021 ಕ್ಕೆ ಪವನ ವಿದ್ಯುತ್ ಯೋಜನೆಗಳಿಗೆ, ವರ್ಗಾನ್ವಯ ದರ ನಿಗದಿಪಡಿಸುವುದು.
3. ಕೋವಿಡ್ - 19 ರ ಕಾರಣದಿಂದಾಗಿ, ಹೆಚ್ಚುವರಿಯಾಗಿ ಠೇವಣಿ ಮಾಡಲಾದ ವಿದ್ಯುಚ್ಛಕ್ತಿಯನ್ನು ಮುಂದೊಯ್ಯುವ ಸಲುವಾಗಿ ಆದೇಶ.
4. ಆ ವ 2020 ರಲ್ಲಿ ನವೀಕರಿಸಬಹುದಾದ ಮೂಲದ ವಿದ್ಯುತ್ ಖರೀದಿ ಬಾಧ್ಯತೆ (ಆರ್ ಪಿ ಒ) ಅನುಸರಣೆ ಮಾಡಲು ಸಮಯವನ್ನು ವಿಸ್ತರಿಸುವ ಆದೇಶ.
5. ಆ ವ 2021 ರಲ್ಲಿ ಅನ್ವಯಿಸುವಂತೆ ಸೌರ ವಿದ್ಯುತ್ ಯೋಜನೆಗಳಿಗೆ (ಸೌರ ಮೇಲ್ಛಾವಣಿ ದ್ಯುತಿವಿದ್ಯುಜ್ಜನಕ ಯೋಜನೆಗಳು ಸೇರಿದಂತೆ) ಆಗಸ್ಟ್ 1, 2019 ರ ದರ ಆದೇಶದ ವಿಸ್ತರಣೆ.
6. ಕರ್ನಾಟಕ ರಾಜ್ಯದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರಗಳಿಗೆ ಸಂಬಂಧಿಸಿದಂತೆ 13.03.2020 ರ ದರ ಆದೇಶದ ಮಾನ್ಯತೆಯ ವಿಸ್ತರಣೆ.

1) ನವೀಕರಿಸಬಹುದಾದ ವಿದ್ಯುತ್ ಪ್ರಮಾಣಪತ್ರ (ಆರ್.ಇ.ಸಿ) ಉದ್ದೇಶಕ್ಕಾಗಿ 2020-21ರ ಸರಾಸರಿ ರಾಶಿ ವಿದ್ಯುತ್ ಖರೀದಿ ದರ (ಎ.ಪಿ.ಪಿ.ಸಿ) ವನ್ನು ಯಥಾರ್ಥ (Truing Up) ಗೊಳಿಸುವ ಮತ್ತು 2021-22 ರ ತಾತ್ಕಾಲಿಕ ಎ.ಪಿ.ಪಿ.ಸಿ ದರ ಅಧಿಸೂಚಿಸುವ ಆದೇಶ:

ನವೀಕರಿಸಬಹುದಾದ ವಿದ್ಯುತ್ ಪ್ರಮಾಣಪತ್ರ (ಆರ್.ಇ.ಸಿ) ಉದ್ದೇಶಕ್ಕಾಗಿ 2020-21 ರ ಸರಾಸರಿ ರಾಶಿ ವಿದ್ಯುತ್ ಖರೀದಿ ದರ (ಎ.ಪಿ.ಪಿ.ಸಿ) ವನ್ನು ಯಥಾರ್ಥ (Truing Up) ಗೊಳಿಸಿ ಮತ್ತು 2021-22 ರ ತಾತ್ಕಾಲಿಕ ಎ.ಪಿ.ಪಿ.ಸಿ ದರ ನಿಗದಿಪಡಿಸಿ ಆಯೋಗವು 19.04.2021 ರಂದು ಆದೇಶಗಳನ್ನು ಜಾರಿಗೊಳಿಸಿತು. ESCOM ಗಳ ಲೆಕ್ಕಪರಿಶೋಧಿತ ಖಾತೆಗಳ ಆಧಾರದ ಮೇಲೆ ಆ.ವ 2021 ಕ್ಕೆ ಯಥಾರ್ಥಗೊಳಿಸಲಾದ (ಎಪಿಪಿಸಿ) ದರವನ್ನು ರೂ.4.17 ಎಂದು ನಿರ್ಧರಿಸಲಾಗಿದೆ. ಕೆಇಆರ್ ಸಿ (ನವೀಕರಿಸಬಹುದಾದ ಮೂಲಗಳಿಂದ ಇಂಧನ ಖರೀದಿ) (ಏಳನೇ ತಿದ್ದುಪಡಿ) ವಿನಿಯಮಗಳು, 2019 ರ ಅಧಿಸೂಚನೆಯ ಪರಿಣಾಮವಾಗಿ, ಆರ್.ಇ.ಸಿ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವ ಜನರೇಟರ್ ಕಂಪನಿಗೆ ರಾಜ್ಯದ ಸಂಗ್ರಹಿತ ವಿದ್ಯುತ್ ಖರೀದಿ ದರವಾದ (Pooled Power Purchase Cost) ರೂ.4.04 ಪ್ರತಿ ಯೂನಿಟ್ ಗೆ ಅಥವಾ ಸಂಬಂಧಿಸಿದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಜನರೇಟರ್ ಗಳಿಗೆ ಆ ವರ್ಷಕ್ಕೆ ಗೊತ್ತು ಪಡಿಸಿದ ವರ್ಗಾನ್ವಯ ದರದ ಶೇ 75 ರಲ್ಲಿ ಯಾವುದು ಕಡಿಮೆಯೋ ಆ ದರದಲ್ಲಿ ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುತ್ ಸರಬರಾಜು ಮಾಡಬೇಕು ಹಾಗೂ 1ನೇ ಏಪ್ರಿಲ್ 2020 ರಿಂದ 31.03.2021 ರವರೆಗೆ

ಸರಬರಾಜು ಮಾಡಿದ ವಿದ್ಯುತ್‌ಗೆ, ಆಯೋಗವು ಕಾಲ ಕಾಲಕ್ಕೆ ನಿಗದಿಪಡಿಸುವ ಸರಾಸರಿ ರಾಶಿ ವಿದ್ಯುತ್ ಖರೀದಿ ದರ (ಎ.ಪಿ.ಪಿ.ಸಿ) ಅಥವಾ ಸಂಬಂಧಿಸಿದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಜನರೇಟರ್ ಗಳಿಗೆ ಆ ವರ್ಷಕ್ಕೆ ಗೊತ್ತು ಪಡಿಸಿದ ವರ್ಗಾನ್ವಯ ದರದ ಶೇ 75 ರಲ್ಲಿ ಯಾವುದು ಕಡಿಮೆಯೋ ಆ ದರದಲ್ಲಿ ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮೂರು ಸಮಾನ ಕಂತುಗಳಲ್ಲಿ ಪಾವತಿ / ಸ್ವೀಕೃತಿ ಮಾಡಬೇಕು.

ಮೇಲಿನ ಆದೇಶದಲ್ಲಿ, ಆಯೋಗವು ಆ.ವ 2021 ಕ್ಕೆ ಪ್ರತಿ ಯೂನಿಟ್ ಗೆ ಯಥಾರ್ಥಗೊಳಿಸುವಿಕೆಗೆ ಒಳಪಟ್ಟಂತೆ ರೂ.4.17 ರಂತೆ ಎಪಿಸಿಸಿಯನ್ನು ನಿರ್ಧರಿಸಿದೆ, ಮತ್ತು ಆರ್.ಇ.ಸಿ ಯೋಜನೆಯ ಅಡಿಯಲ್ಲಿ ವಿದ್ಯುತ್ ಸರಬರಾಜು ಮಾಡುವ ಜನರೇಟರ್ ಕಂಪನಿಗೆ ರೂ.4.17 ಪ್ರತಿ ಯೂನಿಟ್ ಗೆ ಅಥವಾ ಆ.ವ 2022 ಕ್ಕೆ ಸಂಬಂಧಿಸಿದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಜನರೇಟರ್ ಗಳಿಗೆ ಆ ವರ್ಷಕ್ಕೆ ಗೊತ್ತು ಪಡಿಸಿದ ವರ್ಗಾನ್ವಯ ದರದ ಶೇ 75 ರಲ್ಲಿ ಯಾವುದು ಕಡಿಮೆಯೋ ಆ ದರದಲ್ಲಿ ಬಿಲ್ ಮಾಡುವಂತೆ ಎಸ್ಕಾಂಗಳಿಗೆ ನಿರ್ದೇಶನ ನೀಡಿದೆ.

2) ಆರ್ಥಿಕ ವರ್ಷ 2021 ಕ್ಕೆ ಪವನ ವಿದ್ಯುತ್ ಯೋಜನೆಗಳಿಗೆ, ವರ್ಗಾನ್ವಯ ದರ ನಿಗದಿಪಡಿಸುವುದು

ಆಯೋಗವು 06.05.2020 ರಂದು ಆ.ವ 2021 ಕ್ಕೆ ಸಬಂಧಿಸಿದಂತೆ ಪವನ ವಿದ್ಯುತ್ ಯೋಜನೆಗಳಿಗೆ ಪ್ರತಿ ಯೂನಿಟ್‌ಗೆ ರೂ.3.26 ರ ದರವನ್ನು ಮುಂದುವರೆಸಿದೆ. ಮೇಲಿನ ದರವು 01.01.2020 ರಿಂದ 31.03.2021 ರವರೆಗೆ ಜಾರಿಯಲ್ಲಿದ್ದು ದರ ಆಧಾರಿತ ರಿವರ್ಸ್ ಬಿಡ್ ಗಳನ್ನು ಕರೆಯುವ ಉದ್ದೇಶಕ್ಕಾಗಿ ಮತ್ತು ವಿತರಣಾ ಪರವಾನಗಿದಾರರು ಖರೀದಿಸಿದ ಯಾವುದೇ ಠೇವಣಿ (ಬ್ಯಾಂಕ್ ಡ್) ಮಾಡಲಾದ ವಿದ್ಯುತ್‌ನ ಪಾವತಿಗಾಗಿ ಮಿತಿ ದರವಾಗಿರುತ್ತದೆ.

3) ಕೋವಿಡ್ - 19 ರ ಕಾರಣದಿಂದಾಗಿ, ಹೆಚ್ಚುವರಿಯಾಗಿ ಠೇವಣಿ ಮಾಡಲಾದ ವಿದ್ಯುಚ್ಛಕ್ತಿಯನ್ನು ಮುಂದೊಯ್ಯುವ ಸಲುವಾಗಿ ಆದೇಶ:

ಆಯೋಗವು 25.06.2020 ರ ಆದೇಶದಲ್ಲಿ, ಕಿರು ಜಲ ವಿದ್ಯುತ್ ಯೋಜನೆಗಳಿಗೆ ಸಬಂಧಿಸಿದಂತೆ 31.07.2020 ರ ನಂತರ ಬಳಸದೆ ಉಳಿಯುವ ವಿದ್ಯುತ್‌ಗೆ ಎಸ್ಕಾಂಗಳು ಯಾವುದೇ ಬಲೆ ನೀಡದ ಷರತ್ತಿಗೆ ಒಳಪಟ್ಟು, 31.05.2020 ರವರೆಗೆ ಬಳಸದೆ ಉಳಿದಂತಹ, ಠೇವಣಿ ಇರಿಸಿದ ವಿದ್ಯುತ್ ಅನ್ನು 31.07.2020 ರವರೆಗೆ ಕೊಂಡೊಯ್ಯಲು ಅನುಮಿತಿ ನೀಡಿರುತ್ತದೆ.

ಕೋವಿಡ್ –19 ಲಾಕ್‌ಡೌನ್‌ನಿಂದಾಗಿ ಎಂಎನ್‌ಆರ್‌ಇಯ ದಿನಾಂಕ 16.04.2020 ರ ಅಧಿಕೃತ ಜ್ಞಾಪನದಲ್ಲಿ ಠೇವಣಿ ಇಡಲಾದ ವಿದ್ಯುತ್‌ನ ರೋಲ್‌ಓವರ್‌ಗೆ ಅನುಮತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ ಪರಿಣಾಮವಾಗಿ, ಜನರೇಟರ್‌ಗಳ ಪ್ರಾತಿನಿಧ್ಯ, ಸರ್ಕಾರದ ಮತ್ತು

ಎಸ್ಕಾಂಗಳ ಅಭಿಪ್ರಾಯವನ್ನು ಸೂಕ್ತವಾಗಿ ಪರಿಗಣಿಸಿ ಮೇಲಿನ ಆದೇಶವನ್ನು ಹೊರಡಿಸಲಾಗಿದೆ.

ಮೇಲಿನ ಆದೇಶವನ್ನು ಕೆಲವು ಜನರೇಟರ್‌ಗಳು ಮಾನ್ಯ ಎಟಿಇ (ಎ. ನಂ .124 / 2020) ಮತ್ತು ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದ (ಡಬ್ಲ್ಯು ಪಿ ಸಂಖ್ಯೆ 147674/2020 ಮತ್ತು ಡಬ್ಲ್ಯೂ ಪಿ ಸಂಖ್ಯೆ 7362/2021) ಮುಂದೆ ಪ್ರಶ್ನಿಸಿರುವುದರಿಂದ ಈ ವಿಷಯವು ಇನ್ನೂ ಬಾಕಿ ಇರತ್ತದೆ.

4) ಆ ವ 2020 ರಲ್ಲಿ ನವೀಕರಿಸಬಹುದಾದ ಮೂಲದ ವಿದ್ಯುತ್ ಖರೀದಿ ಬಾಧ್ಯತೆ (ಆರ್ ಪಿ ಒ) ಅನುಸರಣೆ ಮಾಡಲು ಸಮಯವನ್ನು ವಿಸ್ತರಿಸುವ ಆದೇಶ.

ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ಪರಿಸ್ಥಿತಿ ಮತ್ತು ತತ್ಪರಿಣಾಮವಾಗಿ ಉದ್ಭವಿಸಿರುವ ಲಾಕ್ ಡೌನ್ ಹಿನ್ನೆಲೆಯಲ್ಲಿ ಆ.ವ. 2020 ರ ಆರ್ ಪಿಒ ಅನುಸರಣೆಗೆ ಮೂರು ತಿಂಗಳ ಕಾಲಾವಕಾಶ ವನ್ನು ವಿಸ್ತರಿಸಿ ಆಯೋಗವು 13.05.2020 ರಂದು ಆದೇಶವನ್ನು ಹೊರಡಿಸಿದೆ. ಹೀಗಾಗಿ, ಆ.ವ. 2020 ರಲ್ಲಿ, ಬಾಧ್ಯತಾ ಘಟಕಗಳು ಅಂದರೆ, ವಿತರಣಾ ಪರವಾನಿಗೆದಾರರು, ಗ್ರಿಡ್ ಗೆ ಸಂಪರ್ಕಿತ ಕ್ಯಾಪ್ಟೀವ್ ಗ್ರಾಹಕರು ಹಾಗೂ ಮುಕ್ತ ಮಾರ್ಗ ಗ್ರಾಹಕರು ನಿಗದಿಪಡಿಸಲಾದ ತಮ್ಮ ನವೀಕರಿಸಬಹುದಾದ ಮೂಲಗಳಿಂದ ಖರೀದಿಸಬೇಕಾದ ಶೇಕಡವಾರು ವಿದ್ಯುತ್ ಪ್ರಮಾಣದ (ಆರ್ ಪಿಒ) ಬಾಧ್ಯತೆಯನ್ನು, 31.08.2020 ರೊಳಗೆ ಪೂರೈಸಬೇಕಾಗಿರುತ್ತದೆ. ಮೇಲೆ ತಿಳಿಸಲಾದ ಅವಧಿಯಲ್ಲಿ ಬಾಧ್ಯತಾ ಘಟಕಗಳು, ಆ.ವ. 2020 ರ ಆರ್ ಪಿಒ ಅಥವಾ ಅದರ ಭಾಗವನ್ನು ಪೂರೈಸದಿದ್ದಲ್ಲಿ, ಆರ್ ಪಿಒ ಪೂರೈಸಲು ನಿಗದಿಪಡಿಸಿದ ಪ್ರಮಾಣದ ಶೇ 110 ರಷ್ಟು ಪ್ರಮಾಣದ ಆರ್.ಇ.ಸಿ ಗಳನ್ನು ಖರೀದಿಸಬೇಕಾಗಿರುತ್ತದೆ, ಇದನ್ನು ತಪ್ಪಿದಲ್ಲಿ, ಬಾಧ್ಯಸ್ಥ ಘಟಕವು ವಿದ್ಯುತ್ ಅಧಿನಿಯಮ, 2003 ರ ಪರಿಚ್ಛೇದ 142 ರ ಅಡಿಯಲ್ಲಿ ಕ್ರಮವನ್ನು ಎದುರಿಸಬೇಕಾಗುತ್ತದೆ.

ಆ.ವ. 2020 ರ ಆರ್‌ಪಿಒ ಅನುಸರಣೆ ಮಾಡಲು ಮೇಲಿನ ಸಮಯವನ್ನು 24.08.2020 ರ ಆದೇಶದ ಮೂಲಕ ಮೂರು ತಿಂಗಳುಗಳ ಕಾಲ ವಿಸ್ತರಿಸಲಾಗಿದೆ.

5) ಆ ವ 2021 ರಲ್ಲಿ ಅನ್ವಯಿಸುವಂತೆ ಸೌರ ವಿದ್ಯುತ್ ಯೋಜನೆಗಳಿಗೆ (ಸೌರ ಮೇಲ್ಛಾವಣಿ ದ್ಯುತಿವಿದ್ಯುಜ್ಜನಕ ಯೋಜನೆಗಳು ಸೇರಿದಂತೆ) ಆಗಸ್ಟ್ 1, 2019 ರ ದರ ಆದೇಶದ ವಿಸ್ತರಣೆ.

ಆ.ವ. 2021 ಕ್ಕೆ ಅನ್ವಯಿಸುವಂತೆ ಸೌರ ವಿದ್ಯುತ್ ಯೋಜನೆಗಳಿಗೆ (ಸೌರ ಮೇಲ್ಛಾವಣಿ ದ್ಯುತಿವಿದ್ಯುಜ್ಜನಕ ಯೋಜನೆಗಳು ಸೇರಿದಂತೆ) ದರವನ್ನು ನಿರ್ಧರಿಸುವ ವಿಷಯದಲ್ಲಿ 1ನೇ ಆಗಸ್ಟ್ 2019 ರ ಆಯೋಗದ ಆದೇಶದ ಮಾನ್ಯತೆಯನ್ನು 1ನೇ ಏಪ್ರಿಲ್ 2020 ರಿಂದ 31ನೇ ಮಾರ್ಚ್ 2021 ರವರೆಗೆ ಒಂದು ವರ್ಷದವರೆಗೆ ವಿಸ್ತರಿಸಲಾಗಿದೆ.

ಈ ಆದೇಶವನ್ನು ಹೊರಡಿಸಿದ ದಿನಾಂಕದ ನಂತರ ಆಯೋಗವು ಅನುಮೋದಿಸುವ 01.04.2020 ರಂದು ಅಥವಾ ನಂತರ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಳ್ಳುವ ಮತ್ತು 01.04.2020 ರಂದು ಅಥವಾ ನಂತರ ವಾಣಿಜ್ಯ ಕಾರ್ಯಾಚರಣೆಯನ್ನು ಸಾಧಿಸುವ ಎಲ್ಲಾ ಹೊಸ ಸೌರ ವಿದ್ಯುತ್ ಯೋಜನೆಗಳಿಗೆ ಅಂತಹ ಸುಂಕವು ಅನ್ವಯಿಸುತ್ತದೆ.

6) **ಕರ್ನಾಟಕ ರಾಜ್ಯದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರಗಳಿಗೆ ಸಂಬಂಧಿಸಿದಂತೆ 13.03.2020 ರ ದರ ಆದೇಶದ ಮಾನ್ಯತೆಯ ವಿಸ್ತರಣೆ.**

ಕರ್ನಾಟಕ ರಾಜ್ಯದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರಗಳಿಗೆ ಸಂಬಂಧಿಸಿದಂತೆ 13.03.2020 ರ ದಿನಾಂಕದ ಆಯೋಗದ ಆದೇಶದ ಮಾನ್ಯತೆಯನ್ನು 01.10.2020 ರಿಂದ 31.03.2021 ರವರೆಗೆ ಇನ್ನೂ 6 ತಿಂಗಳುಗಳ ಕಾಲ ವಿಸ್ತರಿಸಿದೆ.

10.6 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಾರ್ಷಿಕ ಲೆಕ್ಕಪತ್ರಗಳ) (ಎರಡನೇ ತಿದ್ದುಪಡಿ) ನಿಯಮಗಳು, 2020

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ವಾರ್ಷಿಕ ಲೆಕ್ಕಪತ್ರಗಳ) ನಿಯಮ - 2001 ರ ಎರಡನೇ ತಿದ್ದುಪಡಿಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ 03.02.2021 ರಂದು ಅಧಿಸೂಚಿಸಲಾಯಿತು.

ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 103 ರಲ್ಲಿ ಸೂಚಿಸಿರುವಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಧಿಯನ್ನು ರಚಿಸಲು ಸಾಧ್ಯವಾಗುವಂತೆ ಮೇಲಿನ ನಿಯಮಗಳಿಗೆ ತಿದ್ದುಪಡಿ ಅಗತ್ಯವಾಗಿತ್ತು. ಕೆಇಆರ್‌ಸಿ ನಿಧಿಯನ್ನು ರಚಿಸುವುದರಿಂದ ಆಯೋಗಕ್ಕೆ ಹೆಚ್ಚಿನ ಆರ್ಥಿಕ ಸ್ವಾಯತ್ತತೆಯು ಲಭಿಸುತ್ತದೆ ಮತ್ತು ಅದರ ಕಾರ್ಯಗಳನ್ನು ಸ್ವತಂತ್ರ, ಮುಕ್ತ ಮತ್ತು ನ್ಯಾಯಯುತ ರೀತಿಯಲ್ಲಿ ನಿರ್ವಹಿಸಲು ಅನುವು ಮಾಡಿಕೊಡುತ್ತದೆ.

10.7 ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳು (ಎಫ್.ಎ.ಸಿ.):

ಆಯೋಗವು, ಆರ್ಥಿಕ ವರ್ಷ 2021 ರ ಪ್ರತಿ ತ್ರೈಮಾಸಿಕದ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕ (ಎಫ್.ಎ.ಸಿ.) ನಿಗದಿಪಡಿಸಿ ಆದೇಶಗಳನ್ನು ಹೊರಡಿಸಿದೆ.

ಎಸ್ಕಾಂಗಳು	ಆದೇಶ ಸಂ: 234 ದಿನಾಂಕ 22.06.2019	ಆದೇಶ ಸಂ: 528 ದಿನಾಂಕ 22.09.2020	ಆದೇಶ ಸಂ: 1147 ದಿನಾಂಕ 23.12.2020	ಆದೇಶ ಸಂ: 1644 ದಿನಾಂಕ 22.03.2021*
ಬೆಸ್ಕಾಂ	12	04	08	- 21
ಮೆಸ್ಕಾಂ	09	02	05	-16
ಸೆಸ್ಕ್	08	02	05	-16
ಹೆಸ್ಕಾಂ	06	0	04	-22
ಜೆಸ್ಕಾಂ	09	04	05	-12

*ಎಲ್ಲಾ ESCOM ಗಳ ಉಳಿತಾಯವನ್ನು FY21 ರ ಮುಂದಿನ ತ್ರೈಮಾಸಿಕಕ್ಕೆ ಕೊಂಡೊಯ್ಯಲಾಗಿದೆ

10.8 2021 ರ ಮಾರ್ಚ್‌ವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಅನುಮೋದಿಸಿದ ನವೀಕರಿಸಬಹುದಾದ ಇಂಧನ ಮೂಲಗಳ (ಆರ್.ಇ) ವಿದ್ಯುತ್ ಖರೀದಿ ಒಪ್ಪಂದ (ಪಿಪಿಎ) ಗಳು:

ಆಯೋಗವು ಅನುಮೋದಿಸಿದ ವಿದ್ಯುತ್ ಸರಬರಾಜು ಕಂಪನಿವಾರು ವಿದ್ಯುತ್ ಖರೀದಿ ಒಪ್ಪಂದಗಳ ಸಂಚಿತ ಸ್ಥಿತಿಗತಿ ಈ ಕೆಳಗಿನಂತಿದೆ:

ಆರ್ಥಿಕ ವರ್ಷ 2021 ರಲ್ಲಿ ಆಯೋಗವು ಅನುಮೋದಿಸಿದ ಆರ್ ಇ, ಪಿಪಿಎ ಗಳು												
ವಿಧ	ಬೆಸ್ಕಾಂ		ಮೆಸ್ಕಾಂ		ಸೆಸ್ಕ್		ಹೆಸ್ಕಾಂ		ಏಕಸ್		ಒಟ್ಟು	
	ವಿದ್ಯುತ್ ಖರೀದಿ ಒಪ್ಪಂದಗಳ ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ವಿದ್ಯುತ್ ಖರೀದಿ ಒಪ್ಪಂದಗಳ ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ವಿದ್ಯುತ್ ಖರೀದಿ ಒಪ್ಪಂದಗಳ ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ವಿದ್ಯುತ್ ಖರೀದಿ ಒಪ್ಪಂದಗಳ ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ವಿದ್ಯುತ್ ಖರೀದಿ ಒಪ್ಪಂದಗಳ ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ವಿದ್ಯುತ್ ಖರೀದಿ ಒಪ್ಪಂದಗಳ ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ
ಪವನ	-	-	-	-	-	-	5	20	-	-	5	20
ಸೌರಶಕ್ತಿ	-	-	-	-	-	-	-	-	-	-	-	-
ಸಹ ಉತ್ಪಾದನೆ	-	-	-	-	-	-	-	-	-	-	-	-
ಕಿರುಜಲ ವಿದ್ಯುತ್	-	-	-	-	-	-	-	-	-	-	-	-
ಸೌರ ಮೇಲ್ಛಾವಣಿ	06	4.725	01	1.2	03	1.875	01	0.544	1	2.0	12	10.344
ಜೈವಿಕ ಇಂಧನ	-	-	-	-	-	-	-	-	-	-	-	-
ಒಟ್ಟು	06	4.725	01	1.2	03	1.875	06	20.544	1	2.0	17	30.344

ಆಯೋಗವು ಅನುಮೋದಿಸಿದ ವಿದ್ಯುತ್ ಸರಬರಾಜು ಕಂಪನಿವಾರು ವಿದ್ಯುತ್ ಖರೀದಿ ಪೂರಕ ಒಪ್ಪಂದಗಳ ಸಂಚಿತ ಸ್ಥಿತಿಗತಿ ಈ ಕೆಳಗಿನಂತಿದೆ:

ಆ.ವ.2021 ರಲ್ಲಿ ಆಯೋಗವು ಅನುಮೋದಿಸಿದ ಪೂರಕ ಆರ್ಇ ಪಿಪಿಎಗಳು												
ವಿಧ	ಬೆಸ್ಕಾಂ		ಮೆಸ್ಕಾಂ		ಸೆಸ್ಕ್		ಹೆಸ್ಕಾಂ		ಜೆಸ್ಕಾಂ		ಒಟ್ಟು	
	ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ	ಸಂಖ್ಯೆ	ಸಾಮರ್ಥ್ಯ ಮೆ.ವ್ಯಾ
ಸೌರಶಕ್ತಿ	1	1.0	-	-	-	-	1	3	-	-	2	4
ಪವನ	11	24.8	4	11.9	1	3.75	10	4.8	6	10.2	32	55.45
ಜೈವಿಕ ಇಂಧನ	-	-	-	-	-	-	-	-	1	6	1	6
ಕಿರುಜಲ ವಿದ್ಯುತ್	-	-	2	12	-	-	1	4.5	-	-	3	16.5
ಒಟ್ಟು	12	25.8	6	23.9	1	3.75	12	12.3	7	16.2	38	81.95

10.9 ಆ.ವ. 2019 ಮತ್ತು ಆ.ವ. 2020 ಕ್ಕೆ ಪ್ರಸರಣ ಮತ್ತು ವಿತರಣಾ ಪರವಾನಿಗೆದಾರರ ಬಂಡವಾಳ ಹೂಡಿಕೆಗಳ ಚಾಲನಾ ನಂತರದ ವಿಶ್ಲೇಷಣೆ:

ಆಯೋಗವು, ಪ್ರಸರಣ ಮತ್ತು ವಿತರಣಾ ಪರವಾನಿಗೆದಾರರ ಬಂಡವಾಳ ಹೂಡಿಕೆಯ ಸಾರ್ಥಕತೆ ಪರೀಕ್ಷೆಯನ್ನು ಪ್ರತಿ ವರ್ಷ ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಸಂಧರ್ಭದಲ್ಲಿ ನಡೆಸುತ್ತಿದೆ. ಸಾರ್ಥಕತೆ ಮಾನಕಗಳನ್ನು ಸಾಧಿಸದೇ ಇರುವ ಕಾಮಗಾರಿಗಳ ಮೇಲಿನ ಬಡ್ಡಿ ಮೊತ್ತ ಮತ್ತು ಸವಕಳಿಯನ್ನು ಸಂಬAಧಿಸಿದ ವರ್ಷಗಳ ವಾರ್ಷಿಕ ಕಾರ್ಯನಿರ್ವಹಣೆ ಪುನರ್ ಮನನ ಸಂಧರ್ಭದಲ್ಲಿ ಪರಿಷ್ಕೃತ ವಾರ್ಷಿಕ ಕಂದಾಯ ಅಗತ್ಯತೆಯಲ್ಲಿ, ಆಯೋಗವು ನಮಂಜೂರು ಮಾಡುತ್ತಿದೆ / ಕಡಿತಗೊಳಿಸುತ್ತಿದೆ.

10.10 ಪ್ರಸರಣ ಜಾಲದ ವ್ಯವಸ್ಥೆಯ ಲಭ್ಯತೆ:

ಆ.ವ. 2021 ಕ್ಕೆ ಕೆ.ಪಿ.ಟಿ.ಸಿ.ಎಲ್. ಪ್ರಸರಣ ಜಾಲದ ಲಭ್ಯತೆ (ಟಿ.ಎಸ್.ಎ) ಯನ್ನು ಸಲ್ಲಿಸಿದೆ. ಗುರಿಗಿಂತ ಹೆಚ್ಚಿನ ಪ್ರಸರಣ ವ್ಯವಸ್ಥೆ ಲಭ್ಯತೆ ಮಟ್ಟವನ್ನು ಸಾಧಿಸಲು ಪ್ರೋತ್ಸಾಹಕಗಳನ್ನು ವಾರ್ಷಿಕ ಕಾರ್ಯಸಾಧನಾ ಪುನರ್ಮನನ ಲೆಕ್ಕ ಹಾಕುವ ಸಂದರ್ಭದಲ್ಲಿ ಪ್ರೋತ್ಸಾಹಕಗಳನ್ನು ಅಂಶೀಕರಿಸುವ ಮೊದಲು, ಕೆಪಿಟಿಸಿಎಲ್‌ನಿಂದ ಸಲ್ಲಿಸಲಾದ ಪ್ರಸರಣ ವ್ಯವಸ್ಥೆ ಲಭ್ಯತೆ (ಟಿಎಸ್‌ಎ) ಯನ್ನು ಆಯೋಗವು ಪರಿಶೀಲಿಸಿದೆ.

10.11 ಆಯೋಗದ ಸಭೆಗಳು

ಪ್ರಸಕ್ತ ವರ್ಷದಲ್ಲಿ ಆಯೋಗವು ವಿದ್ಯುತ್ ಕ್ಷೇತ್ರದ ಹಲವು ವಿಷಯಗಳನ್ನು ಚರ್ಚಿಸಲು 12 ಸಭೆಗಳನ್ನು ನಡೆಸಿದೆ. ಆಯೋಗದ ಸಭೆಗಳಲ್ಲಿ ಚರ್ಚಿಸಲ್ಪಟ್ಟ ಕೆಲವು ಪ್ರಮುಖ ಸಂಗತಿಗಳು ಮುಂದಿನಂತಿವೆ:

i) ಕೆಪಿಟಿಸಿಎಲ್‌ನ APR ನ ಅನುಮೋದನೆ ಮತ್ತು ಪ್ರಸರಣಾ ದರದ ಪರಿಷ್ಕರಣೆ.

ii) ಎಲ್ಲಾ ಎಸ್ಕಾಂಗಳು, ಹುಕ್ಕೇರಿ ಆರ್.ಇ.ಸಿ.ಎಸ್ ಮತ್ತು ಎಸ್ ಇ ಝಡ್ ಗಳ APR ಮತ್ತು ARR ನ ಅನುಮೋದನೆ ಹಾಗೂ ಚಿಲ್ಲರೆ ಪೂರೈಕೆ ದರದ ಪರಿಷ್ಕರಣೆ.

iii) ರಾಜ್ಯದಲ್ಲಿನ ವಿದ್ಯುತ್ ಪರಿಸ್ಥಿತಿಯ ಬಗ್ಗೆ ವಿಮರ್ಶೆ.

iv) ಹೊಸ ವಿನಿಯಮಗಳು ಮತ್ತು ವಿನಿಯಮಗಳಿಗೆ ತಿದ್ದುಪಡಿಗಳನ್ನು ಹೊರಡಿಸುವಿಕೆ.

v) ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಇತರೆ ಭಾದ್ಯತಾ ಘಟಕಗಳ ಆರ್.ಪಿ.ಓ ಅನುಪಾಲನೆಯ ಮೇಲ್ವಿಚಾರಣೆ ಮತ್ತು ಪರಿಶೀಲನೆ.

vi) ಪ್ರತಿ ತ್ರೈಮಾಸಿಕಕ್ಕೆ ಇಂಧನ ದರ ಹೊಂದಾಣಿಕೆ ಶುಲ್ಕಗಳ (ಎಫ್‌ಎಸಿ) ಅನುಮೋದನೆ.

vii) ಕೆಪಿಟಿಸಿಎಲ್, ವಿ.ಸ. ಕಂಪನಿಗಳು ಮತ್ತು ಹುಕ್ಕೇರಿ ಆರ್.ಇ.ಸಿ.ಎಸ್‌ಗಳ ಬಂಡವಾಳ ಹೂಡಿಕೆ ವೆಚ್ಚಗಳ ಸಾರ್ಥಕತೆ ಪರೀಕ್ಷೆ.

viii) ರಾಜ್ಯ ಸಲಹಾ ಸಮಿತಿಗೆ ಮತ್ತು ಜಿಲ್ಲಾ ಮಟ್ಟದ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗಳಿಗೆ (ಸಿಜಿಆರ್‌ಎಫ್) ಸದಸ್ಯರ ನೇಮಕಾತಿ.

ix) ಆಯೋಗದ ಇತರೆ ಆಡಳಿತಾತ್ಮಕ ವಿಷಯಗಳು.

ಆರ್ಥಿಕ ವರ್ಷ 2020 – 21 ರಲ್ಲಿ ಸಲಹಾ ಸಮಿತಿಯ ಕಾರ್ಯ ಚಟುವಟಿಕೆಗಳು

11. ಆಯೋಗದ ಸಲಹಾ ಸಮಿತಿ

11.1 1999ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮದ ಪರಿಚ್ಛೇದ 34 ಹಾಗೂ 2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 87 ರಲ್ಲಿ ಅಡಕವಾಗಿರುವ ಉಪಬಂಧಗಳ ಅನುಸಾರವಾಗಿ, ಆಯೋಗವು ಕೆಳಕಂಡ ವಿಷಯಗಳ ಬಗ್ಗೆ ಸಲಹೆ ಪಡೆಯಲು ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಚಿಸಿದೆ.

(i) ಪರವಾನಿಗೆದಾರರು ಒದಗಿಸುವ ಸೇವೆಗಳ ಗುಣಮಟ್ಟ, ನಿರಂತರತೆ ಮತ್ತು ವ್ಯಾಪ್ತಿಗಳಿಗೆ ಸಂಬಂಧಿಸಿದ ಸಂಗತಿಗಳು;

(ii) ಪರವಾನಿಗೆದಾರರಿಂದ ಅವರ ಪರವಾನಗಿಯ ಷರತ್ತುಗಳು ಮತ್ತು ಅವಶ್ಯಕತೆಗಳ ಅನುಪಾಲನೆ;

(iii) ಕಾರ್ಯನೀತಿ ವಿಷಯಗಳು;

(iv) ಗ್ರಾಹಕರ ಹಿತ ರಕ್ಷಣೆ; ಮತ್ತು

(v) ವಿದ್ಯುತ್ ಪರವಾನಿಗೆದಾರರ ವಿದ್ಯುತ್ ಸರಬರಾಜು ಹಾಗೂ ಕಾರ್ಯನಿರ್ವಹಣೆಯ ಒಟ್ಟಾರೆ ಗುಣಮಟ್ಟ.

ಸಲಹಾ ಸಮಿತಿಯ ಪ್ರಸ್ತುತ ಸದಸ್ಯರ ಹೆಸರುಗಳನ್ನು **ಅನುಬಂಧ 2** ರಲ್ಲಿ ನೀಡಲಾಗಿದೆ.

11.2 ಸಲಹಾ ಸಮಿತಿ ಸಭೆಗಳಲ್ಲಿ ಚರ್ಚಿಸಲ್ಪಟ್ಟ ಪ್ರಮುಖ ವಿಷಯಗಳ ಬಗ್ಗೆ ಸಂಕ್ಷಿಪ್ತ ಪಟ್ಟಿ:

ಪ್ರಸ್ತುತ ವರ್ಷದಲ್ಲಿ ಸಲಹಾ ಸಮಿತಿಯ ಮೂರು ಸಭೆಗಳನ್ನು ನಡೆಸಲಾಗಿದೆ.

(1) 27 ನೇ ಆಗಸ್ಟ್ 2020 ರಂದು ನಡೆದ 61 ನೇ ಸಲಹಾ ಸಮಿತಿ ಸಭೆಯಲ್ಲಿ:

ಕೆಪಿಟಿಸಿಎಲ್ ತನ್ನ ಪ್ರಸ್ತುತಿಯಲ್ಲಿ ಗುರುತಿಸಲಾದ ಮತ್ತು ಸರಿಪಡಿಸಿದ ವಿವಿಧ ಅಪಾಯಕಾರಿ ಸ್ಥಳಗಳ ಬಗ್ಗೆ ವಿವರಣೆಯನ್ನು ನೀಡಿದೆ. ಆರ್ ಇ ಉತ್ಪಾದನೆಯನ್ನು ಸಾಗಿಸಲು ವ್ಯವಸ್ಥೆಯ ನಿರ್ಬಂಧಗಳನ್ನು ಕಡಿಮೆ ಮಾಡಲು ಹಸಿರು ಇಂಧನ ಕಾರಿಡಾರ್ ಹಂತ-1 ರ ಅಡಿಯಲ್ಲಿ ಏಳು ಯೋಜನೆಗಳನ್ನು ಕೈಗೆತ್ತಿಕೊಂಡಿರುವುದಾಗಿ ಕೆಪಿಟಿಸಿಎಲ್ ಮಾಹಿತಿ ನೀಡಿದೆ.

ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿನ ಸ್ಥಿತಿಗತಿ ಮತ್ತು ಹೆಚ್ಚುವರಿ ವಿದ್ಯುತ್ ಮಾರಾಟದ ಕುರಿತು ಪಿಸಿಕೆಎಲ್ ಪ್ರಸ್ತುತಿಯನ್ನು ನೀಡಿತು.

ಕೆಪಿಸಿಎಲ್ ತನ್ನ ಪ್ರಸ್ತುತಿಯ ಸಮಯದಲ್ಲಿ ಕೆಪಿಸಿಎಲ್ ಉತ್ಪಾದನಾ ಕೇಂದ್ರಗಳ ಸ್ಥಿತಿ, ಕೆಪಿಸಿಎಲ್ ಉತ್ಪಾದನಾ ಕೇಂದ್ರಗಳಲ್ಲಿ ಎಬಿಟಿ ಅನುಸರಣಾ ಮೀಟರ್ ಗಳ ಅನುಷ್ಠಾನದ ಸ್ಥಿತಿ ಮತ್ತು ಪಂಪ್ ಮಾಡಿದ ಶೇಖರಣಾ ಘಟಕಗಳ ಸ್ಥಿತಿಯ ಬಗ್ಗೆ ಮಾಹಿತಿ ನೀಡಿರುತ್ತದೆ.

ಅಲ್ಲದೆ, ಸಮಿತಿಯು 2020 ರ ಜುಲೈ 31 ರ ವರೆಗಿನ ಜಿಪಿಎಸ್ ಸಮೀಕ್ಷೆಯ ದತ್ತಾಂಶವನ್ನು ಉಲ್ಲೇಖಿಸಿ 11 ಕೆವಿ ಫೀಡರ್ ವಾರು ಲೈವ್ ಐಪಿ ಸ್ಥಾವರಗಳ ಸಂಖ್ಯೆಯನ್ನು ಎಣಿಕೆ ಮಾಡುವ ಬಗ್ಗೆ ಚರ್ಚಿಸಿತು.

(2) 4ನೇ ಜನವರಿ 2021 ರಂದು ನಡೆದ 62 ನೇ ಸಲಹಾ ಸಮಿತಿ ಸಭೆಯಲ್ಲಿ:

ಪಿ.ಸಿ.ಕೆ.ಎಲ್ ಏಪ್ರಿಲ್, 2020 ರಿಂದ ನವೆಂಬರ್, 2020 ರ ಅವಧಿಗೆ ವಾಸ್ತವಿಕ ಲಭ್ಯತೆ, ಅವಶ್ಯಕತೆ ಮತ್ತು ಹೆಚ್ಚುವರಿ ವಿದ್ಯುತ್ ನ ವಿವರಗಳನ್ನು ಸಲ್ಲಿಸಿತ್ತು. ದುಬಾರಿ ಪಿಒಸಿ ದರ ಮತ್ತು ದಡಮುಟ್ಟಿದ (landed cost) ಶುಲ್ಕಗಳಿಂದಾಗಿ ಕೇಂದ್ರೀಯ ಉತ್ಪಾದನಾ ಕೇಂದ್ರಗಳಿಂದ (ಸಿಜಿಎಸ್) ಹಂಚಿಕೆಯಾದ ವಿದ್ಯುಚ್ಛಕ್ತಿಯ ನಿಗದಿತ ದರವು ತುಂಬಾ ಹೆಚ್ಚಾಗಿದೆ ಎಂದು ಬೆಸ್ಕಾಮ್ ನ ವ್ಯವಸ್ಥಾಪಕ ನಿರ್ದೇಶಕರು (ವ್ಯಾಪಾರ ಸಮಿತಿಯ ಅಧ್ಯಕ್ಷರು) ವಿವರಿಸಿದರು ಮತ್ತು ದುಬಾರಿ ಸಿಜಿಎಸ್ ವಿದ್ಯುಚ್ಛಕ್ತಿಯನ್ನು ಪಿಪಿಎದಲ್ಲಿನ ನಿರ್ಗಮನ ಷರತ್ತುಗಳನ್ನು ವಿಶ್ಲೇಷಿಸುವ ಮೂಲಕ ಒಪ್ಪಿಸುವ ಸಾಧ್ಯತೆಗಳನ್ನು ಕರ್ನಾಟಕ ಸರ್ಕಾರವು ಅನ್ವೇಷಿಸಬಹುದು ಎಂದು ವಿನಂತಿಸಿದರು.

ಹೆಚ್ಚುವರಿ ವಿದ್ಯುತ್ ಲಭ್ಯವಿರುವುದರಿಂದ ಸಂಜೆ ಯಾವುದೇ ಗರಿಷ್ಠ ಕೊರತೆಗಳನ್ನು ಪರಿಗಣಿಸದೆ, ಸಂಜೆ ಟಿಒಡಿ ಮೂಲಕ ವಿಧಿಸಲಾಗುತ್ತಿರುವ ದಂಡ ಶುಲ್ಕವನ್ನು ತೆಗೆದುಹಾಕಬಹುದು ಎಂದು ಸಲಹಾ ಸಮಿತಿಯ ಸದಸ್ಯರಾದ ಶ್ರೀ. ಪಿ.ಎಸ್. ಜಗನ್ನಾಥ ಗುಪ್ತಾ ಅಭಿಪ್ರಾಯಪಟ್ಟಿದ್ದಾರೆ. ಕೆಪಿಸಿಎಲ್ ತನ್ನ ಪ್ರಸ್ತುತಿಯಲ್ಲಿ, ಹೆಚ್ಚಿನ ಆರ್ ಇ ಏಕೀಕರಣ ಮತ್ತು ಹೆಚ್ಚಿನ ಸ್ಥಿರ ಶುಲ್ಕಗಳ ಕಾರಣಗಳಿಂದಾಗಿ ಶಾಖೋತ್ಪನ್ನ ಸಾಮರ್ಥ್ಯವು ಸಿಲುಕಿಕೊಂಡಿದ್ದು, ವರ್ಷಗಳಲ್ಲಿನ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಶಾಖೋತ್ಪನ್ನ ಉತ್ಪಾದನೆಯಲ್ಲಿನ ಕುಸಿತವನ್ನು ಶೇಕಡಾವಾರು ಪ್ರಮಾಣದಲ್ಲಿ ತೋರಿಸಿ, ಇದರ ಪರಿಣಾಮವಾಗಿ ಕೆಪಿಸಿಎಲ್ ಶಾಖೋತ್ಪನ್ನ ಕೇಂದ್ರಗಳ ಶೇಕಡಾವಾರು ಪಿಎಲ್ ಎಫ್ ಪ್ರಮಾಣವು ಆ.ವ 2016 ರಲ್ಲಿದ್ದ ಶೇ 77.38 ರಿಂದ ಆ.ವ 2020 ರಲ್ಲಿ ಶೇ 28.70 ಕ್ಕೆ ಇಳಿದಿದೆ ಎಂದು ತಿಳಿಸಿರುತ್ತಾರೆ.

ವ್ಯತ್ಯಯ ಸಾಧ್ಯ (ವೇರಿಯಬಲ್) ವೆಚ್ಚವನ್ನು ಕಡಿಮೆ ಮಾಡಲು ಕೆಪಿಸಿಎಲ್ ಜಾರಿಗೆ ತಂದ ಮತ್ತು ಯೋಜಿಸಿದ ವೆಚ್ಚ ಕಡಿತ ಕ್ರಮಗಳನ್ನು ಸಹ ಸಲ್ಲಿಸಿತು. ಶರಾವತಿಯಲ್ಲಿನ ಪಂಪ್ ಮಾಡಿದ ಶೇಖರಣಾ ಯೋಜನೆಗಳ ಸ್ಥಿತಿಗೆ ಸಂಬಂಧಿಸಿದಂತೆ, ಕೆಪಿಸಿಎಲ್ ಅವರು ವಿವಿಧ ಸಂಸ್ಥೆಗಳಿಂದ ಪಡೆಯಬೇಕಾದ ಅನುಮತಿಗಳತ್ತ ಗಮನ ಹರಿಸುತ್ತಿದೆ ಎಂದು ತಿಳಿಸಿರುತ್ತಾರೆ. ಆರ್‌ಟಿಪಿಎಸ್ ಮತ್ತು ವೈಟಿಪಿಎಸ್‌ನಲ್ಲಿ ಎಫ್‌ಜಿಡಿ ವ್ಯವಸ್ಥೆಯನ್ನು ಅಳವಡಿಸಲು ಎಲ್ಒಎ 14.08.2020 ರಂದು ನೀಡಲಾಗಿದ್ದು ಮತ್ತು ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ನಲ್ಲಿ ಇದು ಪೂರ್ಣಗೊಳ್ಳುವ ಅವಧಿ ಕ್ರಮವಾಗಿ 32 ತಿಂಗಳು 33 ತಿಂಗಳು ಎಂದು ಕೆಪಿಸಿಎಲ್ ತಿಳಿಸಿದೆ.

ಕೆಪಿಟಿಸಿಎಲ್ ತನ್ನ ಪ್ರಸ್ತುತಿಯಲ್ಲಿ, ಆರ್ ಇ ಉತ್ಪಾದನೆಯನ್ನು ಸಾಗಿಸಲು ಕೆಪಿಟಿಸಿಎಲ್‌ನ ಪ್ರಸರಣ ವ್ಯವಸ್ಥೆಯಲ್ಲಿನ ನಿರ್ಬಂಧಗಳನ್ನು ಕಡಿಮೆ ಮಾಡುವ ಬಗ್ಗೆ ತೆಗೆದುಕೊಂಡ ಕ್ರಮದ ಯೋಜನಾವಾರು ಸ್ಥಿತಿಗತಿಯನ್ನು ಎತ್ತಿ ತೋರಿಸಿತು. ಆ.ವ 2020 ಮತ್ತು ಆ.ವ 2021 (2020 ರ ಸೆಪ್ಟೆಂಬರ್ ವರೆಗೆ) ಗುರುತಿಸಲಾದ ಮತ್ತು ಸರಿಪಡಿಸಿದ ಅಪಾಯಕಾರಿ ಸ್ಥಳಗಳ ವಿವರಗಳನ್ನು ಸಹ ಅವರು ಸಲ್ಲಿಸಿದರು. ಎಲ್ಲಾ ಎಸ್ಕೋಮ್ ಗಳು ತಮ್ಮ ಪ್ರಸ್ತುತಿಯಲ್ಲಿ ಜಿಪಿಎಸ್ ಸಮೀಕ್ಷೆಯ ದತ್ತಾಂಶಕ್ಕೆ ಸಂಬಂಧಿಸಿದಂತೆ, 11 ಕೆವಿ ಫೀಡರ್-ವಾರು ಐಪಿ ಸ್ಥಾವರಗಳ ದತ್ತಾಂಶ ಮತ್ತು ಎಣಿಕೆಯ ಸ್ಥಿತಿ ಗತಿ,

2020ರ ನವೆಂಬರ್ 30ರವರೆಗೆ ಸಂಭವಿಸಿದ ಅಪಘಾತಗಳ ಸಂಖ್ಯೆ, ಅಪಾಯಕಾರಿ ಸ್ಥಾಪನೆಗಳ ವಿವರಗಳು ಮತ್ತು ಅವುಗಳನ್ನು ಸರಿಪಡಿಸಲು ಕೈಗೊಂಡ ಕ್ರಮ, ಮತ್ತು 2020ರ ಸೆಪ್ಟೆಂಬರ್ ವರೆಗಿನ ವಾಸ್ತವಿಕ ಆದಾಯ / ವೆಚ್ಚವನ್ನು ಪರಿಗಣಿಸಿ, ಸಾಲಗಳ ಮೇಲಿನ ಬಡ್ಡಿ ಹೊರೆಯನ್ನು ಕಡಿಮೆ ಮಾಡಲು ಕೈಗೊಂಡ ಕ್ರಮಗಳ ವಿವರಗಳು ಮತ್ತು ಸರ್ಕಾರಿ ಇಲಾಖೆಗಳಿಂದ ಬಾಕಿ ವಸೂಲಾತಿಗೆ ಕೈಗೊಂಡ ಕ್ರಮಗಳ ವಿವರಗಳೊಂದಿಗೆ, ಆರ್ಥಿಕ ವರ್ಷ 2021 ಕ್ಕೆ ಆಯಾ ಕಂಪನಿಗಳ ಆರ್ಥಿಕ ಸ್ಥಿತಿಯನ್ನು ವಿವರಿಸಲಾಯಿತು.

(3) 19ನೇ ಮಾರ್ಚ್ 2021 ರಂದು ನಡೆದ 63 ನೇ ಸಲಹಾ ಸಮಿತಿ ಸಭೆಯಲ್ಲಿ:

ಕೆಪಿಟಿಸಿಎಲ್ ನ ಸಂಕ್ಷಿಪ್ತ ವಿವರ ಮತ್ತು ಕಾರ್ಯಕ್ಷಮತೆಯ ಜೊತೆಗೆ ಆ.ವ 2020 ರ ವಾರ್ಷಿಕ ಕಾರ್ಯಕ್ಷಮತೆಯ ವಿಮರ್ಶೆಯ ಬಗ್ಗೆ ವಿವರಗಳನ್ನು ಪ್ರಸ್ತುತ ಪಡಿಸಿತು. ಆರ್ಥಿಕ ವರ್ಷದ ತಾತ್ಕಾಲಿಕ ಲೆಖ್ಕಪತ್ರಗಳ ಪ್ರಕಾರ ಆ.ವ 2020 ಕ್ಕೆ ಕೆಇಆರ್ ಸಿ ಅನುಮೋದಿತ ಸಿಎಪಿಇಎಕ್ಸ್ (CAPEX) ರೂ.1500 ಕೋಟಿ ಗೆ ಬದಲಾಗಿ ರೂ.2231.63 ಕೋಟಿ ರೂ.ಗಳ ಬಂಡವಾಳ ವೆಚ್ಚವನ್ನು ಮಾಡಲಾಗಿದೆ ಎಂದು ಕೆಪಿಟಿಸಿಎಲ್ ಮಾಹಿತಿ ನೀಡಿದೆ. ಕೆಪಿಟಿಸಿಎಲ್ ಆ.ವ 2020 ರ ತಾತ್ಕಾಲಿಕ ಲೆಖ್ಕಪತ್ರಗಳ ಪ್ರಕಾರ 4157.39 ಕೋಟಿ ರೂಪಾಯಿಗಳ ನಿವ್ವಳ ಎಆರ್ ಆರ್ ಅನ್ನು ಅನುಮೋದಿಸುವಂತೆ ಆಯೋಗವನ್ನು ವಿನಂತಿಸಿತು. ಆ.ವ 2020 ರಲ್ಲಿ ಪ್ರಸರಣ ದರದಿಂದ ಗಳಿಸಿದ ಆದಾಯ 3593.79 ಕೋಟಿ ರೂಪಾಯಿಗಳಾಗಿದ್ದು, ಇದರ ಪರಿಣಾಮವಾಗಿ 563.60 ಕೋಟಿ ರೂಪಾಯಿಗಳ ಆದಾಯದ ಅಂತರ ಉಂಟಾಗಿದೆ ಎಂದು ಕೆಪಿಟಿಸಿಎಲ್ ಮಾಹಿತಿ ನೀಡಿತು. ಆ.ವ 2020 ರಲ್ಲಿನ 28.17 ಕೋಟಿ ರೂಪಾಯಿಗಳ ಎಸ್ ಎಲ್ ಡಿ ಸಿ ಯ ವಾಸ್ತವಿಕ ವೆಚ್ಚವನ್ನು ಅನುಮೋದಿಸುವಂತೆ ಕೆಪಿಟಿಸಿಎಲ್ ಆಯೋಗವನ್ನು ವಿನಂತಿಸಿದೆ.

ಆ.ವ 2022 ರ ದರ ಪ್ರಸ್ತಾಪಗಳ ಬಗ್ಗೆ ಬೆಸ್ಕಾಂ ಪ್ರಸ್ತುತಿ ಯನ್ನು ನೀಡಿತು. 24,462.37 ಕೋಟಿ ರೂಪಾಯಿಗಳ ಒಟ್ಟು ವೆಚ್ಚಕ್ಕೆ (ಆರ್ಥಿಕ ವರ್ಷ 2020 ರಿಂದ ಮುಂದಕ್ಕೆ ಕೊಂಡೊಯ್ಯಲಾದ ಆದಾಯ ಕೊರತೆಯನ್ನು ಒಳಗೊಂಡಂತೆ) 20,905.72 ಕೋಟಿ ರೂಪಾಯಿಗಳಷ್ಟು ಆದಾಯ ಬರಲಿದ್ದು ಇದರ ಪರಿಣಾಮವಾಗಿ ಆರ್ಥಿಕ ವರ್ಷ 2022 ರಲ್ಲಿ 3556.65 ಕೋಟಿ ರೂಪಾಯಿಗಳ ಆದಾಯ ಕೊರತೆಯುಂಟಾಗಲಿದೆ ಎಂದು ಬೆಸ್ಕಾಂ ಸಲ್ಲಿಸಿದೆ. 69% ವಿದ್ಯುತ್ ಖರೀದಿ ವೆಚ್ಚಗಳು, 15% ಪ್ರಸರಣ ಶುಲ್ಕಗಳು ಮತ್ತು 16% ನಿರ್ವಹಣಾ ವೆಚ್ಚಗಳನ್ನು ಆ.ವ 2020 ರ ಒಟ್ಟು ಎಆರ್ಆರ್ ಒಳಗೊಂಡಿದೆ ಎಂದು ಅವರು ಸಲ್ಲಿಸಿದರು. ಆ.ವ 2020 ರ ವಾಸ್ತವಿಕ ಮಾರಾಟವು ಅನುಮೋದಿತ ಮಾರಾಟಕ್ಕಿಂತ ಕಡಿಮೆಯಾಗಿದೆ ಎಂದು ಶ್ರೀ ಶ್ರೀನಾಥ ಭಂಡಾರಿ ಅವರು ತಿಳಿಸಿದರು. ಅದರಂತೆ, ಎಚ್ಟಿ ಗ್ರಾಹಕರನ್ನು ಗ್ರಿಡ್‌ಗೆ ಮರಳಿ ತರಲು ಬೆಸ್ಕಾಮ್ ಕೆಲವು ಆಕರ್ಷಕ ಯೋಜನೆಗಳನ್ನು ಜಾರಿಗೆ ತರಬೇಕಾಗಿರುತ್ತದೆ.

ಸೆಸ್ಕ್ ತನ್ನ ಪ್ರಸ್ತುತಿಯಲ್ಲಿ ಆ.ವ 2020 ಕ್ಕೆ 4729.51 ಕೋಟಿ ರೂ.ಗಳ ನಿವ್ವಳ ಎಆರ್ ಆರ್ ಮತ್ತು 4362.88 ಕೋಟಿ ರೂ.ಗಳ ಆದಾಯವನ್ನು ಪರಿಗಣಿಸಿ, ರೂ.366.63 ಕೋಟಿ ಗಳ ಕೊರತೆಯನ್ನು ಅಂದಾಜಿಸಿದೆ. ಆ.ವ 2022 ಕ್ಕೆ ಸೆಸ್ಕ್ ರೂ.5019.12 ಕೋಟಿ ಆದಾಯ ಮತ್ತು ರೂ.6024.12 ಕೋಟಿ

ರೂ.ಗಳ ನಿವ್ವಳ ಎ.ಆರ್.ಆರ್. ಪರಿಗಣಿಸಿ ರೂ.1005.00 ಕೋಟಿ ಗಳ ಕೊರತೆಯನ್ನು ಅಂದಾಜಿಸಿದೆ.

ಹೆಸ್ಕಾಂ, ಜೆಸ್ಕಾಂ ಮತ್ತು ಮೆಸ್ಕಾಂ ಕೂಡ ದರ ಅರ್ಜಿಯ ಪ್ರಮುಖ ಲಕ್ಷಣಗಳನ್ನು ಎತ್ತಿ ತೋರಿಸುತ್ತಾ ಪ್ರಸ್ತುತಿಯನ್ನು ನೀಡಿದವು. ಆ.ವ 2020 ರ ಎಪಿಆರ್‌ನ ದರ ಭಾಗಗಳ ವಿಭಜನೆಯೊಂದಿಗೆ ಆ.ವ 2022 ರ ಪರಿಷ್ಕೃತ ಎಆರ್‌ಆರ್ ಅನ್ನು ಸಹ ಅವರು ಪ್ರಸ್ತುತಪಡಿಸಿದರು. ಬೆಸ್ಕಾಂ ಗ್ರಾಹಕರಿಗೆ, ಎಲ್ಲಾ ವರ್ಗಗಳ ಇಎಚ್ ಟಿ ಸ್ಥಾಪನೆಗಳಿಗೆ ಸುಮಾರು ರೂ.5.00 / ಕಿ.ವ್ಯಾ.ಎಚ್, ಹೆಚ್.ಟಿ ಸ್ಥಾಪನೆಗಳಿಗೆ ರೂ.5.50 / ಕಿ.ವ್ಯಾ.ಎಚ್ ಮತ್ತು ತಮ್ಮ ಸರಾಸರಿ ಬಳಕೆಗಿಂತ ಹೆಚ್ಚಿನ ಶಕ್ತಿಯನ್ನು ಬಳಸಲು ಎಲ್ ಟಿ-5 ಕೈಗಾರಿಕಾ ಗ್ರಾಹಕರಿಗೆ ಕಿ.ವ್ಯಾ.ಎಚ್ ಗೆ ರೂ.6.00 ರ ರಿಯಾಯಿತಿ ದರದಲ್ಲಿ ವಿದ್ಯುತ್ ಅನ್ನು ಒದಗಿಸುವ ಮೂಲಕ ಮಾರಾಟವನ್ನು ಉತ್ತೇಜಿಸಿದಲ್ಲಿ ನಿಗದಿತ ವೆಚ್ಚದ ಹೊರೆಯನ್ನು ಕಡಿಮೆ ಮಾಡಬಹುದೆಂದು ಶ್ರೀ. ಪಿ.ಎಸ್.ಜೆ. ಗುಪ್ತಾ, ಸಲಹಾ ಸಮಿತಿಯ ಸದಸ್ಯರು ಅಭಿಪ್ರಾಯ ಪಟ್ಟಿರುತ್ತಾರೆ. ವಿದ್ಯುತ್ ಮಾರಾಟವನ್ನು ಹೆಚ್ಚಿಸಲು ಮತ್ತು ಪೂರೈಕೆಯ ಸ್ಥಿರತೆಯನ್ನು ಸುಧಾರಿಸಲು ಅಡಚಣೆಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು ಎಂದು ಅವರು ಅಭಿಪ್ರಾಯಪಟ್ಟರು.

2020 – 21 ರಲ್ಲಿ ಆಯೋಗವು ಹೊರಡಿಸಿದ

ನ್ಯಾಯಾಲಯ ಆದೇಶಗಳು

12. ಆಯೋಗದ ನ್ಯಾಯನಿರ್ಣಯ ಚಟುವಟಿಕೆಗಳು

ಆಯೋಗವು ಸಾಮಾನ್ಯವಾಗಿ ಪರವಾನಗಿದಾರರು ಮತ್ತು ಉತ್ಪಾದಕರುಗಳ ನಡುವಿನ ವಿವಾದಗಳ ಇತ್ಯರ್ಥಕ್ಕಾಗಿ ಪ್ರತಿ ವಾರದ ಮಂಗಳವಾರ ಮತ್ತು ಗುರುವಾರ ಮೂಲ ಅರ್ಜಿ / ಪರಿಶೀಲನಾ ಅರ್ಜಿಯ ಮೇಲೆ ನ್ಯಾಯಾಲಯದ ವಿಚಾರಣೆಗಳನ್ನು ನಡೆಸುತ್ತದೆ ಮತ್ತು ದರವನ್ನು ನಿರ್ಧರಿಸುವಲ್ಲಿ ಸಮಾಲೋಚನಾ ಪ್ರಕ್ರಿಯೆಯ ಭಾಗವಾಗಿ ಸಾರ್ವಜನಿಕ ವಿಚಾರಣೆಗಳನ್ನು ನಡೆಸುತ್ತದೆ, ಅಗತ್ಯವಿದ್ದಾಗ ವಿನಿಯಮಗಳನ್ನು ರೂಪಿಸುತ್ತದೆ.

ದೇಶಾದ್ಯಂತ ಕೋವಿಡ್ -19 ಹರಡುವುದನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ, 24.03.2020 ರ ಭಾರತ ಸರ್ಕಾರದ ಆದೇಶದ ಪ್ರಕಾರ, ರಾಜ್ಯ / ಕೇಂದ್ರಾಡಳಿತ ಸರ್ಕಾರಗಳ ಕಛೇರಿಗಳು, ಅವುಗಳ ಸ್ವಾಯತ್ತ ಸಂಸ್ಥೆಗಳು, ನಿಗಮಗಳು ಇತ್ಯಾದಿಗಳು 24.03.2020 ರಿಂದ 14.04.2020 ರವರೆಗಿನ 21 ದಿನಗಳ ಅವಧಿಗೆ ಆರಂಭದಲ್ಲಿ ಮುಚ್ಚಲ್ಪಟ್ಟಿದ್ದವು ಮತ್ತು 03.05.2020 ರವರೆಗೆ ಅದನ್ನು ಮುಂದುವರಿಸಲಾಯಿತು. ಈ ಅವಧಿಯಲ್ಲಿ, ಆಯೋಗವು ಯಾವುದೇ ನ್ಯಾಯಾಲಯದ ವಿಚಾರಣೆಗಳನ್ನು ನಡೆಸಲು ಸಾಧ್ಯವಾಗಲಿಲ್ಲ. ಆದಾಗ್ಯೂ, ಕೋವಿಡ್ -19 ಸಾಂಕ್ರಾಮಿಕ ಪರಿಸ್ಥಿತಿಯ ಪ್ರಚಲಿತದಿಂದಾಗಿ, ದೇಶ / ರಾಜ್ಯದಾದ್ಯಂತ ಸಾಮಾಜಿಕ ಅಂತರ ಮತ್ತು ಲಾಕ್‌ಡೌನ್ ಪರಿಸ್ಥಿತಿಯೊಂದಿಗೆ, ನಿರ್ಬಂಧಿತ ಚಲನೆಗೆ ಕಾರಣವಾದ ಕಾರಣ, ಆಯೋಗವು ಪ್ರತಿ ವಾರದ ಮಂಗಳವಾರ ಮತ್ತು ಗುರುವಾರಗಳಂದು 20.05.2020 ರಿಂದ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ವಿಚಾರಣೆಯನ್ನು ನಡೆಸಲು ನಿರ್ಧರಿಸಿತು.

ಕೋವಿಡ್ ಪ್ರಕರಣಗಳ ಹೆಚ್ಚಳದಿಂದಾಗಿ ಹಾಗೂ 13.07.2020 ರ ದಿನಾಂಕದ ಕರ್ನಾಟಕ ಸರ್ಕಾರದ ಆದೇಶದಂತೆ, ಆಯೋಗವು, ಕೋವಿಡ್ -19 ರ ಹರಡುವಿಕೆಯನ್ನು ನಿಯಂತ್ರಿಸಲು ಕಟ್ಟುನಿಟ್ಟಾದ ಸಾಮಾಜಿಕ ಅಂತರ ಪಾಲಿಸುವುದರೊಂದಿಗೆ ಪ್ರತ್ಯೇಕ ಕ್ರಮಗಳನ್ನು ಅಳವಡಿಸಿಕೊಂಡಿತು. ಸರ್ಕಾರವು, ಮೇಲಿನ ಆದೇಶದ ಮೂಲಕ, 15.07.2020 ರಿಂದ 21.07.2020 ರ ಅವಧಿಯಲ್ಲಿ ಕೆಲವು ವಿನಾಯಿತಿಗಳೊಂದಿಗೆ ರಾಜ್ಯ ಸರ್ಕಾರದ ಕಚೇರಿಗಳು ಮತ್ತು ಅವುಗಳ ಸ್ವಾಯತ್ತ ಸಂಸ್ಥೆಗಳು, ನಿಗಮಗಳು ಇತ್ಯಾದಿಗಳನ್ನು ಮುಚ್ಚುವಂತೆ ಪುನಃ ಆದೇಶಿಸಿದ್ದರಿಂದಾಗಿ, ಈ ಅವಧಿಯಲ್ಲಿ ಆಯೋಗವು ಲಾಕ್‌ಡೌನ್ ನ ನಿಯಮಗಳನ್ನು ಪಾಲಿಸಬೇಕಾಯಿತು.

ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ, ತುರ್ತು ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾತ್ರ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ವಿಚಾರಣೆಯನ್ನು ನಡೆಸಲಾಯಿತು. ಇದು ನ್ಯಾಯಾಲಯದ ಪ್ರಕರಣಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ವಿಲೇವಾರಿ ಮಾಡದಿರಲು ಕಾರಣವಾಯಿತು.

12.1 ವಿವಾದಗಳ ಇತ್ಯರ್ಥಕ್ಕಾಗಿ ಆಯೋಗದ ಮುಂದೆ ಪ್ರಸಕ್ತ ವರ್ಷದಲ್ಲಿ ಸಲ್ಲಿಕೆಯಾದ ಮನವಿಗಳು ಮತ್ತು ದೂರುಗಳ ವಿವರಗಳು, ಮತ್ತು ಅವುಗಳ ವಿಲೇವಾರಿ ಸ್ಥಿತಿಗತಿಗಳು 31.03.2021 ರ ಅಂತ್ಯಕ್ಕೆ ಈ ಕೆಳಗಿನಂತಿವೆ:

ಸಾರಾಂಶ

01.04.2020 ಕ್ಕೆ ಬಾಕಿ ಇರುವ ಪ್ರಕರಣಗಳು	149
ಪ್ರಸಕ್ತ ವರ್ಷದಲ್ಲಿ ಸಲ್ಲಿಸಲ್ಪಟ್ಟ ಪ್ರಕರಣಗಳು ಮತ್ತು ಹಿಂದಕ್ಕೆ ಕಳಿಸಲ್ಪಟ್ಟ ಪ್ರಕರಣಗಳು	141
ಪ್ರಸಕ್ತ ವರ್ಷದಲ್ಲಿ ವಿಲೇವಾರಿಯಾದ ಪ್ರಕರಣಗಳು / ಆರ್ ಪಿ ಒ ಪ್ರಕರಣಗಳು / ಇತರೆ (I/A) ಪ್ರಕರಣಗಳು	054
ಮಧ್ಯಂತರ ಆದೇಶ ನೀಡಿರುವ ಪ್ರಕರಣಗಳು	008
ವರ್ಷಾಂತ್ಯದಲ್ಲಿ ಬಾಕಿಯಿರುವ ಪ್ರಕರಣಗಳು	236

12.2 1 ನೇ ಏಪ್ರಿಲ್ 2019 ರಿಂದ 31 ನೇ ಮಾರ್ಚ್ 2020 ರವರೆಗಿನ ಅವಧಿಯಲ್ಲಿ ವಿಲೇವಾರಿಯಾದ ಮನವಿಗಳು, ದೂರುಗಳು, ಪುನರ್ ಪರಿಶೀಲನಾ ಮನವಿಗಳು ಮತ್ತು ಇತರ ಪ್ರಕರಣಗಳ ವಿವರಗಳು ಈ ಮುಂದಿನಂತಿವೆ:

ಆ.ವ 2020-21 ರಲ್ಲಿ ಆಯೋಗವು ವಿಲೇವಾರಿ ಮಾಡಿದ ಅರ್ಜಿದಾರರ ವಿವರ					
ಕ್ರ. ಸಂ	ಪ್ರಕರಣ ಸಂಖ್ಯೆ	ಸಲ್ಲಿಸಿದ ದಿನಾಂಕ	ಕಕ್ಷಿದಾರರು	ವಿಷಯ	ವಿಲೇವಾರಿ ಮಾಡಿದ ದಿನಾಂಕ
1	OP 63/17	04.05.17	ರೆಡ್ ಅರ್ಥ್ ಗ್ರೀನ್ ಎನರ್ಜಿ ಪ್ರೈ ಲಿ vs ಕೆಪಿಟಿಸಿಎಲ್ & ಇತರರು	ಸೋಲಾರ್ ಪಿಪಿಎ ಅವಧಿ ವಿಸ್ತರಣೆ	29.05.2020
2	OP 176/17	28.09.17	ಮಿತ್ರ ಅಕ್ಷಯ ಎನರ್ಜಿ ಪ್ರೈ ಲಿ vs ಜೆಸ್ಕಾಂ & ಇತರರು	ಅವಧಿ ವಿಸ್ತರಣೆ	29.05.2020
3	OP 202/17	25.10.17	ಮಿತ್ರ ಅದ್ವೈತ್ ಪವರ್ ಪ್ರೈ ಲಿ vs ಬೆಸ್ಕಾಂ & ಇತರರು	ಅವಧಿ ವಿಸ್ತರಣೆ	29.05.2020
4	OP 219/17	17.01.17	ಕ್ಲಿಯರ್ ಸ್ಕೈ ಸೋಲಾರ್ ಪ್ರೈ ಲಿ vs ಜೆಸ್ಕಾಂ & ಇತರರು	ಅವಧಿ ವಿಸ್ತರಣೆ	29.05.2020
5	OP 23/19	12.03.19	ರಾಮಚಂದ್ರಯ್ಯ ಬಿ ಎಂ vs ಬೆಸ್ಕಾಂ & ಇತರರು	ಎಸ್ಆರ್‌ಟಿಪಿವಿ	29.05.2020
6	OP 40/19	03.07.19	ಗೋಲ್ಡನ್ ಹಚ್ಚೆರೀಸ್ vs ಎಸ್ ಎಲ್ ಡಿ ಸಿ & ಇತರರು	ವೀಲಿಂಗ್ & ಬ್ಯಾಂಕಿಂಗ್	29.05.2020
7	Complaint No 05/19	26.08.19	ವಾಲ್ಟಾನ್ ರಿನಿವೆಬಲ್ ಎನರ್ಜಿ ಲಿ vs ಬೆಸ್ಕಾಂ	ಅನುಸರಣೆ ರಹಿತ ಆದೇಶ ಸಂಖ್ಯೆ OP 78/2016, ದಿನಾಂಕ 02.02.2017	29.05.2020
8	OP 38/18	10.04.18	ಆದಾನಿ ಗ್ರೀನ್ ಎನರ್ಜಿ ಲಿ (ರಾಮನಗರ) vs ಬೆಸ್ಕಾಂ & ಇತರರು	ಅವಧಿ ವಿಸ್ತರಣೆ	05.06.2020
9	OP 69/18	08.08.18	ಶ್ರೀ ರೇಣುಕಾ ಶುಗರ್ಸ್ ಲಿ. vs ಕೆಪಿಟಿಸಿಎಲ್ & ಇತರರು	ಪ್ರಸರಣ ನಷ್ಟದ ಕಡಿತ	16.06.2020
10	OP 205/17	26.10.17	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. (ಪೆರಿಯಾಪಟ್ಟಣ) vs ಜೆಸ್ಕಾಂ & ಇತರರು	ಅವಧಿ ವಿಸ್ತರಣೆ	19.06.2020
11	OP 38/19	04.06.19	ಬೆಸ್ಕಾಂ vs ಇಲ್ಲ	ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು ಹಾಗೂ ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿಯ ತಿದ್ದುಪಡಿಗಳು	04.07.19 ಮುಕ್ತಾಯಗೊಂಡಿದೆ/19.06.2020

ಆ.ವ 2020-21 ರಲ್ಲಿ ಆಯೋಗವು ವಿಲೇವಾರಿ ಮಾಡಿದ ಅರ್ಜಿದಾರರ ವಿವರ					
ಕ್ರ. ಸಂ	ಪ್ರಕರಣ ಸಂಖ್ಯೆ	ಸಲ್ಲಿಸಿದ ದಿನಾಂಕ	ಕಕ್ಷಿದಾರರು	ವಿಷಯ	ವಿಲೇವಾರಿ ಮಾಡಿದ ದಿನಾಂಕ
12	OP 209/17	30.10.17	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. (ಮಾಲೂರು) vs ಮೆಸ್ಕಾಂ & ಇತರರು	ಅವಧಿ ವಿಸ್ತರಣೆ	26.06.2020
13	OP 204/17	26.10.17	ಪರಮಪೂಜ್ಯ ಸೋಲಾರ್ ಎನರ್ಜಿ ಪ್ರೈ ಲಿ (ಶೋರಪುರ್) vs ಜೆಸ್ಕಾಂ & ಇತರರು	ಅವಧಿ ವಿಸ್ತರಣೆ	10.07.2020
14	OP 1/18	03.10.18	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. vs ಸೆಸ್ಕ್ & ಇತರರು	ಅವಧಿ ವಿಸ್ತರಣೆ	10.07.2020
15	OP 206/17	26.10.17	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. (ನರಸೀಪುರ) vs ಸೆಸ್ಕ್ & ಇತರರು	ಅವಧಿ ವಿಸ್ತರಣೆ	27.07.2020
16	OP 25/20	24.06.20	ಮೆ ಅಂಬುತೀರ್ಥ ಪವರ್ ಪ್ರೈ.ಲಿ vs ಕೆಪಿಟಿಸಿಎಲ್ & ಇತರರು	ವೀಲಿಂಗ್ & ಬ್ಯಾಂಕಿಂಗ್	04.08.2020
17	OP 224/17	29.11.17	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. (ಜೇವರ್ಗಿ) vs ಜೆಸ್ಕಾಂ & ಇತರರು	ಅವಧಿ ವಿಸ್ತರಣೆ	19.08.2020
18	OP 193/17	12.10.17	ರಾಮಚಂದ್ರಯ್ಯ ಬಿ ಎಂ vs ಬೆಸ್ಕಾಂ & ಇತರರು	ಎಸ್ ಆರ್ ಟಿ ಪಿ ವಿ	19.08.2020
19	OP 25/18	12.03.18	ಶ್ರೀ ಸಿ ರವಿ vs ಬೆಸ್ಕಾಂ	ಎಸ್ ಆರ್ ಟಿ ಪಿ ವಿ	19.08.2020
20	OP 22/20	04.06.20	ಟಿಪ್ಪೋಲ್ ಫೋಟೋವಾಲ್ಟಿಕ್ ಪವರ್ ವೆಂಚರ್ಸ್ ಪ್ರೈ.ಲಿ vs ಬೆಸ್ಕಾಂ	ಅವಧಿ ವಿಸ್ತರಣೆ	20.08.2020
21	OP 125/17	21.07.17	ಪಿ ವೆಂಗಣ್ಣ ಶೆಟ್ಟಿ & ಸಹೋದರರು vs ಜೆಸ್ಕಾಂ	ಬಡ್ಡಿ ಪಾವತಿ	28.02.19 /26.08.2020
22	OP 126/17	21.07.17	ರಾಮ್ ಫಡ್ ಮಿನರಲ್ಸ್ & ಮೈನಿಂಗ್ ಲಿ vs ಜೆಸ್ಕಾಂ	ಬಡ್ಡಿ ಪಾವತಿ	28.02.19 /26.08.2020
23	OP 2/18	03.01.18	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. vs ಬೆಸ್ಕಾಂ & ಇತರರು	ಅವಧಿ ವಿಸ್ತರಣೆ	15.09.2020
24	OP 14/18	07.03.18	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. (ತಿಪಟೂರು) vs ಬೆಸ್ಕಾಂ & ಇತರರು	ಅವಧಿ ವಿಸ್ತರಣೆ	15.09.2020
25	OP 30/18	26.03.18	ಅದಾನಿ ಗ್ರೀನ್ ಎನರ್ಜಿ (ಯು.ಪಿ) ಲಿ. (ಗುಬ್ಬಿ) vs ಬೆಸ್ಕಾಂ & ಇತರರು	ಅವಧಿ ವಿಸ್ತರಣೆ	15.09.2020
26	OP 127/17	26.07.17	ಮಚುಕೊಂಡ ಪ್ರೈ.ಲಿ vs ಜೆಸ್ಕಾಂ	ಬಿಲ್ಲಿಂಗ್ ಆಫ್ ಇಂಪೋರ್ಟ್ ಎನರ್ಜಿ	22.09.2020
27	OP 15 /18	07.03.18	ಅದಾನಿ ಗ್ರೀನ್ ಎನರ್ಜಿ ಲಿ. (ಬ್ಯಾಡಗಿ) vs ಹೆಸ್ಕಾಂ & ಇತರರು	ಅವಧಿ ವಿಸ್ತರಣೆ	11.11.2020
28	OP 29/18	26.03.18	ಅದಾನಿ ಗ್ರೀನ್ ಎನರ್ಜಿ ಲಿ. (ಯು,ಪಿ) ಲಿ. (ಚನ್ನಪಟ್ಟಣ) vs ಹೆಸ್ಕಾಂ & ಇತರರು	ಅವಧಿ ವಿಸ್ತರಣೆ	11.11.2020
29	OP 77/19	06.12.19	ಶ್ರೀ ಎಸ್ ಎ ಪ್ರಸನ್ನ ಕುಮಾರ್	ಎಸ್ ಆರ್ ಟಿ ಪಿ ವಿ	13.11.2020
30	Complaint No 05/20	18.09.20	ಎಮ್ಟಿ ಸೋಲಾರ್ ಸಿಸ್ಟಮ್ಸ್ ಪ್ರೈ ಲಿ vs ಬೆಸ್ಕಾಂ & ಇತರರು	ಅನುಸರಣೆ ರಹಿತ ಮಧ್ಯಂತರ ಆದೇಶ ಸಂಖ್ಯೆ OP 25/19, ದಿನಾಂಕ 14.01.2020	29.12.2020

ಆ.ವ 2020-21 ರಲ್ಲಿ ಆಯೋಗವು ವಿಲೇವಾರಿ ಮಾಡಿದ ಅರ್ಜಿದಾರರ ವಿವರ					
ಕ್ರ. ಸಂ	ಪ್ರಕರಣ ಸಂಖ್ಯೆ	ಸಲ್ಲಿಸಿದ ದಿನಾಂಕ	ಕಕ್ಷಿದಾರರು	ವಿಷಯ	ವಿಲೇವಾರಿ ಮಾಡಿದ ದಿನಾಂಕ
31	RP 17/18 (Remanded)	19.12.18	ಬೆಸ್ಕಾಂ vs ಚಂದ್ರನಂದನ್	OP 169/17 ದಲ್ಲಿ ಆದೇಶದ ವಿಮರ್ಶೆ	12.03.2020/29 .12.2020
32	Complaint No 13/13 (Remanded)	6.12.13	ಕಾವೇರಿ ಹೈಡ್ರೋ ಎನರ್ಜಿ ಲಿ vs ಕೆಪಿಟಿಸಿಎಲ್ & ಇತರರು	ಅನುಸರಣೆ ರಹಿತ ಆದೇಶ ಸಂಖ್ಯೆ OP 47/10	7.1.16 / 29.12.2020
33	Complaint No 7/16	2.12.16	ಸೋಹಾಮ್ ಪಾಲ್ಘಣಿ vs ಕೆಪಿಟಿಸಿಎಲ್ & ಇತರರು	ಅನುಸರಣೆ ರಹಿತ ಆದೇಶ ಸಂಖ್ಯೆ OP 48/42, ದಿನಾಂಕ 05.12.14	29.12.2020
34	OP 48/19	16.08.19	ಮೆ ಫೋರ್ಟಮ್ ಸೋಲಾರ್ ಇಂಡಿಯಾ ಪ್ರೈ ಲಿ vs ಬೆಸ್ಕಾಂ	ಸೇಫ್‌ಗಾರ್ಡ್ ಡ್ಯೂಟಿ	31.12.2020
35	OP 49/19	16.08.19	ಮೆ ಫೋರ್ಟಮ್ ಸೋಲಾರ್ ಇಂಡಿಯಾ ಪ್ರೈ ಲಿ vs ಹೆಸ್ಕಾಂ	ಸೇಫ್‌ಗಾರ್ಡ್ ಡ್ಯೂಟಿ	31.12.2020
36	OP 50/19	16.08.19	ಮೆ ಫೋರ್ಟಮ್ ಸೋಲಾರ್ ಇಂಡಿಯಾ ಪ್ರೈ ಲಿ vs ಸೆಸ್ಕ್	ಸೇಫ್‌ಗಾರ್ಡ್ ಡ್ಯೂಟಿ	31.12.2020
37	OP 51/19	16.08.19	ಮೆ ಫೋರ್ಟಮ್ ಸೋಲಾರ್ ಇಂಡಿಯಾ ಪ್ರೈ ಲಿ vs ಬೆಸ್ಕಾಂ	ಸೇಫ್‌ಗಾರ್ಡ್ ಡ್ಯೂಟಿ	31.12.2020
38	OP 52/18	16.08.19	ಮೆ ಫೋರ್ಟಮ್ ಸೋಲಾರ್ ಇಂಡಿಯಾ ಪ್ರೈ ಲಿ vs ಮೆಸ್ಕಾಂ	ಸೇಫ್‌ಗಾರ್ಡ್ ಡ್ಯೂಟಿ	31.12.2020
39	OP 21/18	14.03.18	ಶ್ರೀ ವಿ ಕೆ ಗೋವಿಂದನ್ ನಾಯರ್ vs ಜೆಒಕೆ & ಇತರರು	ಎಸ್ ಆರ್ ಟಿ ಪಿ ವಿ	12.01.2021
40	OP 22/18	15.03.18	ಶ್ರೀ ವಿ ಕೆ ಗೋವಿಂದನ್ ನಾಯರ್ vs ಜೆಒಕೆ & ಇತರರು	ಎಸ್ ಆರ್ ಟಿ ಪಿ ವಿ	12.01.2021
41	OP 20/18	15.03.18	ಶ್ರೀಶೈಲಾ ಎಜುಕೇಷನ್ ಟ್ರಸ್ಟ್ vs ಬೆಸ್ಕಾಂ	ಎಸ್ ಆರ್ ಟಿ ಪಿ ವಿ	16.02.2021
42	OP 108/18	30.11.18	ಗ್ರೋತ್ ಸ್ಟೀಲ್ ಸೋಲಾರ್ ಪ್ರೈ ಲಿ vs ಬೆಸ್ಕಾಂ & ಇತರರು	ಅವಧಿ ವಿಸ್ತರಣೆ	16.02.2021
43	Complaint No 01/2020	22.01.20	ಮೆ ಯುರೇಖಾ ಫೋರ್ಬ್ಸ್ ಲಿ vs ಬೆಸ್ಕಾಂ & ಇತರರು	ಪಾವತಿ	16.02.2021
44	OP 53/19	28.08.19	ರಿಷಬ್ ಬಿಲ್ಡ್ ವೆಲ್ ಪ್ರೈ ಲಿ.,	ಅವಧಿ ವಿಸ್ತರಣೆ	05.03.2021
45	OP 55/20	13.11.20	ಬೆಸ್ಕಾಂ vs ವಾಲ್ವಾನ್ ರಿನಿವೆಬಲ್ ಎನರ್ಜಿ ಲಿ	ಜಕಾತಿಯ ಮರು ನಿರ್ಣಯ	05.03.2021
46	OP 188/17	09.10.17	ಕಾಂಬ್ರಿಯ ಸೋಲಾರ್ ಪ್ರೈ ಲಿ vs ಜೆಸ್ಕಾಂ & ಇತರರು	ಅವಧಿ ವಿಸ್ತರಣೆ	23.03.2021
47	OP 192/17	11.10.17	ಎ.ಎಮ್.ಆರ್ ಪವರ್ ಲಿ vs ಮೆಸ್ಕಾಂ	ವೀಲಿಂಗ್ & ಬ್ಯಾಂಕಿಂಗ್	23.03.2021
48	OP 02/2020	08.01.20	ಕೋರಮಂಡಲ್ ಶುಗರ್ಸ್ ಲಿ vs ಎಸ್.ಎಲ್.ಡಿ.ಸಿ & ಇತರರು	ಪಾವತಿ	31.03.2021
49	Complaint No 04/2020	21.09.20	ಪೆರ್ಲ ಹೈಡ್ರೋ ಪವರ್ ಪ್ರೈ ಲಿ vs ಕೆಪಿಟಿಸಿಎಲ್ & ಇತರರು	ಅನುಸರಣೆ ರಹಿತ ಮಧ್ಯಂತರ ಆದೇಶ ಸಂಖ್ಯೆ OP 54/19, ದಿನಾಂಕ 19.09.19	31.03.2021

ಇತರೆ ಆದೇಶಗಳು

ಕ್ರ. ಸಂ	ಪ್ರಕರಣ ಸಂಖ್ಯೆ	ಕಕ್ಷಿದಾರರು	ವಿಷಯ	ವಿಲೇವಾರಿ ಮಾಡಿದ ದಿನಾಂಕ
50	N/136/2019 (WP No 36427/2018	ಕಾರೆ ಪವರ್ ರಿಸೋರ್ಸಸ್ ಪ್ರೈ ಲಿ., & ಇತರರು vs ಕೆ.ಇ.ಆರ್.ಸಿ & ಇತರರು	ಕ್ರಾಸ್ ಸಬ್ಸಿಡಿ ಸರ್ ಚಾರ್ಜ್ / ವೀಲಿಂಗ್ & ಬ್ಯಾಂಕಿಂಗ್	16.02.2021
51	Y/02/16	ಎಕ್ಸೊರ ಬ್ಯುಸಿನೆಸ್ ಪಾರ್ಕ್ಸ್ ಪ್ರೈ.ಲಿ.,	ಆ.ವ 18ರ ಆರ್.ಪಿ.ಒ ದ ಅನುಸರಣೆ ರಹಿತ	02.11.2021
52	Y/02/16	ಪ್ರಕ್ಸೈರ್ ಇಂಡಿಯಾ ಪ್ರೈ.ಲಿ.,	ಆ.ವ 18ರ ಆರ್.ಪಿ.ಒ ದ ಅನುಸರಣೆ ರಹಿತ	02.11.2021
53	Y/02/16	ಎಮ್.ಎಸ್.ಪಿ.ಎಲ್ ಲಿ.,	ಆ.ವ 18ರ ಆರ್.ಪಿ.ಒ ದ ಅನುಸರಣೆ ರಹಿತ	30.03.2021
54	Y/02/16	ಸೌಥ್ ವೆಸ್ಟರ್ನ್ ರೈಲ್ವೆ	ಆ.ವ 18ರ ಆರ್.ಪಿ.ಒ ದ ಅನುಸರಣೆ ರಹಿತ	30.03.2021

ಮಧ್ಯಂತರ ಆದೇಶಗಳು

ಕ್ರ. ಸಂ	ಪ್ರಕರಣ ಸಂಖ್ಯೆ	ದಿನಾಂಕ	ಕಕ್ಷಿದಾರರು	ವಿಷಯ	ವಿಲೇವಾರಿ ಮಾಡಿದ ದಿನಾಂಕ
1	OP 02/20	08.01.2020	ಕೋರಮಂಡಲ್ ಶುಗರ್ಸ್ ಲಿ vs ಎಸ್.ಎಲ್.ಡಿ.ಸಿ & ಇತರರು	ಪಾವತಿ	04.08.2020
2	OP 01/20	03.01.2020	ಗ್ರೀನ್ ಇನ್ಫ್ರಾ ವಿಂಡ್ ಪವರ್ ಜೆನರೇಷನ್ ಲಿ vs ಮೆಸ್ಕಾಂ	ಕ್ಯಾಪ್ಟೀವ್ ಸ್ಟೇಟಸ್	25.08.2020
3	OP 34/20	21.08.2020	ಕೆ.ಆರ್.ಇ.ಡಿ.ಎಲ್ vs ಬೆಸ್ಕಾಂ & ಇತರರು	ಅವಧಿ ವಿಸ್ತರಣೆ	22.10.2020
4	OP 42/20	21.09.2020	ಶಾಮನೂರ್ ಶುಗರ್ಸ್ ಲಿ vs ಕೆಪಿಟಿಸಿಎಲ್	ಒ&ಎಂ ಚಾರ್ಜಸ್	22.10.2020
5	Complaint No 05/20	18.09.2020	ಎಮ್ಮಿ ಸೋಲಾರ್ ಸಿಸ್ಟಮ್ಸ್ ಪ್ರೈ ಲಿ vs ಬೆಸ್ಕಾಂ & ಇತರರು	ಅನುಸರಣೆ ರಹಿತ ಮಧ್ಯಂತರ ಆದೇಶ ಸಂಖ್ಯೆ OP 25/19, ದಿನಾಂಕ 14.01.20	22.10.2020
6	OP 42/20	21.09.2020	ಶಾಮನೂರ್ ಶುಗರ್ಸ್ ಲಿ vs ಕೆಪಿಟಿಸಿಎಲ್	ಒ&ಎಂ ಚಾರ್ಜಸ್	19.11.2020
7	OP 02/20	08.01.2020	ಕೋರಮಂಡಲ್ ಶುಗರ್ಸ್ ಲಿ vs ಎಸ್.ಎಲ್.ಡಿ.ಸಿ & ಇತರರು	ಪಾವತಿ	18.12.2020
8	OP 03/21		ಗ್ರೀನ್ ಇನ್ಫ್ರಾ ವಿಂಡ್ ಪವರ್ ಜೆನರೇಷನ್ ಲಿ & ಇತರರು vs ಜೆಸ್ಕಾಂ	ಕ್ಯಾಪ್ಟೀವ್ ಸ್ಟೇಟಸ್	16.03.2021

ವಿದ್ಯುಚ್ಛಕ್ತಿ ಲೋಕಪಾಲರು

ಮತ್ತು

ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ

13. ಗ್ರಾಹಕರ ಕುಂದು ಕೊರತೆ ನಿವಾರಣೆ

1) ವಿದ್ಯುಚ್ಛಕ್ತಿ ಲೋಕಪಾಲ ರವರ ಕಾರ್ಯಚಟುವಟಿಕೆಗಳು

2003 ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 42 (6) ರಡಿಯಲ್ಲಿನ ಉಪಬಂಧಗಳ ಪ್ರಕಾರ ವಿದ್ಯುಚ್ಛಕ್ತಿ ಲೋಕಪಾಲರವರನ್ನು ಆಯೋಗವು ನೇಮಿಸಿದೆ. ಜಿಲ್ಲಾ ಗ್ರಾಹಕರ ಕುಂದುಕೊರತೆ ಪರಿಹಾರ ವೇದಿಕೆಯ (ಸಿಜಿಆರ್ ಎಫ್) ಮಟ್ಟದಲ್ಲಿ ಪರಿಹಾರವನ್ನು ಪಡೆಯದ ಗ್ರಾಹಕರ ಕುಂದುಕೊರತೆಗಳಿಗೆ ಲೋಕಪಾಲರು ಸೂಕ್ತ ಪರಿಹಾರವನ್ನು ಒದಗಿಸುತ್ತಾರೆ.

2020-21 ರ ಸಾಲಿನಲ್ಲಿ 26 ಪ್ರಕರಣಗಳು ದಾಖಲಾಗಿದ್ದಲ್ಲದೆ, ಹಿಂದಿನ ವರ್ಷದ 07 ಪ್ರಕರಣಗಳನ್ನು ಈ ವರ್ಷಕ್ಕೆ ಮುಂದುವರೆಸಲಾಗಿ ಒಟ್ಟು 33 ಪ್ರಕರಣಗಳು ಈ ವರ್ಷದಲ್ಲಿ ಪರಿಗಣಿಸಲ್ಪಟ್ಟಿವೆ. ಇವುಗಳಲ್ಲಿ ಲೋಕಪಾಲರವರು ಪ್ರಸಕ್ತ ವರ್ಷ 29 ಪ್ರಕರಣಗಳಲ್ಲಿ ವಿಚಾರಣೆ ಮಾಡಿ, ವಿಲೇವಾರಿ ಮಾಡಿದ್ದು, ಇನ್ನೂ 4 ಪ್ರಕರಣಗಳು ಬಾಕಿ ಇರುತ್ತವೆ.

ಲೋಕಪಾಲರವರಿಂದ ಇತ್ಯರ್ಥಗೊಳಿಸಲ್ಪಟ್ಟ ಪ್ರಮುಖ ವಿಷಯಗಳು ಮಾಪಕದ ತಪ್ಪು ಓದುವಿಕೆ, ಠೇವಣಿಗಳನ್ನು ಹಿಂತಿರುಗಿಸುವಲ್ಲಿ ವಿಳಂಬ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿದ ಅರ್ಜಿ ವಿಲೇವಾರಿಯಲ್ಲಿ ವಿಳಂಬ ಮತ್ತು ಹಿಂಬಿಲ್ಲಿನ ಶುಲ್ಕಗಳಿಗೆ ಸಂಬಂಧಿಸಿದ್ದಾಗಿವೆ.

ಗ್ರಾಹಕ ಕುಂದುಕೊರತೆ ನಿವಾರಣಾ ವೇದಿಕೆ (ಸಿಜಿಆರ್ಎಫ್)ಗಳ ಕಾರ್ಯನಿರ್ವಹಣೆಯ ಪರಿಶೀಲನೆ:

ಅಧ್ಯಕ್ಷರನ್ನು ಒಳಗೊಂಡು ಮೂವರು ಸದಸ್ಯರನ್ನು ಒಳಗೊಂಡ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗಳನ್ನು ವಿತರಣಾ ಪರವಾನಿಗೆದಾರರ ವ್ಯಾಪ್ತಿಯ ಪ್ರತಿ ಕಂದಾಯ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ, ಪರವಾನಿಗೆದಾರರ ಕಂಪನಿಯ, ಕನಿಷ್ಠ ಅಧೀಕ್ಷಕ ಇಂಜಿನಿಯರ್ ಮಟ್ಟಕ್ಕೂ ಕಡಿಮೆಯಿಲ್ಲದ ಶ್ರೇಣಿಯ ಅಧಿಕಾರಿಯು ಸದರಿ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ. ಇತರೆ ಸದಸ್ಯರಾಗಿ ಕನಿಷ್ಠ ಕಾರ್ಯನಿರ್ವಾಹಕ ಇಂಜಿನಿಯರ್ ಮಟ್ಟಕ್ಕೂ ಕಡಿಮೆಯಿಲ್ಲದ ಶ್ರೇಣಿಯ ಒಬ್ಬ ಅಧಿಕಾರಿ ಹಾಗೂ ಆಯೋಗದಿಂದ ನೇಮಕಗೊಂಡ ವಿದ್ಯುತ್ ಕ್ಷೇತ್ರದ / ಇತರೆ ಕ್ಷೇತ್ರಗಳ ಗ್ರಾಹಕ ವ್ಯವಹಾರದ ಕುರಿತು ಅನುಭವ ಮತ್ತು ಜ್ಞಾನ ಇರುವ ಒಬ್ಬ ವ್ಯಕ್ತಿ ಇರುತ್ತಾರೆ.

ಎಸ್ಕಾಂನ ಪ್ರತಿ ಕಂದಾಯ ಜಿಲ್ಲೆಯ ಸಿಜಿಆರ್ ಎಫ್ ಸದಸ್ಯರ ವಿವರಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ:-

ಎಸ್ಕಾಂಗಳು	ಕಂದಾಯ ಜಿಲ್ಲೆಗಳ ಸಂಖ್ಯೆ	CGRF ಸದಸ್ಯರ ಸಂಖ್ಯೆ
ಬೆಸ್ಕಾಂ	8	16
ಮೆಸ್ಕಾಂ	4	8
ಹೆಸ್ಕಾಂ	7	14
ಜೆಸ್ಕಾಂ	6	12
ಸೆಸ್ಕ್	5	10
ಒಟ್ಟು	30	60

ಪ್ರತಿ ಕಂದಾಯ ಜಿಲ್ಲೆಯಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ರಚನೆ ಮಾಡಿದ್ದರಿಂದ ಗ್ರಾಹಕರು ತಮ್ಮ ಕುಂದು ಕೊರತೆಗಳನ್ನು ಜಿಲ್ಲಾ ಮಟ್ಟದಲ್ಲಿಯೇ ಅತಿ ಶೀಘ್ರವಾಗಿ ಪರಿಹರಿಸಿಕೊಳ್ಳಲು ಸಾಧ್ಯವಾಗಿರುವುದರಿಂದಾಗಿ ಕೇಂದ್ರ ಕಛೇರಿಗಳಿಗೆ ಪ್ರಯಾಣ ಮಾಡುವುದು ತಪ್ಪಿ ಅವರಿಗೆ ಸಾಕಷ್ಟು ಸಮಯ, ಪ್ರಯತ್ನ ಮತ್ತು ಹಣ ಉಳಿತಾಯವಾದಂತಾಗಿದೆ.

ಆರ್ಥಿಕ ವರ್ಷ 2020 – 21 ರಲ್ಲಿ ನಿವಾರಣೆಯಾದ ವಿದ್ಯುತ್ ಸರಬರಾಜು ಕಂಪನಿವಾರು ಕುಂದುಕೊರತೆಗಳ ವಿವರ ಈ ಕೆಳಗಿನಂತಿದೆ:

ಎಸ್ಕಾಂ ಹೆಸರು	ಆರಂಭದ ಶಿಲ್ಕು	ವರ್ಷದಲ್ಲಿ ಸಲ್ಲಿಸಿದ್ದು	ಪ್ರಸ್ತಕ ವರ್ಷದಲ್ಲಿ ವಿಲೇವಾರಿಯಾದದ್ದು	ವರ್ಷದ ಕೊನೆಯಲ್ಲಿ ಉಳಿದಿದ್ದು
ಬೆಸ್ಕಾಂ	53	57	48	62
ಮೆಸ್ಕಾಂ	8	17	19	6
ಸೆಸ್ಕ್	0	13	11	2
ಹೆಸ್ಕಾಂ	7	20	22	5
ಜೆಸ್ಕಾಂ	14	19	21	12
ಒಟ್ಟು	**82**	**126**	**121**	**87**

ಆರ್ಥಿಕ ವರ್ಷ 2022 ಕ್ಕೆ ಕಾರ್ಯಕ್ರಮ

14. ಮುಂಬರುವ ವರ್ಷದ ಕಾರ್ಯಕ್ರಮಗಳು:

ಆರ್ಥಿಕ ವರ್ಷ 2022 ರಲ್ಲಿ ಈ ಕೆಳಗಿನ ಕಾರ್ಯಚಟುವಟಿಕೆಗಳನ್ನು ಯೋಜಿಸಲಾಗಿದೆ.

1. ಕ.ವಿ.ಪ್ರ.ನಿ.ನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯಪ್ರಗತಿಯ ಪುನರಾವಲೋಕನ:

ಆಯೋಗವು, ವಿಶ್ವಾಸರ್ಹ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜು, ವಿದ್ಯುತ್ ಲೆಕ್ಕ ಪರಿಶೋಧನೆ, ವಿದ್ಯುತ್ ಅಡಚಣೆಗಳು, ಅಪಘಾತಗಳು, ನಿರ್ದೇಶನಗಳ ಅನುಪಾಲನೆಗಳನ್ನು ಸೇರಿದಂತೆ ಬಿಲ್ಲಿಂಗ್ ಮತ್ತು ಹಣ ಸಂಗ್ರಹ, ವಿದ್ಯುತ್ ವಿತರಣೆಯ ಗುಣಮಟ್ಟ ಮುಂತಾದ ಮಾನದಂಡಗಳ ಕಾರ್ಯಪ್ರಗತಿಯ ಕುರಿತು ಕ.ವಿ.ಪ್ರ.ನಿ.ನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಪುನರಾವಲೋಕನವನ್ನು ಮುಂದುವರೆಸುವುದು. ಆಯೋಗವು ಈ ಬಗ್ಗೆ ತ್ರೈ£ಮಾಸಿಕ ಸಭೆಗಳನ್ನು ನಡೆಸಿ ಅಗತ್ಯವಿರುವಲ್ಲಿ ತಪ್ಪುಗಳನ್ನು ಸರಿಪಡಿಸುವ ಕ್ರಮಗಳ ಬಗ್ಗೆ ಸೂಚನೆ ನೀಡಲಿದೆ. ತನ್ನ ಕಾರ್ಯನಿರ್ವಹಣೆಯಲ್ಲಿ ತಾನು ವ್ಯವಹರಿಸುವ ಅನೇಕ ಅಂಶಗಳ ಮೇಲೆ ಉಪಯುಕ್ತ ಮಾಹಿತಿಯನ್ನು ಪಡೆಯುವುದಕ್ಕೆ ಆಯೋಗಕ್ಕೆ ಈ ಪುನರಾವಲೋಕನ ಸಭೆಗಳು ಸಾಧ್ಯವಾಗಿಸಲಿವೆ

2. ಆರ್ಥಿಕ ವರ್ಷ 21 ಮತ್ತು ಆರ್ಥಿಕ ವರ್ಷ 22 ರ ಕ.ವಿ.ಪ್ರ.ನಿ.ನಿ ಮತ್ತು ವಿತರಣಾ ಪರವಾನಿಗೆದಾರರ ಬಂಡವಾಳ ಹೂಡಿಕೆಗಳ ಸಾರ್ಥಕತೆಯ ಪರೀಕ್ಷೆ:

ಆಯೋಗವು, ಈ ಹಿಂದೆ ತಾನು ಹೊರಡಿಸಿದ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಬಂಡವಾಳ ಹೂಡಿಕೆಗಳ ಸಾರ್ಥಕತೆ ಪರೀಕ್ಷೆ ನಡೆಸಲಿದೆ. ಆರ್ಥಿಕ ವರ್ಷ 2019 ಮತ್ತು ಆರ್ಥಿಕ ವರ್ಷ 2020 ರಲ್ಲಿ ನ ಬಂಡವಾಳ ಹೂಡಿಕೆಗಳು ಮತ್ತು ಸಾಮಾಗ್ರಿಗಳ ಖರೀದಿಯ ಸಾರ್ಥಕತೆ ಪರೀಕ್ಷೆಯನ್ನು ಆ.ವ. 2021 ರಲ್ಲಿ ಪೂರ್ಣಗೊಳಿಸಲಾಗಿದೆ. ಆದುದರಿಂದ ಆ.ವ. 2021 ಮತ್ತು ಆ.ವ. 2022 ರ ಬಂಡವಾಳ ಹೂಡಿಕೆಗಳ ಸಾರ್ಥಕತೆ ಪರೀಕ್ಷೆಯನ್ನು ಆ.ವ. 2022 ರಲ್ಲಿ ಪ್ರಾರಂಭಿಸಲಾಗುವುದು.

3. ರಾಜ್ಯದಲ್ಲಿನ ಪ್ರಸರಣ ಮತ್ತು ವಿತರಣಾ ಪರವಾನಿಗೆದಾರರಿಗೆ ಆರ್ಥಿಕ ವರ್ಷ 19 ರ ಎಪಿಆರ್ ಮತ್ತು ಮುಂದಿನ ನಿಯಂತ್ರಣ ಅವಧಿ (ಆರ್ಥಿಕ ವರ್ಷ 2023 ರಿಂದ ಆರ್ಥಿಕ ವರ್ಷ 2025 ಕ್ಕೆ) ವಾರ್ಷಿಕ ಆದಾಯ ಅವಶ್ಯಕತೆ (ಎಆರ್ಆರ್) ನಿರ್ಧರಣೆ ಮತ್ತು ವಿತರಣಾ ಪರವಾನಿಗೆದಾರರಿಗೆ ಆ.ವ. 2023 ಕ್ಕೆ ಚಿಲ್ಲರೆ ವಿದ್ಯುತ್ ಪೂರ್ಥಕೆ ದರದ ಪರಿಷ್ಕರಣೆ:

ಆಯೋಗವು ಆರ್ಥಿಕ ವರ್ಷ 2021 ರ ವಾರ್ಷಿಕ ಕಾರ್ಯಸಾಧನೆ ಪುನರಾವಲೋಕನದ ಜೊತೆಗೆ ಆರ್ಥಿಕ ವರ್ಷ 2023 ರಿಂದ ಆರ್ಥಿಕ ವರ್ಷ 2025 ರ ಮುಂದಿನ ನಿಯಂತ್ರಣ ಅವಧಿಗೆ ಕವಿಪ್ರನಿನಿ / ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಆರ್.ಇ.ಸಿ.ಎಸ್. ಮತ್ತು ಎಸ್ಇಝಡ್ಗಳ ವಾರ್ಷಿಕ ಆದಾಯ ಅವಶ್ಯಕತೆ (ಎ.ಆರ್.ಆರ್) ನಿರ್ಧರಣೆ ಮಾಡಲಿದೆ.

ತದನಂತರ, ಅನುಮೋದಿಸಿದ, ಪರಿಷ್ಕರಿಸಿದ ವಾ.ಆ.ಅ ಆಧಾರದ ಮೇಲೆ, ಆ.ವ.23 ಕ್ಕೆ ಕ.ವಿ.ಪ್ರ.ನಿ.ನಿ ಯ ಪ್ರಸರಣದರ ಮತ್ತು ವಿತರಣಾ ಪರವಾನಿಗೆದಾರರ ಚಿಲ್ಲರೆ ಸರಬರಾಜು ವಿದ್ಯುತ್ ದರಗಳನ್ನು ಪರಿಷ್ಕರಿಸಲಿದೆ.

4. ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳು:

2013ರ ಕ.ವಿ.ನಿ.ಆ. (ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳು) ವಿನಿಯಮಗಳ ಪ್ರಕಾರ, ಆಯೋಗವು ಆರ್ಥಿಕ ವರ್ಷ 2021-22 ರ ಪ್ರತಿ ತ್ರೈಮಾಸಿಕಕ್ಕೆ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳನ್ನು ನಿರ್ಧರಣೆ ಮಾಡಲಿದೆ.

5. ಆ.ವ. 22 ಕ್ಕೆ ಸೌರಶಕ್ತಿ ಮತ್ತು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕಗಳಿಗೆ ಹೊಸದಾಗಿ ದರ ನಿರ್ಧರಣೆ ಮತ್ತು ನವೀಕರಿಸಬಹುದಾದ ವಿದ್ಯುತ್ ಪಿಪಿಎಗಳ ಅನುಮೋದನೆ:

ಆಯೋಗವು, ಹೊಸ ಬಂಡವಾಳ ವೆಚ್ಚ ಹಾಗೂ ಇತರೆ ವೆಚ್ಚದ ಮಾನದಂಡಗಳ ಆಧಾರದ ಮೇಲೆ, ಅಗತ್ಯವಿದ್ದಲ್ಲಿ, ಸೌರಶಕ್ತಿ ಮತ್ತು ತ್ಯಾಜ್ಯದಿಂದ ಉತ್ಪಾದಿಸುವ ವಿದ್ಯುತ್ ಯೋಜನೆಗಳ ಹೊಸ ದರ ನಿರ್ಧರಣೆಗೆ ಅಗತ್ಯ ನಡವಳಿಗಳನ್ನು ಪ್ರಾರಂಭಿಸಿ, ಸಂಬಂಧಿಸಿದ ಪಿಪಿಎಗಳನ್ನೂ ಅನುಮೋದಿಸುವ ಕಾರ್ಯ ನಿರ್ವಹಿಸುವುದು.

6. ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳಿಗೆ (ಸಿಓಎಸ್) ತಿದ್ದುಪಡಿಗಳು:

ಗ್ರಾಹಕರಿಗೆ ವಿದ್ಯುತ್ ಸರಬರಾಜು ವಿಸ್ತರಣೆ ಸಂಧರ್ಭದಲ್ಲಿ ಅಗತ್ಯವೆನಿಸಿದಲ್ಲಿ ಗ್ರಾಹಕರ ಹಾಗÀÆ ಪರವಾನಿಗೆದಾರರ ಕೋರಿಕೆಯನ್ನು ಪರಿಗಣಿಸಿ, ಆಯೋಗವು, ಸಿಓಎಸ್‌ನ ಹಲವು ಖಂಡಗಳಿಗೆ ಸೂಕ್ತವಾದ ತಿದ್ದುಪಡಿ ಮಾಡಲು ನಡವಳಿಗಳನ್ನು ಆರಂಭಿಸಲಿದೆ.

7. ಕವಿನಿಆ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚ ವಸೂಲಿ) ವಿನಿಯಮಗಳಿಗೆ ತಿದ್ದುಪಡಿಗಳು.

ಆಯೋಗವು ಗ್ರಾಹಕರ ಹಾಗೂ ಪರವಾನಿಗೆದಾರರಿಂದ ಸ್ವೀಕರಿಸಿದ ಕೋರಿಕೆಗಳನ್ನು ಪರಿಗಣಿಸಿ ಈ ವಿನಿಯಮಗಳ ಹಲವು ಖಂಡಗಳಿಗೆ ಸೂಕ್ತವಾದ ತಿದ್ದುಪಡಿ ಮಾಡಲು ನಡವಳಿಗಳನ್ನು ಆರಂಭಿಸಲಿದೆ.

8. ರಾಜ್ಯದಲ್ಲಿನ ಹೊಸ ಶಾಖೋತ್ಪನ್ನ ಕೇಂದ್ರಗಳಿಗೆ ಸಂಬಂಧಿಸಿದಂತೆ ದರ ಪರಿಷ್ಕರಣೆ ಹಾಗೂ ಪಿಪಿಎಗಳ ಅನುಮೋದನೆ.

ಆಯೋಗವು, ಅಗತ್ಯ ಪ್ರಕ್ರಿಯೆಯ ನಂತರ, ರಾಜ್ಯದಲ್ಲಿನ ಹೊಸ ಶಾಖೋತ್ಪನ್ನ ಕೇಂದ್ರಗಳಿಗೆ ಸಂಬಂಧಿಸಿದಂತೆ, ದರ ಪರಿಷ್ಕರಣೆ ಹಾಗೂ ಪಿಪಿಎಗಳ ಅನುಮೋದನೆಯನ್ನು ಅಂತಿಮಗೊಳಿಸಲಿದೆ.

9. ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ ಮೇಲೆ ವೀಲಿಂಗ್ ದರಗಳು ಮತ್ತು ಬ್ಯಾಂಕಿಂಗ್ ಸೌಲಭ್ಯದ ಅಂತಿಮಗೊಳಿಸುವಿಕೆ.
10. ಆ.ವ 22ಕ್ಕೆ ಪವನ ಯೋಜನೆಗಳಿಗೆ ಮಿತಿ ದರದ ನಿರ್ಧರಣೆ.

11. ಆರ್ಥಿಕ ವರ್ಷ 2023 ರ ಎಪಿಪಿಸಿಯ ಅಧಿಸೂಚನೆ.
12. ಹೊಸ ಎನ್‌ಇಪಿ ಮತ್ತು ದರ ನೀತಿಯ ಪ್ರಕಟಣೆಯ ಪರಿಣಾಮವಾಗಿ ಅಗತ್ಯವಿದ್ದರೆ ಒಎ ಮತ್ತು ಆರ್ ಇ ವಿನಿಯಮಗಳಿಗೆ ತಿದ್ದುಪಡಿ.

13. ಎಸ್.ಎಲ್.ಡಿ.ಸಿಗೆ ಮುನ್ಸೂಚನೆಗಳನ್ನು ಒದಗಿಸಲು ಮತ್ತು ದತ್ತಾಂಶವನ್ನು ನಿಗದಿಪಡಿಸಲು ಪ್ರಮಾಣಿತ ಕಾರ್ಯವಿಧಾನ ಮತ್ತು ಅಗತ್ಯ ಸ್ವರೂಪಗಳ ಅನುಮೋದನೆ:

ಆಯೋಗವು ಕೆಇಆರ್ ಸಿಯ (ಮುನ್ಸೂಚನೆ, ವೇಳಾಪಟ್ಟಿ, ವಿಚಲನ ಇತ್ಯರ್ಥ ಮತ್ತು ಪವನ ಮತ್ತು ಸೌರ ಉತ್ಪಾದನಾ ಮೂಲಗಳಿಗೆ ಸಂಬಂಧಿತ ವಿಷಯಗಳು) ನಿಬಂಧನೆಗಳು, 2015 ರ ಪರಿಚ್ಛೇದ 5.4 ರ ಅನುಸಾರ, ಎಸ್ ಎಲ್ ಡಿಸಿಗೆ ಮುನ್ಸೂಚನೆಗಳನ್ನು ಒದಗಿಸಲು ಮತ್ತು ದತ್ತಾಂಶವನ್ನು ನಿಗದಿಪಡಿಸಲು ಪ್ರಮಾಣಿತ ಕಾರ್ಯವಿಧಾನ ಮತ್ತು ಅಗತ್ಯ ಸ್ವರೂಪಗಳನ್ನು ಅನುಮೋದಿಸುವ ಪ್ರಕ್ರಿಯೆಯಲ್ಲಿದೆ.

14. ಕರ್ನಾಟಕ ರಾಜ್ಯದಲ್ಲಿ ಕ್ಯಾಪ್ಟಿವ್ ಜನರೇಟರ್ ಗಳು / ಗ್ರಾಹಕರ ಕ್ಯಾಪ್ಟಿವ್ ಸ್ಥಿತಿಯ ಪರಿಶೀಲನೆಗಾಗಿ ಕಾರ್ಯವಿಧಾನ / ಮಾರ್ಗಸೂಚಿ:

ವಿದ್ಯುಚ್ಛಕ್ತಿ ಅಧಿನಿಯಮ 2003 ರ ಪರಿಚ್ಛೇದ 42 ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಪ್ರಯೋಜನಗಳನ್ನು ವಿಸ್ತರಿಸಲು, ESCOM ಗಳಿಂದ ಕ್ಯಾಪ್ಟಿವ್ ಜನರೇಟರ್‌ಗಳು / ಗ್ರಾಹಕರ ಕ್ಯಾಪ್ಟಿವ್ ಸ್ಥಿತಿಯನ್ನು ಪರಿಶೀಲಿಸಲು ಆಯೋಗವು ಕರಡು ಕಾರ್ಯವಿಧಾನ / ಮಾರ್ಗಸೂಚಿಯನ್ನು ನೀಡುವ ಪ್ರಕ್ರಿಯೆಯಲ್ಲಿದೆ.


15. ರಾಜ್ಯದೊಳಗಿನ ಪ್ರಸರಣ ವ್ಯವಸ್ಥೆಯ ಬಳಕೆಗೆ ಸಂಪರ್ಕ ಒಪ್ಪಂದ (ಐ.ಎನ್.ಎಸ್.ಟಿ.ಎಸ್):

ಕರ್ನಾಟಕ ವಿದ್ಯುತ್ ಗ್ರಿಡ್ ಕೋಡ್ (ಕೆಇಜಿಸಿ), 2015 ರ ಸೆಕ್ಷನ್ 5.5 (2) ರ ಪ್ರಕಾರ ಕೆಪಿಟಿಸಿಎಲ್ ಸಲ್ಲಿಸಿದಂತೆ 15. ರಾಜ್ಯದೊಳಗಿನ ಪ್ರಸರಣ ವ್ಯವಸ್ಥೆಯ (ಐಎನ್ಎಸ್‌ಟಿಎಸ್) ಬಳಕೆಗಾಗಿ ಕರಡು ಸಂಪರ್ಕ ಒಪ್ಪಂದವನ್ನು ಆಯೋಗ ವಿಶ್ಲೇಷಿಸಿದೆ ಮತ್ತು ಕರಡು ಒಪ್ಪಂದದ ಕುರಿತು ಪ್ರತಿಕ್ರಿಯೆಗಳನ್ನು ಆಹ್ವಾನಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಕಾನೂನಿನ ಸೂಕ್ತ ಪ್ರಕ್ರಿಯೆಯ ನಂತರ, ಆರ್ಥಿಕ ವರ್ಷ 2022 ರ ಸಮಯದಲ್ಲಿ ಇದನ್ನು ಅನುಮೋದಿಸಲಾಗುವುದು.

16. ಕೆಇಆರ್ ಸಿ (ಉತ್ಪಾದನಾ ದರವನ್ನು ನಿರ್ಧರಿಸುವ ನಿಯಮಗಳು ಮತ್ತು ಷರತ್ತುಗಳು) ವಿನಿಯಮಗಳು, 2019 ರ ಅಂತಿಮಗೊಳಿಸುವ ಪ್ರಕ್ರಿಯೆ.
17. ಕೆಪಿಸಿಎಲ್ ನ ವೈಟಿಪಿಎಸ್ ಉತ್ಪಾದನಾ ಕೇಂದ್ರದ ದರ ನಿರ್ಣಯದ ಅಂತಿಮಗೊಳಿಸುವ ಪ್ರಕ್ರಿಯೆ.

ಅನುಬಂಧ – 1

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಕ್ಷೆ



ಅನುಬಂಧ - II

31.03.2021 ರಲ್ಲಿದ್ದಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ರಾಜ್ಯ ಸಲಹಾ ಸಮಿತಿಯ ಸದಸ್ಯರ ಪಟ್ಟಿ,

ಪದನಿಮಿತ್ತ ಸದಸ್ಯರು

1. ಅಧ್ಯಕ್ಷರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
2. ಸದಸ್ಯರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
3. ಸದಸ್ಯರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
4. ಸರಕಾರದ ಕಾರ್ಯದರ್ಶಿ, ಆಹಾರ ಹಾಗೂ ನಾಗರೀಕ ಸರಬರಾಜುಗಳು ಮತ್ತು ಗ್ರಾಹಕ ವ್ಯವಹಾರಗಳು, ಬಹುಮಹಡಿ ಕಟ್ಟಡ, ಬೆಂಗಳೂರು 560 001, ದೂರವಾಣಿ:22259024
5. ಇತರೆ ಸದಸ್ಯರು;

1	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು–560009. ದೂ:080–22214342/22244556	2	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001 ದೂ:080–22255606/22204153
3	ಡಾ. ಅಂಶು ಭರದ್ವಾಜ್ ಕಾರ್ಯನಿರ್ವಾಹಕ ನಿರ್ದೇಶಕರು, ಸಿ–ಸ್ಟೆಪ್, 18, ಮಯೂರ ರಸ್ತೆ, 10ನೇ ಕ್ರಾಸ್, ಪಾಪಣ್ಣ ಲೇಔಟ್, ನಾಗಶೆಟ್ಟಿಹಳ್ಳಿ, ಆರ.ಎಂ.ವಿ. 2ನೇ ಹಂತ, ಬೆಂಗಳೂರು – 560094.	4	ಶ್ರೀ ಪಿ.ಎಸ್. ಜಗನ್ನಾಥ ಗುಪ್ತ, 94, 17ನೇ ಮೈನ್, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560095.
5	ಅಧ್ಯಕ್ಷರು, ಕಾಸಿಯಾ, 2/106, 17ನೇ ಕ್ರಾಸ್, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು–560040. ದೂ:28362178 (ಕ), 23493353 (ಮನೆ):9845031122	6	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿ., # 39, "ಶಾಂತಿ ಗೃಹ", ಪ್ಯಾಲೇಸ್ ರಸ್ತೆ, ಬೆಂಗಳೂರು–560001 ದೂ:080–22207851
7	ಶ್ರೀ ದೀಪಕ್‌ಗಾಲ, C/o. ಹೈದರಾಬಾದ್ ಕರ್ನಾಟಕ ಎನ್ವಿರನ್‌ಮೆಂಟ್ ಅವೇರ್‌ನೆಸ್ ಮತ್ತು ಪ್ರೊಟೆಕ್ಷನ್ ಸಂಸ್ಥೆ, ನಂ.8–142, ಆಸಿಪ್‌ಗಂಜ್, ಕಲಬುರಗಿ–585101 ದೂ: 9036191000	8	ವ್ಯವಸ್ಥಾಪಕ ನಿರ್ದೇಶಕರು ಬೆಸ್ಕಾಂ, ಕೆ.ಆರ್, ಸರ್ಕಲ್, ಬೆಂಗಳೂರು–560001. ದೂ:22354929
9	ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಸ್ಟೇಷನ್ ರಸ್ತೆ, ಕಲಬುರಗಿ–585101 ದೂ:08472 256581 ಮೊ:9449597444	10	ಅಧ್ಯಕ್ಷರು, ವಿದ್ಯುತ್ ಸಮಿತಿ, ಎಫ್.ಕೆ.ಸಿ.ಸಿ.ಐ., ಪೆಡರೇಷನ್ ಹೌಸ್, ಕೆ.ಜಿ.ರಸ್ತೆ, ಬೆಂಗಳೂರು–560009. ದೂ: 080 22262355

11	ಡಾ. ಡಿ.ಪಿ. ಬಿರಾದಾರ್, ಹಿಂದಿನ ಉಪಕುಲಪತಿ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಧಾರವಾಡ.	12	ಮುಖ್ಯ ಸಿಬ್ಬಂಧಿ ವ್ಯವಸ್ಥಾಪಕ, ಕೆ.ಎಸ್.ಆರ್.ಟಿ.ಸಿ., ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು – 560027
13	ಅಧ್ಯಕ್ಷರು, ಭಾರತೀಯ ಕೈಗಾರಿಕಾ ಒಕ್ಕೂಟ, ಕರ್ನಾಟಕ ರಾಜ್ಯ ಶಾಖೆ, 1086, 12ನೇ ಮೈನ್, ಹೆಚ್.ಎ.ಎಲ್. 2ನೇ ಹಂತ, ಇಂದಿರಾನಗರ, ಬೆಂಗಳೂರು – 560008 ದೂ: 080–25276544	14	ವ್ಯವಸ್ಥಾಪಕ ನಿರ್ದೇಶಕರು ಮೆಸ್ಕಾಂ, ಕಾವೂರು ಅಡ್ಡ ರಸ್ತೆ, ಬಿಜೈ, ಮಂಗಳೂರು–575004.
15	ವ್ಯವಸ್ಥಾಪಕ ನಿರ್ದೇಶಕರು ಚಾ.ವಿ.ಸ.ನಿ.ನಿ, ನಂ.29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–570017. ದೂ – 0821– 2417104/110	16	ವ್ಯವಸ್ಥಾಪಕ ನಿರ್ದೇಶಕರು ಹೆಸ್ಕಾಂ, ಪಿ.ಬಿ.ರಸ್ತೆ, ನವನಗರ, ಹುಬ್ಬಳ್ಳಿ–580025. ದೂ – 0836 2322771 ; 9448277614

ಆಹ್ವಾನಿತರು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು–560001, ದೂ:22252373	ವ್ಯವಸ್ಥಾಪಕ ನಿದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ನಿ., ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು – 560009.
ಮುಖ್ಯ ಇಂಜಿನಿಯರ್ (ವಿ), ಕರ್ನಾಟಕ ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕೆಪಿಟಿಸಿಎಲ್, ರೇಸ್ ಕೋರ್ಸ್ ರಸ್ತೆ ಬೆಂಗಳೂರು–560009 ಮೊ:9448471411 ದೂ: (ಕ): 22267034	ತಾಂತ್ರಿಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಕೆಂಪೇಗೌಡ ರಸ್ತೆ ಬೆಂಗಳೂರು–560009 ದೂ:22229496

****